ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 13 ಮಂಗಳವಾರ 2023

ಸಂಪುಟ: 44 | ಸಂಚಿಕೆ: 58 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣ: ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ತಾತ್ಕಾಲಿಕ ರಿಲೀಫ್

ಸಿಬಿಐಗೆ ಹೈಕೋರ್ಟ್ ನೋಟಿಸ್



ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಡಿಸಿಎಂ ಡಿ.ಕೆ ಶಿವಕುಮಾರ್ ಅವರಿಗೆ ಹೈಕೋರ್ಟ್‌ನಿಂದ ತಾತ್ಕಾಲಿಕ ರಿಲೀಫ್ ಸಿಕ್ಕಿದೆ. ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ರಾಜ್ಯ ಸರ್ಕಾರ ನೀಡಿದ್ದ ಕ್ರಮವನ್ನು ಎತ್ತಿ ಹಿಡಿದಿದ್ದ ಹೈಕೋರ್ಟ್ ಏಕ ಸದಸ್ಯ ಪೀಠದ ಆದೇಶಕ್ಕೆ ವಿಭಾಗೀಯ ಪೀಠ ಮಧ್ಯಂತರ ತಡೆಯಾಜ್ಞೆ ನೀಡಿದೆ. ತಮ್ಮ ವಿರುದ್ಧ ಸಿಬಿಐ ತನಿಖೆಗೆ ಈ ಹಿಂದಿನ ಸರ್ಕಾರ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಡಿ.ಕೆ.ಶಿವಕುಮಾರ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅಂದು ವಿಚಾರಣೆ ನಡೆಸಿದ್ದ ಏಕ ಸದಸ್ಯ ಪೀಠವು ಅರ್ಜಿಯನ್ನು ವಜಾಗೊಳಿಸಿ, ರಾಜ್ಯ ಸರ್ಕಾರದ ಕ್ರಮವನ್ನು ಎತ್ತಿ ಹಿಡಿದಿತ್ತು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಟೋಲ್ ದರ ಶೇ.22ರಷ್ಟು ಹೆಚ್ಚಳ!



ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಟೋಲ್ ದರ ಶೇಕಡ 22ರಷ್ಟು ಹೆಚ್ಚಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆದೇಶ ಹೊರಡಿಸಿದೆ. ಈ ಆದೇಶ ಜೂನ್ 1ರಿಂದಲೇ ಅನ್ವಯವಾಗುತ್ತಿದ್ದು ಫಾಸ್ಟ್ ಟ್ಯಾಗ್ ಹಿನ್ನೆಲೆಯಲ್ಲಿ ಟೋಲ್ ದರ ಹೆಚ್ಚಳ ಜನರ ಗಮನಕ್ಕೆ ಬಂದಿರಲಿಲ್ಲ. ಇನ್ನು ಈ ಹಿಂದೆ ಏಪ್ರಿಲ್ 1ರಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಟೋಲ್ ದರವನ್ನು ಹೆಚ್ಚಿಸಿತ್ತು. ಇದನ್ನು ವಿರೋಧಿಸಿ ಜನರು ಪ್ರತಿಭಟನೆ ನಡೆಸಿದ್ದರಿಂದ ದರ ಹೆಚ್ಚಳ ಆದೇಶವನ್ನು ಹಿಂಪಡೆಯಲಾಗಿತ್ತು.

ಟೋಲ್ ದರ ಹೀಗಿದೆ: ಕಾರು, ವ್ಯಾನ್, ಜೀಪ್‌ಗಳ ಏಕಮುಖ ಸಂಚಾರಕ್ಕೆ 135 ರಿಂದ 165 ರೂಗೆ ಏರಿಕೆ ಮಾಡಲಾಗಿದೆ. ಅಂದರೆ, ಬರೋಬ್ಬರಿ 30 ರೂಪಾಯಿ ಹೆಚ್ಚಳ ಮಾಡಲಾಗಿದೆ.

ಲಘು ವಾಹನಗಳು, ಮಿನಿ ಬಸ್‌ಗಳ ಏಕಮುಖ ಟೋಲ್ 220 ರಿಂದ 270 ರೂಗೆ ಏರಿಕೆ ಮಾಡಲಾಗಿದ್ದು 50 ರೂ. ಹೆಚ್ಚಳ ಮಾಡಿದಂತೆ ಆಗಿದೆ.

ಇನ್ನು ಟ್ರಕ್, ಬಸ್, 2 ಆಕ್ಸೆಲ್ ವಾಹನಗಳ ಏಕಮುಖ ಸಂಚಾರಕ್ಕೆ 460 ರಿಂದ 565ಕ್ಕೆ ಏರಿಕೆ ಮಾಡಲಾಗಿದ್ದು, ಬರೋಬ್ಬರಿ 105 ರೂಪಾಯಿಯನ್ನು ಹೆಚ್ಚಳ ಮಾಡಲಾಗಿದೆ. 3 ಆಕ್ಸೆಲ್ ವಾಣಿಜ್ಯ ವಾಹನಗಳ ಏಕಮುಖ ಸಂಚಾರವನ್ನು 500ರಿಂದ 615 ರೂಪಾಯಿಗೆ ಏರಿಕೆ ▶ 8ನೇ ಪುಟಕ್ಕೆ

ರಾಜ್ಯದಲ್ಲಿ ಎಲ್ಲೇ ಕುಡಿಯುವ ನೀರಿನ ಸಮಸ್ಯೆ ಉಂಟಾದರೆ ಅದಕ್ಕೆ

ಜಿಪಂ ಸಿಇಒ ಹೊಣೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟುನಿಟ್ಟಿನ ಎಚ್ಚರಿಕೆ
- ಜಿಲ್ಲಾಡಳಿತದೊಂದಿಗೆ ವೀಡಿಯೋ ಸಂವಾದ
- ಸಮರ್ಪಕ ನೀರು ಪೂರೈಕೆ ಮಾಡಿ; ಕಲುಷಿತ ನೀರು ಸರಬರಾಜಾಗದಂತೆ ನಿಗಾ ವಹಿಸಿ
- ರಾಜ್ಯದಲ್ಲಿ ಈಗಾಗಲೇ ಶೇ.67ರಷ್ಟು ಮಳೆ ಕೊರತೆ; ನೀರಿಗೆ ಹಾಹಾಕಾರ ಉಂಟಾಗದಂತೆ ಕ್ರಮ ಕೈಗೊಳ್ಳಲು ಸೂಚನೆ



ಬೆಂಗಳೂರು ಜೂ.12(ಕೆಎಂಶಿ)–ರಾಜ್ಯದ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಯಾದರೆ ಸಂಬಂಧಪಟ್ಟ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಹೊಣೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಎಚ್ಚರಿಕೆ ನೀಡಿದ್ದಾರೆ.

ವಾಡಿಕೆ ಮಳೆಗಿಂತ ಶೇ.67ರಷ್ಟು ಕೊರತೆಯಾಗಿರುವ ರಾಜ್ಯದ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಸಮಸ್ಯೆಯನ್ನು ಅರಿತ ಮುಖ್ಯಮಂತ್ರಿ ಅವರು ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾಡಳಿತಗಳೊಂದಿಗೆ ವಿಡಿಯೋ ಸಂವಾದ ನಡೆಸಿ, ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಿ. ಜಿಲ್ಲಾಡಳಿತ, ಉಸ್ತುವಾರಿ ಸಚಿವರೊಂದಿಗೆ ಸಂಪರ್ಕದಲ್ಲಿದ್ದು, ನೀರಿನ ಸಮಸ್ಯೆ ಕುರಿತು ಸರಿಯಾದ ಮಾಹಿತಿ ಒದಗಿಸಬೇಕು. ಜಾನುವಾರುಗಳಿಗೂ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಎಚ್ಚರ ವಹಿಸಬೇಕು. ಮುನ್ನೆಚ್ಚರಿಕಾ ಕ್ರಮಗಳಿಗೆ ಆದ್ಯತೆ ನೀಡಿ, ಸಮಸ್ಯೆ ಬಗೆಹರಿಸಲು ಸರ್ಕಾರ ನಿಮಗೆ ಎಲ್ಲಾ ನೆರವು ನೀಡಲಿದೆ ಎಂದರು. ಕುಡಿಯುವ ನೀರು ಒದಗಿಸುವ ಸಂದರ್ಭದಲ್ಲಿ ಆಡಳಿತಾತ್ಮಕ ಸಮಸ್ಯೆ ಮುಂದಿಟ್ಟುಕೊಳ್ಳಿ, ಮೊದಲು ಜನರ ಅಗತ್ಯ ಪೂರೈಸಿ. ನಂತರ ಪೂರೈಕೆ ಸಂದರ್ಭದಲ್ಲಿ ಕಲುಷಿತ ನೀರು ಸರಬರಾಜು ಆಗದಂತೆ ಎಚ್ಚರಿಕೆ ವಹಿಸಿ. ▶ 8ನೇ ಪುಟಕ್ಕೆ



ರಾಜ್ಯಾದ್ಯಂತ ಇಂದಿರಾ ಕ್ಯಾಂಟೀನ್ ಪುನಾರಂಭ

- ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ಗುಣಮಟ್ಟದ ಆಹಾರ ಪದಾರ್ಥ ಪೂರೈಕೆಗೆ ಸೂಚನೆ
- ಸರ್ಕಾರದಿಂದ ಇವುಗಳ ನಿರ್ವಹಣೆಗೆ ಬೆಂಗಳೂರಲ್ಲಿ ಶೇ.50, ಇತರೆಡೆ ಶೇ.70 ವೆಚ್ಚ ಭರಿಸಲು ನಿರ್ಧಾರ; ಉಳಿದಿದ್ದನ್ನು ಆಯಾಯ ಸ್ಥಳೀಯ ಸಂಸ್ಥೆಗಳೇ ಭರಿಸುವುದು



ಬೆಂಗಳೂರು ಜೂ.12(ಕೆಎಂಶಿ)– ರಾಜ್ಯಾದ್ಯಂತ ಇಂದಿರಾ ಕ್ಯಾಂಟೀನ್‌ಗಳನ್ನು ಪುನರ್ ಆರಂಭಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದರು. ಗೃಹ ಕಚೇರಿ ಕೃಷ್ಣಾದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಜಿಲ್ಲಾಡಳಿತಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಸೇರಿದಂತೆ ಮಹಾನಗರ ಪಾಲಿಕೆಗಳ ಪ್ರತಿ ವಾರ್ಡ್‌ನಲ್ಲೂ ಕ್ಯಾಂಟಿನ್ ಆರಂಭಿಸುವಂತೆ ಆದೇಶಿಸಿದ್ದೇನೆ. ಕ್ಯಾಂಟಿನ್ ಆರಂಭಕ್ಕೂ ಮುನ್ನ ಸಮಗ್ರ ವರದಿಯನ್ನು ಪಡೆದು ಅದರ ಆಧಾರದ ಮೇಲೆ ಉತ್ತಮ ಗುಣಮಟ್ಟದ ಆಹಾರ ಪೂರೈಕೆಗೆ ಕ್ರಮ ಕೈಗೊಳ್ಳಲಾಗುವುದು. ಕ್ಯಾಂಟಿನ್ ನಡೆಸುವುದರಿಂದ ಪಾಲಿಕೆಗಳ ಮೇಲೆ ಹೊರೆ ಬೀಳಬಾರದು ಎಂಬ ಉದ್ದೇಶದಿಂದ ಬೆಂಗಳೂರಲ್ಲಿ ಸರ್ಕಾರ ▶ 8ನೇ ಪುಟಕ್ಕೆ

ಐದು ಗ್ಯಾರಂಟಿಗಳಿಗೆ ಸಂಪನ್ಮೂಲ ವೃದ್ಧಿಸುವ ಸವಾಲು ಸ್ವೀಕಾರ

ಬಜೆಟ್ ಗಾತ್ರ 3.40ಲಕ್ಷ ಕೋಟಿಗೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ

- ಕಳೆದ ಫೆಬ್ರವರಿಯಲ್ಲಿ ಬಿಜೆಪಿ ಸರ್ಕಾರ ಮಂಡಿಸಿದ ಬಜೆಟ್ ಗಾತ್ರ 3.09 ಲಕ್ಷ ಕೋಟಿ
- ಜುಲೈ 7ರಂದು ಬಜೆಟ್ ಮಂಡನೆ; ಇಂದಿನಿಂದ ಬಜೆಟ್ ಪೂರ್ವಭಾವಿ ಸಭೆ

ಬೆಂಗಳೂರು ಜೂ.12 (ಕೆಎಂಶಿ)– ಅಧಿಕಾರಕ್ಕೆ ಬಂದ ಕೂಡಲೇ ರಾಜ್ಯದ ಜನರಿಗೆ 5 ಗ್ಯಾರಂಟಿಗಳನ್ನು ಕಲ್ಪಿಸಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದಕ್ಕಾಗಿ ಸಂಪನ್ಮೂಲ ವೃದ್ಧಿಸಿಕೊಳ್ಳಲು ಸರ್ಕಾರದ ಬಜೆಟ್ ಗಾತ್ರವನ್ನು 3.40 ಕೋಟಿ ರೂಗೆ ಹೆಚ್ಚಿಸಲು ಮುಂದಾಗಿದ್ದಾರೆ.

ಫೆಬ್ರವರಿಯಲ್ಲಿ ಹಿಂದಿನ ಬಿಜೆಪಿ ಸರ್ಕಾರದಿಂದ ಮಂಡನೆಯಾದ 2023–24ನೇ ಸಾಲಿನ ಬಜೆಟ್ 3.09 ಕೋಟಿ ರೂ. ಗಾತ್ರವನ್ನು ಹೊಂದಿದೆ. ಈ ಗಾತ್ರವನ್ನು ಇನ್ನು ಮೂವತ್ತು ಸಾವಿರ ಕೋಟಿ ರೂಪಾಯಿಗೆ ಹೆಚ್ಚಿಸಲು ಬಯಸಿದ್ದಾರೆ.



ಜುಲೈ 7 ರಂದು ರಾಜ್ಯ ವಿಧಾನಸಭೆಯಲ್ಲಿ ಪ್ರಸಕ್ತ ಸಾಲಿನ ಬಜೆಟ್ ಅನ್ನು ಮತ್ತೆ ಮಂಡಿಸಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಗ್ಯಾರಂಟಿಗಳಿಗೆ ಬೇಕಾದ ಹೆಚ್ಚುವರಿ ಹಣವನ್ನು ಹೊಂದಿಸಲು ವಿವಿಧ ಮಾರ್ಗೋಪಾಯಗಳನ್ನು ಹುಡುಕತೊಡಗಿದ್ದಾರೆ. ಇದೇ ಕಾರಣಕ್ಕಾಗಿ ಜೂನ್ 13 ರಿಂದ ವಿಧಾನಸೌಧದಲ್ಲಿ ಬಜೆಟ್ ಪೂರ್ವಭಾವಿ ಸಭೆಯನ್ನು ಆರಂಭಿಸಲಿರುವ ಅವರು, ವಿವಿಧ ಇಲಾಖೆಗಳ ಪ್ರಮುಖರ ಜತೆ ಚರ್ಚೆ ನಡೆಸಲಿದ್ದಾರೆ. ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿ, ಯುವನಿಧಿ ಮತ್ತು ಅನ್ನಭಾಗ್ಯ ಯೋಜನೆಗಳಿಗೆ ಐವತ್ತು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣವನ್ನು ಹೊಂದಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನ ಬಜೆಟ್ ಗಾತ್ರವನ್ನು ಹಿಗ್ಗಿಸುವ ಅನಿವಾರ್ಯತೆ ರಾಜ್ಯ ಸರ್ಕಾರಕ್ಕೆ ಉಂಟಾಗಿದೆ. ▶ 8ನೇ ಪುಟಕ್ಕೆ

ಹೊಸಮನೆ, ಹೊಸದಾಗಿ ಬಾಡಿಗೆ ಮನೆಗೆ ಬಂದವರಿಗೂ ಉಚಿತ ವಿದ್ಯುತ್ ಅನ್ವಯ

- ಇಂಧನ ಸಚಿವ ಕೆ.ಜೆ.ಜಾರ್ಜ್ ಘೋಷಣೆ
- ಇಂಥವರಿಗೆ ಮಾಸಿಕ ಸರಾಸರಿ 53 ಯೂನಿಟ್ ಜೊತೆಗೆ ಶೇ.10 ಯೂನಿಟ್ ಹೆಚ್ಚುವರಿ ವಿದ್ಯುತ್



ಬೆಂಗಳೂರು ಜೂ.12 (ಕೆಎಂಶಿ)–ಹೊಸಮನೆ ಹಾಗೂ ಹೊಸದಾಗಿ ಬಾಡಿಗೆ ಮನೆಗೆ ಬಂದವರಿಗೂ ಉಚಿತ ವಿದ್ಯುತ್ ನೀಡಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಮಾಸಿಕ ಸರಾಸರಿ 53 ಯುನಿಟ್ ಜತೆಗೆ ಶೇ.10ರಷ್ಟು ಹೆಚ್ಚುವರಿಯಾಗಿ ಅಂದರೆ ಒಟ್ಟು 58 ಯುನಿಟ್ ಉಚಿತವಾಗಿ ದೊರೆಯಲಿದೆ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹ ಜ್ಯೋತಿ ಯೋಜನೆಯಡಿ 2022ರ ಏಪ್ರಿಲ್ ಒಂದರಿಂದ 2023ರ ಮಾರ್ಚ್31ರವರೆಗಿನ ಸರಾಸರಿ ವಿದ್ಯುತ್ ಬಳಕೆ ಮಾಡಿರುವುದನ್ನು ಪರಿಗಣಿಸಲಾಗುತ್ತದೆ.

ಆದರೆ, ಹೊಸ ಮನೆ ಹಾಗೂ ಹೊಸದಾಗಿ ಬಾಡಿಗೆ ಮನೆ ಮಾಡಿಕೊಂಡವರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಈ ಸೂತ್ರ ರೂಪಿಸಲಾಗಿದೆ. ಜುಲೈ ಒಂದರಿಂದ ಉಚಿತ ವಿದ್ಯುತ್ ಯೋಜನೆ ಜಾರಿಗೊಳ್ಳಲಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ವಿದ್ಯುತ್ ದರ ಹೆಚ್ಚಳ ಮಾಡಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ. ಏಪ್ರಿಲ್ ಒಂದರಿಂದ ಅನ್ವಯವಾ



ಗುವಂತೆ ಮೇನಲ್ಲಿ ವಿದ್ಯುತ್ ದರ ಪರಿಷ್ಕರಣೆ ಮಾಡಿರುವುದರಿಂದ ನಾವು ಜಾರಿ ಮಾಡಬೇಕಾಯಿತು. 100 ಯುನಿಟ್‌ವರೆಗೆ 4.75 ರೂ., ನೂರು ಯುನಿಟ್ ನಂತರ ಪ್ರತಿ ಯುನಿಟ್‌ಗೆ 7 ರೂ ದರವನ್ನು ಕೆಇಆರ್‌ಸಿ ನಿಗದಿಪಡಿಸಿದೆ ಎಂದರು.

ಸರ್ಕಾರದ ಮಾರ್ಗಸೂಚಿಯಂತೆ ಜನಸ್ನೇಹಿ ಆಡಳಿತ ನೀಡಲು ಸಹಕರಿಸಿ

ಮೈಸೂರು ಜಿಲ್ಲೆಯ ಪ್ರಗತಿ ಪರಿಶೀಲನೆ ವೇಳೆ ಅಧಿಕಾರಿಗಳಿಗೆ ಸಚಿವ ಮಹದೇವಪ್ಪ ಲೆಫ್ಟ್–ರೈಟ್



ಮೈಸೂರಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರು, ಜೂ.12.(ಬಿಎಲ್‌ಯು)– ವಿಧಾನಸಭೆ ಚುನಾವಣೆ ಭರಾಟೆ ನಡುವೆ ಕಾರುಬಾರು ನಡೆಸುತ್ತಿದ್ದ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚುರುಕು ಮುಟ್ಟಿಸಿದ್ದಾರೆ. ಬೇಜವಾಬ್ದಾರಿ ಅಧಿಕಾರಿಗಳಿಗೆ ಲೆಫ್ಟ್–ರೈಟ್ ಕ್ಲಾಸ್ ತೆಗೆದುಕೊಂಡು, ನಿದ್ರಾವಸ್ಥೆಯಲ್ಲಿದ್ದ ಜಿಲ್ಲಾಡಳಿತವನ್ನು ಎಚ್ಚರಿಸಿದ್ದಾರೆ.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸೋಮವಾರ ನಡೆದ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಡಾ. ಮಹದೇವಪ್ಪ ಚಳಿ ಬಿಡಿಸಿದರು.

ಪ್ರತ್ಯೇಕವಾಗಿ ಒಂದೊಂದೇ ಇಲಾಖೆಯ ಅಧಿಕಾರಿಗಳನ್ನು ನಿಲ್ಲಿಸಿಕೊಂಡು ಒನ್ ಟು ಒನ್ ಪ್ರಶ್ನೆಗಳ ಸುರಿಮಳೆಗೈದರು. ಸುಮಾರು ಮೂರು ಗಂಟೆಗಳ ಕಾಲ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ಅಧಿಕಾರಿಗಳ ಕರ್ತವ್ಯ ನಿರ್ವಹಣೆ ಹೇಗೆ ಇರಬೇಕು ಹಾಗೂ ಯಾವ ರೀತಿ ಜನಸ್ನೇಹಿ ಆಡಳಿತ ನೀಡಬೇಕು ಎಂದು ನೀತಿ ಪಾಠ ಹೇಳಿದರು. ಈ ವೇಳೆ ಬಿಪಿಎಲ್ ರೇಷನ್ ಕಾರ್ಡ್ ವಿತರಣೆ ಹಾಗೂ ಆಹಾರ ಭದ್ರತೆ ಕಾಯ್ದೆಯಡಿ ಕಾರ್ಡ್ ಹಂಚಿಕೆ ಕುರಿತಂತೆ ಅಂಕಿ ಅಂಶದ ಮಾಹಿತಿ ನೀಡುವ ವೇಳೆ ತಪ್ಪಾಗಿ ವಿವರ ನೀಡಿದ ಆಹಾರ ಇಲಾಖೆಯ ಜಂಟಿ ನಿರ್ದೇಶಕಿ ಕುಮುದಗೆ ಡಾ.ಮಹದೇವಪ್ಪ ತೀವ್ರ ತರಾಟೆ ತೆಗೆದುಕೊಂಡರು. ನನಗೆ ನಿಮ್ಮ ಇಲಾಖೆಯ ಬಗ್ಗೆ ಬಹಳಷ್ಟು ಮಾಹಿತಿ ಇದೆ. ಆದರೆ ರೇಷನ್ ಕಾರ್ಡ್ ಸಂಖ್ಯೆಯ ವಿಚಾರದಲ್ಲಿ ನೀವು ನನಗೆ ತಪ್ಪು ಮಾಹಿತಿ ನೀಡುತ್ತಿದ್ದೀರಾ. ಸಿಎಂಗೆ ಹೇಳಿ ನಿಮ್ಮನ್ನು ಸಸ್ಪೆಂಡ್ ಮಾಡಿಸಬೇಕಾ ಎಂದು ಖಡಕ್ಕಾಗಿ ಡಾ. ಮಹದೇವಪ್ಪ ▶ 8ನೇ ಪುಟಕ್ಕೆ

ನಿಮಗೆ ಕೇವಲ ಒಂದೂವರೆ ವರ್ಷ; ಆದರೆ ನನಗೆ 30 ವರ್ಷದ ಅನುಭವ

ಮೈಸೂರು, ಜೂ.12. (ಬಿಎಲ್‌ಯು)– ಇಲ್ಲಿ ನಿಮಗೆ ಒಂದೂವರೆ ವರ್ಷದ ಅನುಭವ ಇದ್ದರೆ ನನಗೆ 30 ವರ್ಷದ ಅನುಭವ ಇದೆ. ಮೊದಲು ನನ್ನ ಮಾತು ಕೇಳಿ! ಹೀಗೆ ಮೈಸೂರು ನಗರ ಪಾಲಿಕೆ ಆಯುಕ್ತ ಡಾ.ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಸಲಹೆ ನೀಡಿದವರು ಶಾಸಕ ತನ್ವೀರ್ ಸೇಠ್. ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ನಡೆಸಿದ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ತನ್ವೀರ್ ಸೇಠ್, ಮೈಸೂರಿನ ಕಲುಷಿತ ನೀರು ನದಿ ಸೇರುತ್ತಿರುವ ವಿಚಾರ ಪ್ರಸ್ತಾಪ ಮಾಡಿದರು. ಟ್ರೀಟ್ ಮಾಡದ ಮೈಸೂರು ನಗರದ ಕಲುಷಿತ ನೀರು ರಿವರ್ ಬೆಡ್ ಸೇರುತ್ತಿದೆ. ಇದನ್ನು ಮೊದಲು ನಿಲ್ಲಿಸದಿದ್ದರೆ ನದಿ ಕಲುಷಿತಗೊಳ್ಳುತ್ತದೆ ಎಂದು ತನ್ವೀರ್ ಸೇಠ್ ಆತಂಕ ವ್ಯಕ್ತಪಡಿಸಿದರು. ಮಧ್ಯ ಪ್ರವೇಶಿಸಿದ ನಗರ ಪಾಲಿಕೆ ಆಯುಕ್ತ ಡಾ.ಲಕ್ಷ್ಮಿಕಾಂತ ರೆಡ್ಡಿ ಅವರು ವಿವರಣೆ ನೀಡಲು ಯತ್ನಿಸಿದರು. ಆಗ ತನ್ವೀರ್ ಸೇಠ್, ಇಲ್ಲಿ ನಿಮಗೆ ಒಂದೂವರೆ ವರ್ಷದ ಅನುಭವ ಇದ್ದರೆ ನನಗೆ 30 ವರ್ಷದ ಅನುಭವ ಇದೆ. ನನ್ನ ಮಾತು ಸ್ವಲ್ಪ ಕೇಳಿ ಎಂದು ಸಲಹೆ ನೀಡಿದರು. ಇದೇ ವೇಳೆ ತನ್ವೀರ್ ಸೇಠ್, ಕೆಲವು ಅಧಿಕಾರಿಗಳಿಗೆ ಫುಲ್ ಕ್ಲಾಸ್ ತೆಗೆದುಕೊಂಡರು. ಬರೀ ಎಸಿ ರೂಮ್‌ನಲ್ಲಿ ಕುಳಿತು ಕೆಲಸ ಮಾಡಬೇಡಿ. ಜನರ ಬಳಿ ಹೋಗಿ ಅವರ ಸಮಸ್ಯೆ ಏನೆಂದು ಅರಿಯಿರಿ ಎಂದು ಸಲಹೆ ನೀಡಿದರು.

ಸಚಿವರ ಸೀರಿಯಸ್ ಮೀಟಿಂಗ್‌ಗೂ ಅಧಿಕಾರಿಗಳು ಡೋಂಟ್ ಕೇರ್; ಚಾಟಿಂಗ್, ಟಾಕಿಂಗ್, ಸ್ಲೀಪಿಂಗ್

ಮೈಸೂರು, ಜೂ. 12(ಬಿಎಲ್‌ಯು)– ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಮೈಸೂರು ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಒಂದರ ಹಿಂದೆ ಒಂದು ಸಲಹೆ–ಸೂಚನೆ ನೀಡುತ್ತಿದ್ದರೆ, ಕೆಲವು ಅಧಿಕಾರಿಗಳು ಮೊಬೈಲ್‌ನಲ್ಲಿ ಚಾಟಿಂಗ್‌ನಲ್ಲಿ ಮಗ್ನರಾಗಿದ್ದರು. ಸಚಿವರು ಅವರ ಪಾಡಿಗೆ ಅವರು ಮಾತನಾಡಿಕೊಳ್ಳುತ್ತಿದ್ದಾರೆ ಎಂಬಂತೆ ಕೆಲ ಅಧಿಕಾರಿಗಳು ಗಾಢ ನಿದ್ರೆಗೂ ಜಾರಿದರು. ಕೆಲವರಂತೂ ಸಣ್ಣದಾಗಿ ಗೊರಕೆ ಹೊಡೆದರು. ಇನ್ನು ಕೆಲವು ಅಧಿಕಾರಿಗಳ ವರ್ತನೆ ಇದಕ್ಕಿಂತ ಭಿನ್ನವಾಗಿರಲಿಲ್ಲ. ಮೊಬೈಲ್‌ನಲ್ಲಿ ಚಾಟಿಂಗ್ ಮಾಡುತ್ತಿದ್ದರು. ಮತ್ತೆ ಕೆಲವರು ಯೂಟ್ಯೂಬ್‌ನಲ್ಲಿ ಕೆಲ ಪ್ರಸಂಗದ ದೃಶ್ಯಗಳನ್ನು ನೋಡುತ್ತಿದ್ದರು. ಅಧಿಕಾರಿಗಳ ವರ್ತನೆ ಇಷ್ಟೇ ಆಗಿದ್ದರೆ ಪರ್ವಾಗಿಲ್ಲ. ಸಚಿವ ಡಾ.ಮಹದೇವಪ್ಪ ಅವರು ಆಡಳಿತ ವಿಚಾರದಲ್ಲಿ ಟಿಪ್ಸ್ ಕೊಡುತ್ತಿದ್ದರೆ, ಅದಾವುದೂ ನಮಗೆ ಅನ್ವಯಿಸುವುದಿಲ್ಲ ಎಂಬಂತೆ ಮೊಬೈಲ್‌ನಲ್ಲಿ ಹರಟುತ್ತಿದ್ದರು. ಒಟ್ಟಾರೆ ಕೆಲವು ಅಧಿಕಾರಿಗಳು ಸಚಿವರ ವಾರ್ನಿಂಗ್‌ಗೆ ಡೋಂಟ್ ಕೇರ್ ಎಂಬಂತೆ ವರ್ತಿಸಿದರು.

'ಶಕ್ತಿ' ಯೋಜನೆ ಟೀಕಿಸಿದವರಿಗೆ ಡಾ.ಮಹದೇವಪ್ಪ ತಿರುಗೇಟು

ಮೈಸೂರು, ಜೂ.12(ಬಿಎಲ್‌ಯು)–ಗೃಹಶಕ್ತಿ ಯೋಜನೆ ಬಗ್ಗೆ ವ್ಯಂಗ್ಯ ಹಾಗೂ ಟೀಕೆ ಮಾಡುವರಿಗೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿರುಗೇಟು ನೀಡಿದ್ದಾರೆ. ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಗೂ ಮೊದಲು ಪತ್ರಕರ್ತರ ಜೊತೆ ಮಾತನಾಡಿದ ಅವರು, ಫ್ರೀ ಆಗಿ ಪ್ರಯಾಣ ಮಾಡುವ ಮಹಿಳೆಯರು ಟೀಕೆ ಮಾಡಿದವರ ಬಾಯಿ ಮುಚ್ಚಿಸುತ್ತಿದ್ದಾರೆ. ಸುಳ್ಳನ್ನು ಸತ್ಯ ಮಾಡುವ ಪ್ರಯತ್ನ ಅಲ್ಲ ಕಣ್ಣಿಗೆ ಕಾಣುವ ಯೋಜನೆ ನಮ್ಮದು ಎಂದು ಹೇಳಿದರು. ಪ್ರತಿ ವರ್ಷ 51 ಲಕ್ಷಪ್ರಯಾಣಿಕರು ರಾಜ್ಯದಲ್ಲಿ ಪ್ರಯಾಣ ಮಾಡುತ್ತಾರೆ. ಇದಕ್ಕೆ ವಾರ್ಷಿಕ 4,050 ಕೋಟಿ ವಾರ್ಷಿಕ ವೆಚ್ಚ ಆಗುತ್ತದೆ. ಮಹಿಳಾ ಪ್ರಯಾಣಿಕರಿಗೆ ಇದರಿಂದ ▶ 8ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ಆಷಾಢ ಶುಕ್ರವಾರದ ಪೂಜೆ

ಪಾಸ್‌ಗೆ 'ಗೇಟ್ ಪಾಸ್'

ಭಕ್ತರು ಮುಕ್ತವಾಗಿ ಚಾಮುಂಡೇಶ್ವರಿ ದರ್ಶನ ಮಾಡುವ ಅವಕಾಶ

ಮೈಸೂರು, ಜೂ.12 (ಬಿಎಲ್‌ಯು)– ಚಾಮುಂಡಿ ಬೆಟ್ಟದಲ್ಲಿ ಇದೇ ಜೂನ್ 23 ರಿಂದ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ಆಷಾಢ ಶುಕ್ರವಾರದ ಸಾಂಪ್ರದಾಯಿಕ ಪೂಜಾ ಕಾರ್ಯಕ್ರಮಗಳು ಆರಂಭವಾಗಲಿದೆ. ಈ ಬಾರಿ ಭಕ್ತರು ಮುಕ್ತವಾಗಿ ದೇವಿಯ ದರ್ಶನ ಪಡೆಯಲು ಮತ್ತು ಗೊಂದಲಗಳಿಗೆ ತೆರೆ ಎಳೆಯಲು ಯಾವುದೇ ರೀತಿಯ ಪಾಸ್ ನೀಡದಿರಲು ತೀರ್ಮಾನಿಸಲಾಗಿದೆ.



ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜೊತೆ ಚರ್ಚೆಯ ನಂತರ ಈ ತೀರ್ಮಾನ ಕೈಗೊಂಡರು. ಸಭೆಯಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದ ಶಾಸಕ ತನ್ವೀರ್ ಸೇಠ್, ಭಕ್ತರು ಮುಕ್ತವಾಗಿ ನಾಡದೇವತೆ ದರ್ಶನ ಮಾಡಲು ಅವಕಾಶ ಮಾಡಿಕೊಡಿ. ಯಾವುದೇ ಕಾರಣಕ್ಕೂ ಪಾಸ್ ವಿತರಣೆ ಮಾಡಬೇಡಿ. ಪಾಸ್ ಕೊಟ್ಟರೆ ಜನ ಸಾಮಾನ್ಯರಿಗೆ ತೊಂದರೆ ಆಗುತ್ತದೆ ಎಂದು ಅಭಿಪ್ರಾಯಪಟ್ಟರು.

ತನ್ವೀರ್ ಸೇಠ್ ಸಲಹೆ ಪರಿಗಣಿಸಿದ ಡಾ.ಮಹದೇವಪ್ಪ, ಯಾವುದೇ ಪಾಸ್ ನೀಡಬೇಡಿ. ಭಕ್ತರು ಯಾವ ಅಡೆತಡೆ ಇಲ್ಲದೆ ಮುಕ್ತವಾಗಿ ದೇವಿ ದರ್ಶನ ಪಡೆಯಲು ಅವಕಾಶ ಕಲ್ಪಿಸಿ ಎಂದು ಆದೇಶಿಸಿದರು.

ಜೂನ್ 23ರಿಂದ ಚಾಮುಂಡಿಬೆಟ್ಟದಲ್ಲಿ ಆಷಾಢ ಶುಕ್ರವಾರದ ಪೂಜಾ ಕಾರ್ಯ ಆರಂಭವಾಗಲಿದೆ. ಈ ವೇಳೆ ಯಾವುದೇ ಲೋಪ ಆಗಬಾರದು ಎಂದು ಅಧಿಕಾರಿಗಳಿಗೆ ಡಾ.ಮಹದೇವಪ್ಪ ಕಟ್ಟುನಿಟ್ಟಿನ ಸೂಚನೆ ನೀಡಿದರು. ಭಕ್ತರಿಗೆ ಅನುಕೂಲವಾಗುವ ಎಲ್ಲಾ ವ್ಯವಸ್ಥೆ ಮಾಡಬೇಕು. ಪ್ರತಿಯೊಬ್ಬ ▶ 8ನೇ ಪುಟಕ್ಕೆ

ಪ್ರಗತಿ ಪರಿಶೀಲನಾ ಸಭೆಗೆ ಮೇಯರ್, ಉಪಮೇಯರ್‌ಗೆ ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘನೆ ಆರೋಪ

ಮೈಸೂರು, ಜೂ.12(ಎಸ್‌ಬಿಡಿ)– ಪ್ರಗತಿ ಪರಿಶೀಲನಾ ಸಭೆಗೆ ಮೇಯರ್ ಹಾಗೂ ಉಪಮೇಯರ್ ಅವರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಅತಿಥಿಗೃಹದಲ್ಲಿ ಸೋಮವಾರ ಪ್ರಗತಿ ಪರಿಶೀಲನಾ ಸಭೆ ನಡೆಸಲಾಯಿತು. ನಗರದ ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್ ಸೇರಿದಂತೆ ಎಲ್ಲಾ ಅಧಿಕಾರಿಗಳೂ ಭಾಗವಹಿಸಿದ್ದರು. ಆದರೆ ಮೇಯರ್ ಶಿವಕುಮಾರ್ ಹಾಗೂ ಉಪಮೇಯರ್ ಜಿ.ರೂಪಾ ಅವರನ್ನೇ ಆಹ್ವಾನಿಸಿರಲಿಲ್ಲ.

ಈ ಬಗ್ಗೆ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ನನ್ನನ್ನು ಸಭೆಗೆ ಆಹ್ವಾನಿಸಿರಲಿಲ್ಲ, ಹಾಗಾಗಿ ಭಾಗಿಯಾಗಲಿಲ್ಲ. ಉಪ ಮೇಯರ್ ಅವರಿಗೂ ಆಹ್ವಾನ ನೀಡಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರು ನಗರದಲ್ಲಿ ನಡೆಯುವ ಸರ್ಕಾರಿ ಸಭೆ–ಸಮಾರಂಭಗಳಿಗೆ ಇಲ್ಲಿನ ಪ್ರಥಮ ಪ್ರಜೆ ಮೇಯರ್ ಹಾಗೂ ಉಪ ಮೇಯರ್ ಆಹ್ವಾನಿಸುವುದು ಶಿಷ್ಟಾಚಾರ. ಆದರೆ ಪ್ರಗತಿ ಪರಿಶೀಲನಾ ಸಭೆಗೆ ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಲಾಗಿದೆ. ಈ ಮೂಲಕ ಅಗೌರವ ತೋರಿದ್ದಾರೆ. ಇದು ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ತಿಳಿದಿಲ್ಲ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಸ್ಪಷ್ಟನೆ ನೀಡಬೇಕು ಎಂದು ನಗರಪಾಲಿಕೆ ಬಿಜೆಪಿ ಸದಸ್ಯ ಬಿ.ವಿ.ಮಂಜುನಾಥ್ ಆಗ್ರಹಿಸಿದ್ದಾರೆ.

ಜು.1ರಿಂದ ಕುಡಿತ ಬಿಡಿಸುವ ಉಚಿತ ಶಿಬಿರ

ಮೈಸೂರು,ಜೂ.12–ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾ ವಿದ್ಯಾಪೀಠ ಮತ್ತು ವಿವಿಧ ಸಂಘಸಂಸ್ಥೆಗಳ ಸಹಯೋಗದೊಂದಿಗೆ ಜುಲೈ 1ರಿಂದ 10ರವರೆಗೆ 15ನೆಯ ಕುಡಿತ ಬಿಡಿಸುವ ಉಚಿತ ಶಿಬಿರವನ್ನು ಹುಣಸೂರಿನ ಶ್ರೀ ಗುರುಬೂದಿ ಸ್ವಾಮಿ ಮಂಗಳ ಮಂಟಪದಲ್ಲಿ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತರು ಆದಷ್ಟು ಜಾಗ್ರತೆ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಈ ಸಾಮಾಜಿಕ ಸಮಸ್ಯೆಯ ಪರಿಹಾರದಲ್ಲಿ ಆಸಕ್ತಿಯುಳ್ಳವರು ಸಹ ಮದ್ಯವ್ಯಸನಿಗಳನ್ನು ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ, ಭಾವಚಿತ್ರ, ಅಗತ್ಯ ಬಟ್ಟೆ ಹಾಗೂ ಹೊದಿಕೆಗಳೊಡನೆ ಕರೆದುಕೊಂಡು ಬಂದು ಶಿಬಿರಕ್ಕೆ ಸೇರಿಸಬಹುದಾಗಿದೆ. ಹೆಸರನ್ನು ನೋಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಚುಂಚನಹಳ್ಳಿ ಶ್ರೀಗಳು, ಡಾ.ಎಂ.ಪಿ. ಸೋಮಶೇಖರ್ ಮತ್ತು ಎಸ್.ಬಸವರಾಜು ಅವರನ್ನು 9945494612, 9448653897 ಮತ್ತು 9886476142 ದೂರವಾಣಿಗಳಲ್ಲಿ ಸಂಪರ್ಕಿಸಲು ಕೋರಿದೆ. ಮದ್ಯಪಾನದಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದನ್ನು ಮನಗಂಡು ಸಾರ್ವಜನಿಕರಲ್ಲಿ ಈ ಸಮಸ್ಯೆಯ ಬಗ್ಗೆ ಅರಿವು ಮೂಡಿಸಿ ಮದ್ಯ ವ್ಯಸನ ಮುಕ್ತರಾಗಿಸಲು ಹಲವಾರು ವರ್ಷಗಳಿಂದ ಶಿಬಿರಗಳನ್ನು ಏರ್ಪಡಿಸಿಕೊಂಡು ಬರಲಾಗುತ್ತಿದೆ. ಇದುವರೆಗೆ 14 ಶಿಬಿರಗಳು ನಡೆದಿವೆ.

ಜೂ.15, 16ರಂದು ಸರ್ಪ ಸಂಸ್ಕಾರ, ಆಶ್ಲೇಷಾ ಬಲಿ

ಮೈಸೂರು,ಜೂ.12–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜೂ.15ರಂದು ಗುರುವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರ ಮತ್ತು ಹಾಗೂ ಜೂ.13ರಂದು ಶುಕ್ರವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರಾಂಗ ಹೋಮ ಮತ್ತು ಆಶ್ಲೇಷಾ ಬಲಿ, ಕಾಲ ಸರ್ಪದೋಷ ನಿವೃತ್ತಿ ಶಾಂತಿ, ಕುಜದೋಷ ನಿವೃತ್ತಿ ಶಾಂತಿ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೈಕುಮಾರ್ ಜಾತಕ ವಿಮರ್ಶಕರನ್ನು ಮೊ.ಸಂಖ್ಯೆ 9845183399 9342183392 ಮೂಲಕ ಸಂಪರ್ಕಿಸಬಹುದು.

ನಿಧನ



ಶ್ರೀಮತಿ ಜಯಲಕ್ಷ್ಮಿ ಬಾಯಿ ಢೌಳೆ

ಮೈಸೂರು, ಜೂ. 12– ಮೈಸೂರಿನ ಶಾರದಾದೇವಿನಗರದ ನಿವಾಸಿ ಶ್ರೀಮತಿ ಜಯಲಕ್ಷ್ಮಿ ಬಾಯಿ ಢೌಳೆ (81) ಭಾನುವಾರ (ಜೂ. 11) ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಮಕ್ಕಳಾದ ಪ್ರತಾಪ್ ರಾವ್ ಢೌಳೆ, ಪ್ರಶಾಂತ್ ರಾವ್ ಢೌಳೆ, ಆನಂದ ರಾವ್ ಢೌಳೆ, ಶಶಿಕಲಾ, ವಸಂತ ಹಾಗೂ ಅಪಾರ ಬಂಧು – ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಭಾನುವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

13.6.2023 ಮಂಗಳವಾರ, ಮಳೆ ನಕ್ಷತ್ರ: ಮೃಗಶಿರ, 08.06.2023ರಿಂದ 21.06.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಚರ್ಮ ರೋಗಿಗಳಿಗೆ ಚಿಕಿತ್ಸಾ ಶಿಬಿರ, 'ಆಯುರ್ವೇದ ಪಂಚಕರ್ಮ', ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆಯಿಂದ.

■ **ನೃತ್ಯ ವಿದ್ಯಾಪೀಠ, ಅಕಾಡೆಮಿಕ್ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್:** ತಾಯಿ ಮಗಳಾದ ಗುರು ವಿದುಷಿ ಸಿ.ಎನ್.ಅನಿತಾ ಹಾಗೂ ಜ್ಞಾನಶ್ರೀ ಕೇಸರಿ ಅವರಿಂದ ವಿಶೇಷ ಭರತನಾಟ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಪ್ರೊಫೆಸರ್ ಡಾ.ಬಿ.ಮಧು, ಉಪಸ್ಥಿತರು: ಸ್ವರ್ಣ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರಾದ ಶೋಭಾ ಬಾಲಕೃಷ್ಣ, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ ವ್ಯವಸ್ಥಾಪಕರಾದ ಜಿ.ಕೆ.ಕಮಲ, ಸಂಜೆ 5.30ರಿಂದ ಗುರು ಡಾ.ಪದ್ಮಶ್ರೀ ಅವರ ಶಿಷ್ಯ ವೃಂದ, ಕಲಾನಿಧಿ ಸ್ಕೂಲ್ ಆಫ್ ಡ್ಯಾನ್ಸ್, ಪಾಂಡವಪುರ ಅವರಿಂದ ಭರತನಾಟ್ಯ, ಸಂಜೆ 6ಕ್ಕೆ ಗುರು ವಿದುಷಿ ರಮ್ಯಾ ಎಸ್.ರಾಘವೇಂದ್ರ ಅವರ ಶಿಷ್ಯ ವೃಂದ, ನಂಜನಗೂಡು ಅವರಿಂದ ಭರತನಾಟ್ಯ, ಸಂಜೆ 6.30ಕ್ಕೆ ಮಾತೃ–ಕನ್ಯಾ–ಭರತನಾಟ್ಯ, ನಟುವಾಂಗ–ವಿದುಷಿ ಶ್ರೀಮತಿ ರಮ್ಯ ರಾಜೇಶ್, ಹಾಡುಗಾರಿಕೆ–ಕು. ನಯನ ನಾಗರಾಜ್, ಮೃದಂಗ–ವಿದ್ವಾನ್ ತುಮಕೂರು ಬಿ. ಶಶಿಶಂಕರ್, ವೇಣುವಾದನ–ವಿದ್ವಾನ್ ಭರತ್‌ರಾಜ್ ಬಿ., ಸ್ಥಳ: ಕಿರುರಂಗಮಂದಿರ, ಕಲಾಮಂದಿರದ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ –ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್. ಚಂದ್ರಶೇಖರ್, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ–ಪ್ರೊ. ಲಕ್ಷ್ಮೀನಾರಾಯಣ ಅರೋರಾ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಯವರ ರಂಗನಾಯಕಿ ಕಾಂದಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್. ಎಸ್.ಎಸ್., 8.30 ಕರೆಗೊಂದು ಗೀತೆ–ನೇರ ಫೋನ್ ಇನ್ ಕಾರ್ಯಕ್ರಮ, 10.00 ಪಿ.ರಾಜಗೋಪಾಲ್ ಮತ್ತು ಎಂ.ಎನ್.ಗಣೇಶ್–ಯುಗಳ ನಾಗಸ್ವರ ವಾದನ, 11.00 ಅಪೋಲೋ ಬಿ.ಜಿ.ಎಸ್ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ವಿಷಯ–ಹೈ ರಿಸ್ಕ್ ಪ್ರೆಗ್ನೆನ್ಸಿ, ತಜ್ಞರು–ಡಾ.ರಶ್ಮಿ, ನಡೆಸಿಕೊಡುತ್ತಾರೆ–ಬೇದ್ರೆ ಮಂಜುನಾಥ್, 11.30 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಆರ್.ಗಿರೀಶ್, 12.45 ಬೇನಾಮಿ ಆಸ್ತಿಗೆ ನಾಮಕರಣದ ಕಾನೂರು–ಮಾತನಾಡುತ್ತಾರೆ ಡಾ.ಜಿ.ಅಚ್ಯುತರಾವ್, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ವರ್ಷ ಬಿ.ಸುರೇಶ್, ಕೆ.ಎಸ್.ಅಮೂಲ್ಯಾ ಶಾಸ್ತ್ರಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಈಮನಿ ಶಂಕರ ಶಾಸ್ತ್ರಿ–ವೀಣಾವಾದನ, 4.00 ಕಥಾ ಕಾಲಕ್ಷೇಪ "ಭಕ್ತ ಕುಂಬಾರ" ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ–ಭತ್ತದ ಕೃಷಿಯಲ್ಲಿ ರೋಗಗಳ ಅನಿರ್ವಹಣೆ ಕುರಿತು ಡಾ.ವೈ.ಪಿ.ಪ್ರಸಾದ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಜಿ.ಶಾಂತಕುಮಾರ್, 9.15 ಯಕ್ಷಗಾನದ ಹಾಡುಗಳು–ಸತೀಶ್ ಶೆಟ್ಟಿ ಬೋಂದೇಲ್ ಮತ್ತು ತಂಡ, 9.30 ಎಂ.ಚಂದ್ರಶೇಖರನ್–ಹಾಡುಗಾರಿಕೆ, 10.30 ಗಮಕ ವ್ಯಾಖ್ಯಾನ–ವಾಚನ– ಪದ್ಮಾ ಶ್ರೀವತ್ಸ, ವ್ಯಾಖ್ಯಾನ–ಡಾ.ಎನ್.ಕೆ.ರಾಮಶೇಷನ್

ಮೈಸೂರಲ್ಲಿ ವಿದ್ಯಾರ್ಥಿಗಳಿಗೆ ಹೊಸ ಹಾಸ್ಟೆಲ್ ನಿರ್ಮಾಣ

ಕಾಮಗಾರಿ ಪರಿಶೀಲಿಸಿದ ಸಂಸದ ಪ್ರತಾಪ್ ಸಿಂಹ



ಮೈಸೂರು, ಜೂ. 12 (ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ 82 ಕೋಟಿ ರೂಪಾಯಿ ವೆಚ್ಚದಲ್ಲಿ ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸುವ ನೂತನ ಹಾಸ್ಟೆಲ್ ನಿರ್ಮಾಣ ಕಾಮಗಾರಿ ಆರಂಭವಾಗಿದೆ. ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆ ಎದುರಿನ ವಿಶ್ವವಿದ್ಯಾಲಯದ ಮೌಲ್ಯಮಾಪನ ಕೇಂದ್ರದ ಪಕ್ಕ ನಿರ್ಮಾಣ ಮಾಡುತ್ತಿರುವ "ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ"ದ ಕಾಮಗಾರಿಯನ್ನು ಮೈಸೂರು– ಕೊಡಗು ಸಂಸದ ಪ್ರತಾಪ್ ಸಿಂಹ ಇಂದು ಪರಿಶೀಲನೆ ನಡೆಸಿದರು.

ಸ್ಥಳದಲ್ಲಿ ಉಪಸ್ಥಿತರಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸೇರಿದಂತೆ ಇಂಜಿನಿಯರ್‌ಗಳಿಂದ ಈ ವೇಳೆ ಮಾಹಿತಿ ಪಡೆದರು. 4 ಎಕರೆ ಪ್ರದೇಶದಲ್ಲಿ 82.56 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ವಿದ್ಯಾರ್ಥಿನಿಲಯದ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವಂತೆ ಅಧಿಕಾರಿಗಳಿಗೆ ಪ್ರತಾಪ್ ಸಿಂಹ ಸೂಚಿಸಿದರು.

ನಂತರ ಮಾತನಾಡಿದ ಅವರು, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಮೈಸೂರು ಸೇರಿದಂತೆ ಕರ್ನಾಟಕದ ನಾಲ್ಕು ಕಡೆ ಈ ರೀತಿಯ ವಿದ್ಯಾರ್ಥಿನಿಲಯ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಾಯಿತು ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ 500 ಹಾಗೂ ವಿದ್ಯಾರ್ಥಿನಿಯರಿಗೆ 500 ಸೀಟ್‌ಗಳನ್ನು ಈ ಹಾಸ್ಟೆಲ್‌ನಲ್ಲಿ ಕಲ್ಪಿಸಲಾಗುವುದು. ಇದರಲ್ಲಿ 300 ಯುಜಿ ಸೀಟ್ ಹಾಗೂ 200 ಪಿಜಿ ಸೀಟ್, ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಬ್ಲಾಕ್ ನಿರ್ಮಾಣ ಮಾಡಲಾಗುತ್ತದೆ. ಮುಂದಿನ ಶೈಕ್ಷಣಿಕ ವರ್ಷದಿಂದಲೇ ಈ ವಿದ್ಯಾರ್ಥಿನಿಲಯ ಆರಂಭಿಸಲಾಗುವುದು ಎಂದು ತಿಳಿಸಿದರು. ಮೈಸೂರಿನ ಹಾಲಿ ಹಾಸ್ಟೆಲ್‌ಗಳಲ್ಲಿ ಕೆಲವು ಸಮಸ್ಯೆ ಇದೆ. ಅದರಲ್ಲೂ ಮಹಿಳಾ ಹಾಸ್ಟೆಲ್‌ನಲ್ಲಿ ಕೊಳೆತ ತರಕಾರಿ ಬಳಸಿ ಅಡುಗೆ ಮಾಡುತ್ತಾರೆ ಎಂಬ ದೂರು ಇದೆ. ಇದನ್ನು ಸರಿಪಡಿಸಲಾಗುವುದು ಎಂದು ಸಂಸದರು ಭರವಸೆ ನೀಡಿದರು.

ಬಜೆಟ್ ಅಧಿವೇಶನಕ್ಕೂ ಮುನ್ನ ವಿಪಕ್ಷ ನಾಯಕನ ಆಯ್ಕೆ

ಮೈಸೂರು, ಜೂ.12 (ಬಿಎಲ್‌ಯು)– ಮುಂಬರುವ ವಿಧಾನಸಭೆಯ ಬಜೆಟ್ ಅಧಿವೇಶನಕ್ಕೂ ಮುನ್ನ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲಾಗುವುದು ಎಂದು ಮೈಸೂರು ಮತ್ತು ಕೊಡಗು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ಮೈಸೂರಿನಲ್ಲಿ ಸೋಮವಾರ ಮಾತನಾಡಿದ ಅವರು, ಸರ್ಕಾರ ರಚನೆಯಾಗಿ ಇನ್ನೇನು ಒಂದು ತಿಂಗಳು ಕಳೆಯುತ್ತಾ ಬಂದರೂ ಬಿಜೆಪಿ ಇನ್ನು ತನ್ನ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಮಾಡದಿರುವ ವಿಷಯದಲ್ಲಿ ಈ ಪ್ರತಿಕ್ರಿಯೆ ನೀಡಿದರು.

ಜುಲೈ ಮೊದಲ ವಾರದಿಂದ ರಾಜ್ಯ ವಿಧಾನಸಭೆಯ ಬಜೆಟ್ ಅಧಿವೇಶನ ಆರಂಭವಾಗಲಿದೆ. ಇದಕ್ಕೂ ಮೊದಲು ವಿರೋಧ ಪಕ್ಷದ ನಾಯನನ್ನು ಆಯ್ಕೆ ಮಾಡಲಾಗುವುದು ಎಂದು ಹೇಳಿದರು.

ಕರ್ನಾಟಕದಲ್ಲಿ ನಿರೀಕ್ಷಿಸಿದಂತೆ ಮಳೆ ಆಗಿಲ್ಲ. ಮುಂಗಾರು ಕೂಡ ಆರಂಭವಾಗಿಲ್ಲ. ಕೆಆರ್‌ಎಸ್ ನೀರಿನ ಮಟ್ಟ 80 ಅಡಿಗೆ ಇಳಿದಿದೆ. ಈ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ಆದ್ಯತೆ ನೀಡಬೇಕಿದೆ ಎಂದು ಅಭಿಪ್ರಾಯಪಟ್ಟರು. ಮೇಕೆದಾಟು ಯೋಜನೆ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. 2012ರಲ್ಲಿ ಬಿಜೆಪಿ ಸರ್ಕಾರ ಇದನ್ನು ರೂಪಿಸಿತು. ತಮಿಳುನಾಡು ತಕರಾರು ತೆಗೆಯುತ್ತದೆ ಎಂಬ ಕಾರಣ ಮೇಕೆದಾಟು ಯೋಜನೆಯನ್ನು ಜಲ ವಿದ್ಯುತ್ ಯೋಜನೆ ಹಾಗೂ ಕುಡಿಯುವ ನೀರಿನ ಯೋಜನೆ ಆಗಿ ಪರಿವರ್ತನೆ ಮಾಡಿತು. ಮೇಕೆದಾಟು ಜಲಾಶಯ ನಿರ್ಮಾಣದ ಬಗ್ಗೆ ಈಗಿನ ಡಿಸಿಎಂ ಡಿ.ಕೆ.ಶಿವಕುಮಾರ್ ಅಂದೇ ಧ್ವನಿ ಎತ್ತಿದ್ದರು. ಹೋರಾಟ ಕೂಡ ಮಾಡಿದ್ದರು. ಈಗ ಈ ಯೋಜನೆಯನ್ನು ಅವರೇ ಅನುಷ್ಠಾನ ಮಾಡಬೇಕು ಎಂದು ಪ್ರತಾಪ್ ಸಿಂಹ ಆಗ್ರಹಿಸಿದರು. ಮೇಕೆದಾಟು ಭಾಗದಲ್ಲಿ ಅರಣ್ಯ ಇರುವ ಕಾರಣ ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಪಡೆಯಬೇಕಿದೆ. ಈ ಎಲ್ಲಾ ಕಾನೂನು ನಿಯಮ ಪಾಲಿಸಿ ಯೋಜನೆಯ ಶೀಘ್ರ ಕಾರ್ಯಗತ ಮಾಡಬೇಕು ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಕಬಿನಿಯಲ್ಲಿ ವ್ಯಾಘ್ರಗಳ ಕಾದಾಟ: ಹೆಣ್ಣು ಹುಲಿ ಸಾವು



ಮೈಸೂರು,ಜೂ.12(ಎಂಟಿವೈ)– ಕಳೆದ ಕೆಲ ತಿಂಗಳ ಹಿಂದೆ ಮರಿಗಳನ್ನು ಅಗಲಿದ್ದ ಕಬಿನಿ ಬ್ಯಾಕ್ ವಾಟರ್ ಫೀಮೆಲ್ ಹುಲಿ ಹೆಣ್ಣು ಮರಿಯೊಂದು ಬೇರೊಂದು ಹುಲಿಯೊಂದಿಗೆ ಕಾದಾಟ ನಡೆಸಿ ಮೃತಪಟ್ಟಿರುವುದು ತಡವಾಗಿ ಬೆಳಕಿಗೆ ಬಂದಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ.ಕುಪ್ಪೆ ವಲಯದ ಕಬಿನಿ–ತಡಿಕಿ ಹಳ್ಳದ ಬಳಿ ಜೂ.11ರಂದು ಸಂಜೆ ವೇಳೆ ಗಂಭೀರ ಗಾಯಗೊಂಡ ಸ್ಥಿತಿಯಲ್ಲಿ 15–18 ತಿಂಗಳ ಹೆಣ್ಣು ಹುಲಿ ಮರಿಯೊಂದರ ಕಳೇಬರ ಪತ್ತೆಯಾಗಿದೆ. ಸೋಮವಾರ ಬೆಳಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳ ತಂಡ ಹುಲಿ ಕಳೇಬರವಿದ್ದ ಸ್ಥಳಕ್ಕೆ ತೆರಳಿ ಪರಿಶೀಲಿದಾಗ, ಮೃತಪಟ್ಟಿರುವ ಹೆಣ್ಣು ಹುಲಿ ಮರಿ, ಈ ಹಿಂದೆ ಕಬಿನಿ ಬ್ಯಾಕ್ ವಾಟರ್ ಫೀಮೆಲ್ ಖ್ಯಾತಿಯ ಹುಲಿಯ ಮರಿಯೆಂಬುದು ಖಚಿತವಾಗಿದೆ.

ಹುಲಿ ಮರಿಯು ಬೇರೊಂದು ಹುಲಿಯೊಂದಿಗೆ ಕಾದಾಟ ನಡೆಸಿ ಅದರ ಎಡ ಮುಂಗಾಲಿನ ಮೂಳೆ ಮುರಿದಿದ್ದು, ಬಲ ಮುಂಗಾಲು ಹಾಗೂ ದೇಹದ ಇತರ ಭಾಗಗಳಲ್ಲಿ ಗಾಯವಾಗಿ ತೀವ್ರತರ ಜ್ವರ ಹಾಗೂ ಹಸಿವಿನಿಂದ ಮೃತಪಟ್ಟಿದೆ ಎಂದು ಅರಣ್ಯಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ದೇಹ ದೊರೆತ ಸ್ಥಳವು ಹುಲಿ ಸಂರಕ್ಷಿತ ಪ್ರದೇಶದ ಕೋರ್ ಜೋನ್ ಆಗಿರುವುದರಿಂದ ಮರಣೋತ್ತರ ಪರೀಕ್ಷೆ ಬಳಿಕ ಹುಲಿಯ ಕಳೇಬರವನ್ನು ಸುಡಲಾಗುತ್ತದೆ.

ಕಬಿನಿ ಬ್ಯಾಕ್‌ವಾಟರ್ ಫೀಮೆಲ್: ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಕಳೆದ 7–8 ವರ್ಷಗಳಿಂದ ಕಾಣಿಸಿಕೊಳ್ಳುತ್ತಿದ್ದ ಹೆಣ್ಣು ಹುಲಿ (ಬ್ಯಾಕ್ ವಾಟರ್ ಫೀಮೆಲ್)ಯ ಮರಿ ಮೃತಪಟ್ಟಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ನಾಲ್ಕು ಮರಿಗಳನ್ನು ಹೊಂದಿದ್ದ ಬ್ಯಾಕ್ ವಾಟರ್ ಫೀಮೆಲ್, ಮಾರ್ಚ್ ತಿಂಗಳಲ್ಲಿ ಗಂಭೀರವಾಗಿ ಗಾಯಗೊಂಡ ಸ್ಥಿತಿಯಲ್ಲಿ ಕಂಡುಬಂದಿತ್ತು ಬೇಟೆಯಾಡುವ ವೇಳೆ ಅಥವಾ ಮತ್ತೊಂದು ಹುಲಿಯೊಂದಿಗೆ ಕಾದಾಟ ನಡೆಸಿ ಗಾಯ ಗೊಂಡಿರಬಹುದು ಎಂದು ಶಂಕಿಸಲಾಗಿತ್ತು. ಮಾರ್ಚ್ ಮೊದಲ ವಾರ ಬಳ್ಳೆ ಹಾಡಿ ಸಮೀಪವಿರುವ ಡಿ.ಬಿ.ಕುಪ್ಪೆ ಆರ್‌ಎಫ್‌ಓ ಕಚೇರಿ ಸಮೀಪ ಹಾಡಿ ಯುವಕನೊಬ್ಬನನ್ನು ಹುಲಿಯೊಂದು ದಾಳಿ ನಡೆಸಿ ಬಲಿ ಪಡೆದಿತ್ತು 2–3 ದಿನದ ನಂತರ ಮಾಸ್ತಿಗುಡಿ ಸಮೀಪವೇ ಹಸುವೊಂದರ ಮೇಲೆ ದಾಳಿ ನಡೆಸಿತ್ತು. ಬಳಿಕ ಗಸ್ತು ತಿರುಗುತ್ತಿದ್ದ ಅರಣ್ಯ ಸಿಬ್ಬಂದಿ ಕಣ್ಣಿಗೆ ಗಂಭೀರ ಸ್ಥಿತಿಯಲ್ಲಿದ್ದ ಹುಲಿ ಬಿದ್ದಿತ್ತು. ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಅರಣ್ಯ ಪ್ರದೇಶದಲ್ಲೇ ಇದ್ದ ಬ್ಯಾಕ್ ವಾಟರ್ ಫೀಮೆಲ್ ರಕ್ಷಣೆ ಮಾಡಿ, ಕೂರ್ಗಳ್ಳಿಯ ಪುನರ್ವಸತಿ ಕೇಂದ್ರಕ್ಕೆ ತಂದು ಚಿಕಿತ್ಸೆ ಕೊಡಲಾಗುತ್ತಿದೆ.

4 ಮರಿ ಹೊಂದಿದ್ದ ಬ್ಯಾಕ್ ವಾಟರ್ ಫೀಮೆಲ್ ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ರವಾನೆಯಾದ ಬಳಿಕ ಅದರ ಮರಿಗಳ ಆರೋಗ್ಯದ ಬಗ್ಗೆ ಗಮನ ಹರಿಸಲಾಗುತ್ತಿತ್ತು. ಮರಿಗಳು ಬೇಟೆಯಾಡುವ ಸ್ವಸಾಮರ್ಥ್ಯದಿಂದ ಸ್ವತಂತ್ರವಾಗಿ ಬದುಕುತ್ತಿರುವುದನ್ನು ಅರಣ್ಯ ಸಿಬ್ಬಂದಿಗಳು ಖಚಿತಪಡಿಸಿಕೊಂಡಿದ್ದರು. ಆದರೆ, ಇದೀಗ ಒಂದು ಮರಿ ಮೃತಪಟ್ಟಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ಎಸಿಎಫ್ ಕೆ.ಎನ್.ರಂಗಸ್ವಾಮಿ, ಪಶು ವೈದ್ಯರಾದ ಡಾ.ಬಿ.ಬಿ.ಪ್ರಸನ್ನ, ಡಾ.ಎಂ.ಸಂದೀಪ್, ಡಿ.ಬಿ.ಕುಪ್ಪೆ ಆರ್‌ಎಫ್‌ಓ ಕೆ.ಎಲ್.ಮಧು, ವಾರ್ಡನ್ ಎಂ.ತನಿಕೋಡಿ, ಎನ್‌ಟಿಸಿಎ ಪ್ರತಿನಿಧಿ ಎಂ.ಜೆ.ವೆಂಕಟೇಶ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಪ್ರಾಥಮಿಕ–ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿದ ಉದ್ಯಮಿ ಹಾಗೂ ಸಮಾಜ ಸೇವಕರಾದ ಎಸ್.ಶ್ರೀಕಾಂತ್, ಕೆ.ಎಸ್. ಯೋಗೇಶ್, ಕೆ.ಎಸ್.ದಿನೇಶ್, ವಿಜಯ್‌ಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು.

ಜೂ.15, ಜಿಲ್ಲಾ ಮಟ್ಟದ ಯುವ ಉತ್ಸವ

ಮೈಸೂರು,ಜೂ.12– ಭಾರತ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯದ ಜಿಲ್ಲಾ ನೆಹರು ಯುವ ಕೇಂದ್ರದ ವತಿಯಿಂದ ಜೂ.15 ರಂದು ಬೆಳಗ್ಗೆ 10ರಿಂದ ಸಂಜೆ 5ವರೆಗೆ ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ಯುವ ಉತ್ಸವ ಕಾರ್ಯಕ್ರಮವನ್ನು ಪ್ರಧಾನಿ ಮೋದಿಯವರ ಆಶಯದಂತೆ 75ನೇ ವರ್ಷದ ಅಮೃತ ಮಹೋತ್ಸವ ಅಂಗವಾಗಿ "ಇಂಡಿಯಾ@2047" ಸಂಕಲ್ಪದೊಂದಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಯುವ ಉತ್ಸವ ಕಾರ್ಯಕ್ರಮದ ಅಂಗವಾಗಿ 15ರಿಂದ 29 ವರ್ಷದೊಳಗಿನ ಯುವಜನರಿಗೆ ಕವನ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ, ಛಾಯಾಗ್ರಹಣ ಸ್ಪರ್ಧೆ ಹಾಗೂ ಕಾರ್ಯಾಗಾರ, ಭಾಷಣ ಸ್ಪರ್ಧೆ, ಜಿಲ್ಲಾ ಸಾಂಸ್ಕೃತಿಕ ಉತ್ಸವ ಗುಂಪುಗಳಿಂದ ವಿವಿಧ ರೀತಿಯ ಸ್ಪರ್ಧಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ತಮ್ಮ ಜನ್ಮದಿನದಂದು ಸುತ್ತೂರು ಶ್ರೀ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ವಿವಿಧ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಹರಿಂದ ಅರ್ಜಿ ಆಹ್ವಾನ

ಮೈಸೂರು,ಜೂ.12– ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿನ 2023–24ನೇ ಸಾಲಿನಲ್ಲಿ ಸ್ನಾತಕ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿ ಗಳಿಂದ ಅರ್ಜಿ ಆಹ್ವಾನಿಸಿದ್ದು, ಕೊನೇ ದಿನ ಜುಲೈ 15. ಮಾಹಿತಿಗಾಗಿ https://www.musicuniversity.ac.in, registar@musicuniversity.ac.in, ದೂ.ಸಂ. 0821–2402141, 9480150826 ಸಂಪರ್ಕಿಸಿ.

ಕಲಿಸು ಫೌಂಡೇಷನ್, ವೆಟೆಸ್ಕೋ ಟೆಕ್ನಾಲಜೀಯಿಂದ ಕೀಳನಪುರ ಶಾಲೆಗೆ ಗ್ರಂಥಾಲಯ, ಹೊರಾಂಗಣ ಮೈದಾನ ಕೊಡುಗೆ

ಸುತ್ತೂರು ಶ್ರೀ, ಯದುವೀರರಿಂದ ಉದ್ಘಾಟನೆ; ಖಾಸಗಿಯವರು ಕೈಜೋಡಿಸಿದರೆ ಸರ್ಕಾರಿ ಶಾಲೆಗಳಲ್ಲಿ ಮಹತ್ತರ ಸುಧಾರಣೆ

ಮೈಸೂರು, ಜೂ.12 (ಎಸ್‌ಬಿಡಿ)– ಶಿಕ್ಷಣದ ಜೊತೆಗೆ ಮಕ್ಕಳಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸಬೇಕು ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಕಲಿಸು ಫೌಂಡೇಷನ್ ಹಾಗೂ ವೆಟೆಸ್ಕೋ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಹಯೋಗದಲ್ಲಿ ಮೈಸೂರು ತಾಲೂಕು ಕೀಳನಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ನಿರ್ಮಾಣ ಮಾಡಿರುವ ಗ್ರಂಥಾಲಯ ಹಾಗೂ ಹೊರಾಂಗಣ ಆಟದ ಮೈದಾನವನ್ನು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರೊಂದಿಗೆ ಉದ್ಘಾಟಿಸಿದ ಬಳಿಕ, ಶ್ರೀಗಳು ಆಶೀರ್ವಚನ ನೀಡಿದರು.



ಕೀಳನಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಕಲಿಸು ಫೌಂಡೇಷನ್ ವತಿಯಿಂದ ನಿರ್ಮಾಣ ಮಾಡಿರುವ ಗ್ರಂಥಾಲಯ ಹಾಗೂ ಹೊರಾಂಗಣ ಆಟದ ಮೈದಾನವನ್ನು ಸುತ್ತೂರು ಶ್ರೀಗಳು ಹಾಗೂ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ವಿದ್ಯಾರ್ಥಿಗಳಿಗೆ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಂತ ಬಹಳ ಮುಖ್ಯ. ಈ ಹಂತದಲ್ಲಿ ಮಕ್ಕಳಲ್ಲಿ ಕಲಿಯುವ ಆಸಕ್ತಿ ಹೆಚ್ಚಾಗಿರುತ್ತದೆ. ಹಾಗಾಗಿ ಶಿಕ್ಷಣದ ಜೊತೆಗೆ ಎಲ್ಲರನ್ನೂ ಪ್ರೀತಿ, ವಿಶ್ವಾಸ, ಗೌರವದಿಂದ ಕಾಣುವುದು, ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳುವುದು, ಹೀಗೆ ಉತ್ತಮ ಮೌಲ್ಯಗಳನ್ನು ಬಿತ್ತಿ ಬೆಳೆಸಬೇಕು. ಎಲ್ಲರೂ ಸರ್ಕಾರಿ ಕೆಲಸ ಬಯಸುತ್ತಾರೆ. ಆದರೆ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವುದಿಲ್ಲ ಎನ್ನುವ ಮನೋಭಾವ ಬದಲಾಗಬೇಕು. ಈ ನಿಟ್ಟಿನಲ್ಲಿ ಮೊದಲು ಸರ್ಕಾರಿ ನೌಕರರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲು ಮಾಡಬೇಕು. ಆ ಮೂಲಕ ಸರ್ಕಾರಿ ಶಾಲೆಗಳ ಪ್ರಗತಿಯೂ ಸಾಧ್ಯವಿದೆ ಎಂದು ಅಭಿಪ್ರಾಯಿಸಿದರು.

ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಖಾಸಗಿ ಸಂಘ–ಸಂಸ್ಥೆಗಳು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕೈ ಜೋಡಿಸಿದರೆ ಗಣನೀಯ ಸುಧಾರಣೆ ಸಾಧ್ಯವಿದೆ ಎನ್ನುವುದಕ್ಕೆ ಈ ಶಾಲೆ ಸಾಕ್ಷಿಯಾಗಿದೆ. ಈ ಮಾದರಿ ಸೇವಾ ಕಾರ್ಯ ರಾಜ್ಯದೆಲ್ಲೆಡೆ ವಿಸ್ತರಿಸಬೇಕು. ಸಹೃದಯಿಗಳು ಕಲ್ಪಿಸಿದ ವ್ಯವಸ್ಥೆ ಹಾಗೂ ಸಂಪನ್ಮೂಲಗಳ ಸದ್ಬಳಕೆಯೊಂದಿಗೆ ವಿದ್ಯಾರ್ಥಿಗಳು ಸಾಧನೆ ಹಾದಿಯಲ್ಲಿ ಮುನ್ನಡೆಯಬೇಕೆಂದು ಕಿವಿಮಾತು ಹೇಳಿದರು.

ಗುಂಡ್ಲುಪೇಟೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ, ಜಗತ್ತು ವೇಗವಾಗಿ ಬೆಳೆಯುತ್ತಿದೆ. ಆ ವೇಗಕ್ಕೆ ಎಲ್ಲರೂ ಹೊಂದಿಕೊಂಡು ಮುಂದೆ ಸಾಗಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಅಗತ್ಯ ಜ್ಞಾನ ಬೆಳೆಸಿಕೊಳ್ಳುವುದು ಅನಿವಾರ್ಯ. ಇದಕ್ಕೆ ಶಿಕ್ಷಣವೊಂದೇ ಮಾರ್ಗ. ಮಕ್ಕಳು ಉತ್ತಮ ಶಿಕ್ಷಣ ಪಡೆದು ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದು ಆಶಿಸಿದರು.

ವರುಣ ಕ್ಷೇತ್ರದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ದೇಶದ ಅಭಿವೃದ್ಧಿ ಶಿಕ್ಷಣದಿಂದ ಮಾತ್ರ ಸಾಧ್ಯ. ಹಾಗಾಗಿ ಸರ್ಕಾರಿ ಶಾಲೆಗಳ ಅಭಿವೃದ್ಧಿ ಜೊತೆಗೆ ಎಲ್ಲಾ ಮಕ್ಕಳೂ ಶಿಕ್ಷಣ ಪಡೆಯಬೇಕು. ಈ ಉದ್ದೇಶದಿಂದ ನಾನು ಶಾಸಕನಾಗಿದ್ದಾಗ ಕ್ಷೇತ್ರದ ಸರ್ಕಾರಿ ಶಾಲೆ ಉನ್ನತೀಕರಣಕ್ಕೆ ಕೋಟ್ಯಾಂತರ ಅನುದಾನದ ನೀಡಿದ್ದೆ ಎಂದು ತಿಳಿಸಿದರು.

ಡಿಡಿಪಿಐ ರಾಮಚಂದ್ರರಾಜೇ ಅರಸ್ ಮಾತನಾಡಿ, ಪುಟ್ಟ ಶಾಲೆಯಲ್ಲಿ ಮಹನೀಯರ ಸಮ್ಮುಖದಲ್ಲಿ ಐತಿಹಾಸಿಕ ಕಾರ್ಯಕ್ರಮ ನಡೆದಿದ್ದು ಅತ್ಯಂತ ಸಂತಸದ ಸಂಗತಿ. ಮಾಲಂಗಿ ಸುರೇಶ್ ಅವರು ಮುಖ್ಯ ಶಿಕ್ಷಕರಾಗಿ ಈ ಶಾಲೆಗೆ ನಿಯೋಜನೆಗೊಂಡ ನಂತರ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. ಶಾಲೆಯ ಸ್ವರೂಪವೇ ಬದಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ದಾನಿಗಳು ಶಾಲೆಗೆ ಕುಡಿಯುವ ನೀರಿನ ಟ್ಯಾಂಕ್, ಚೇರ್, ಕಂಪ್ಯೂಟರ್ ಹಾಗೂ ಪುಸ್ತಕ ಮತ್ತಿತರ ಅಗತ್ಯ ವಸ್ತುಗಳನ್ನು ಶಾಲೆಗೆ ಕೊಡುಗೆ ನೀಡಿದರು. ಕಾರ್ಯಕ್ರಮದ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು. ಇದೇ ಸಂದರ್ಭದಲ್ಲಿ ಜೆಎಸ್‌ಎಸ್ ಸಂಚಾರ ಚಿಕಿತ್ಸಾ ವಾಹನಕ್ಕೆ ಚಾಲನೆ ನೀಡಲಾಯಿತು.





ಕಾರ್ಯಕ್ರಮದಲ್ಲಿ ಬೆಂಗಳೂರು ಜಯನಗರದ ಶಾಸಕ ರಾಮಮೂರ್ತಿ, ಮೈಸೂರು ವಿಭಾಗದ ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಪಿ.ಶಿವರಾಜು, ಜೆಎಸ್‌ಎಸ್ ಕಾಲೇಜಿನ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಮಧು, ಕಲಿಸು ಫೌಂಡೇಶನ್ ಸಹ ಸಂಸ್ಥಾಪಕ ಎಂ.ಎಂ.ನಿಖಿಲೇಶ್, ವಿಟಸ್ಕೋ ಟೆಕ್ನಾಲಜೀಸ್ ಸಂಸ್ಥೆಯ ಮುಖ್ಯಸ್ಥ ಗಿರೀಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಹದೇವಮ್ಮ, ಸದಸ್ಯರಾದ ನಾಗರಾಜು, ಸ್ವಾಮಿ, ಶಾಲೆಯ ಮುಖ್ಯ ಶಿಕ್ಷಕ ಮಾಲಂಗಿ ಸುರೇಶ್, ಪ್ರಾಥಮಿಕ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಮಲ್ಲು, ಪ್ರೌಢಶಾಲೆ ಎಸ್‌ಡಿಎಂಸಿ ಮಲ್ಲೇಶ್, ರಾಮಸ್ವಾಮಿ, ಆಲನಹಳ್ಳಿ ಪುಟ್ಟಸ್ವಾಮಿ, ಮಹದೇವಪ್ಪ, ಆದಿತ್ಯ ಮತ್ತಿತರರು ಉಪಸ್ಥಿತರಿದ್ದರು.

90ನೇ ಗ್ರಂಥಾಲಯ: ಕಲಿಸು ಫೌಂಡೇಷನ್ ವತಿಯಿಂದ 90ನೇ ಗ್ರಂಥಾಲಯವನ್ನು ಕೀಳನಪುರ ಶಾಲೆಯಲ್ಲಿ ರೂಪಿಸಲಾಗಿದೆ. ಗೋಡೆಗಳ ಮೇಲೆ ಚಿತ್ರಕಲೆಗಳು, ಪುಸ್ತಕದ ಕಪಾಟುಗಳು, ಟೇಬಲ್ ಗಳು, ಪುಸ್ತಕಗಳು, ದೃಶ್ಯ ಸಾಧನಗಳು ಮತ್ತು ಕಲಾಕೃತಿಗಳನ್ನು ಗ್ರಂಥಾಲಯ ಒಳಗೊಂಡಿದೆ. ಆಟದ ಮೈದಾನದಲ್ಲಿ ವಾಲಿಬಾಲ್, ಖೋ–ಖೋ ಅಂಕಣ, ಸ್ಲೈಡ್‌ಗಳು, ಸ್ವಿಂಗ್‌ಗಳು, ಮಂಕಿ ಬಾರ್, ಕ್ಲೈಂಬಿಂಗ್ ಬಾರ್, ಮೆರ್ರಿ–ಗೋ–ರೌಂಡ್, ಸ್ಪ್ರಿಂಗ್ ಡಕ್ ಸೇರಿದಂತೆ ವಿವಿಧ ಸಲಕರಣೆಗಳಿವೆ.

ಬಳಕೆಗೆ ಬಾರದ ವಿಶೇಷ ಸೌಲಭ್ಯವುಳ್ಳ ಮಹಿಳೆಯರ ಪಿಂಕ್ ಶೌಚಗೃಹ



ಮೈಸೂರಿನ ಚಾಮುಂಡಿ ಅತಿಥಿಗೃಹದ ಆವರಣದಲ್ಲಿರುವ ಪಿಂಕ್ ಶೌಚಗೃಹ.

ಮೈಸೂರು,ಜೂ.12(ಪಿಎಂ)– ವಿಶೇಷ ಸೌಲಭ್ಯವುಳ್ಳ ಮಹಿಳೆಯರ ಶೌಚಗೃಹ ಬಳಕೆಗೆ ಬಾರದಾಗಿದೆ ಉದ್ಘಾಟನೆಗೊಂಡು ಎರಡೂವರೆ ತಿಂಗಳಾದರೂ ಹಾಕಿದ ಬೀಗ ಹಾಕಿದಂತೆಯೇ ಇದೆ. ಹೌದು, ಮೈಸೂರಿನ ದಿವಾನ್ಸ್ ರಸ್ತೆಯ ಚಾಮುಂಡಿ ಅತಿಥಿಗೃಹದ ಆವರಣದಲ್ಲಿರುವ ಪಿಂಕ್ ಶೌಚಗೃಹ ಬಳಕೆಗೆ ಮುಕ್ತವಾಗಿಲ್ಲ.

ಮೈಸೂರು ಮಹಾನಗರಪಾಲಿಕೆ ವಾರ್ಡ್ 23ರಲ್ಲಿ ಈ ವಿಶೇಷ ಸೌಲಭ್ಯವುಳ್ಳ ಶೌಚಗೃಹ ನಿರ್ಮಿಸಲಾಗಿದೆ. ಮಹಿಳೆಯರ ಈ ವಿಶೇಷ ಪಿಂಕ್ ಶೌಚಗೃಹ ಮಾ.26ರಂದು ಉದ್ಘಾಟನೆಯಾಗಿದ್ದರೂ ಅದರ ನಿರ್ವಹಣೆಗಾಗಿ ಟೆಂಡರ್ ಪ್ರಕ್ರಿಯೆ ಬಾಕಿ ಇರುವ ಹಿನ್ನೆಲೆಯಲ್ಲಿ ಬಳಕೆಗೆ ಇನ್ನೂ ಮುಕ್ತವಾಗಿಲ್ಲ.

ಮಹಿಳೆಯರಿಗಾಗಿಯೇ ವಿಶೇಷ ಸೌಲಭ್ಯಗಳೊಂದಿಗೆ ನಿರ್ಮಾಣಗೊಂಡಿರುವ ಈ ಪಿಂಕ್ ಟಾಯ್ಲೆಟ್ ನಗರದ ಹೃದಯ ಭಾಗದಲ್ಲಿ ಇರುವುದರಿಂದ ಮಹಿಳೆಯರಿಗೆ ಅನುಕೂಲವಾಗಲಿದೆ. ಅದರಲ್ಲೂ ಉದ್ಯೋಗಸ್ಥ ಮಹಿಳೆಯರಿಗೆ ಇದು ಹೆಚ್ಚು ಪ್ರಯೋಜನಕಾರಿ. ಮೈಸೂರು ಮಹಾನಗರ ಪಾಲಿಕೆಯ 14ನೇ ಹಣಕಾಸು ಯೋಜನೆಯಡಿ 37 ಲಕ್ಷ ರೂ. ವೆಚ್ಚದಲ್ಲಿ ಈ ಶೌಚಗೃಹ ನಿರ್ಮಿಸಲಾಗಿದೆ ಎಂದು ಉದ್ಘಾಟನೆ ನೆರವೇರಿಸಿ ಅಂದಿನ ಶಾಸಕ ಎಲ್.ನಾಗೇಂದ್ರ ತಿಳಿಸಿದ್ದರು. ಮೇಯರ್ ಶಿವಕುಮಾರ್, ಉಪಮೇಯರ್ ಡಾ. ಜಿ.ರೂಪಾ ಸಹ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ವಾರ್ಡ್ 23ರ ಪಾಲಿಕೆ ಸದಸ್ಯರಾದ ಪ್ರಮೀಳಾ ಭರತ್ ಸಹ ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಲ್ಲದೇ, ಅಂದು 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ್ದ ಅವರು, ಚಾಮುಂಡಿ ಅತಿಥಿಗೃಹ ಆವರಣದಲ್ಲಿ 20X20 ಅಡಿ ವಿಸ್ತೀರ್ಣದಲ್ಲಿ ಈ ಪಿಂಕ್ ಟಾಯ್ಲೆಟ್ ನಿರ್ಮಿಸಲಾಗಿದೆ. ಈ ಶೌಚ ಗೃಹದಲ್ಲಿ 2 ವೆಸ್ಟರ್ನ್, 2 ಇಂಡಿಯನ್ ಶೈಲಿಯ ಶೌಚಾಲಯಗಳಿದ್ದು, ಅಂಗವಿಕಲರಿಗಾಗಿ ಪ್ರತ್ಯೇಕವಾಗಿ ಒಂದು ಶೌಚಾಲಯವಿದೆ. ಒಂದು ವಿಶ್ರಾಂತಿ ಕೊಠಡಿ, ಹಾಲುಣಿಸುವ ಕೊಠಡಿ, ಡ್ರೆಸ್ಸಿಂಗ್ ಕೊಠಡಿ ಇದೆ, ಬಿಸಿ ನೀರಿಗಾಗಿ ಗೀಸರ್ ಅಳವಡಿಸಿರುವ ಎರಡು ಸ್ನಾನದ ಗೃಹಗಳಿವೆ ಎಂದು ತಿಳಿಸಿದ್ದರು.

> ಮೈಸೂರು ನಗರಪಾಲಿಕೆಯಿಂದ ಈ ಶೌಚಗೃಹದ ನಿರ್ವಹಣೆಗೆ ಟೆಂಡರ್ ಕರೆಯಲಾಗಿತ್ತು. ಆದರೆ ಯಾರೂ ಅರ್ಜಿ ಹಾಕಿರಲಿಲ್ಲ. ಈ ಹಿನ್ನೆಲೆಯಲ್ಲಿ ಬಳಕೆಗೆ ಮುಕ್ತಗೊಳಿಸಲು ಸದ್ಯ ಸಾಧ್ಯವಾಗಿಲ್ಲ. ಇದೀಗ ಮತ್ತೆ ಟೆಂಡರ್ ಕರೆಯಲಾಗಿದೆ. ಶೀಘ್ರ ಕ್ರಮ ವಹಿಸುವಂತೆ ಪಾಲಿಕೆಗೆ ತಿಳಿಸಿದ್ದೇನೆ.
> **–ಪ್ರಮೀಳಾ ಭರತ್, ಕಾರ್ಪೊರೇಟರ್**

ಸ್ಯಾನಿಟರಿ ಪ್ಯಾಡ್ ನೀಡುವ ಯಂತ್ರವಿದ್ದು, ಇದಕ್ಕೆ 5 ರೂ. ನಾಣ್ಯ ಹಾಕಿದರೆ ಒಂದು ಸ್ಯಾನಿಟರಿ ಪ್ಯಾಡ್ ದೊರೆಯಲಿದೆ. ಜೊತೆಗೆ ಬಳಕೆಯಾದ ಸ್ಯಾನಿಟರಿ ಪ್ಯಾಡ್ ಅನ್ನು ವಿಲೇವಾರಿ ಮಾಡಲು ಬರ್ನಿಂಗ್ ಮಿಷನ್ ವ್ಯವಸ್ಥೆಯೂ ಇದೆ. ನಿರ್ವಹಣೆಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಬಳಕೆಗೆ ಮುಕ್ತವಾಗಲಿದೆ ಎಂದೂ ತಿಳಿಸಿದ್ದರು.

ಇಷ್ಟೆಲ್ಲಾ ವಿಶೇಷ ಸೌಲಭ್ಯಗಳಿದ್ದೂ ಉದ್ಘಾಟನೆಯಾದ ದಿನದಿಂದಲೂ ಬಳಕೆಗೆ ಬಾರದೇ ಉಳಿದ್ದು, ಶೌಚಗೃಹದ ಮುಂಭಾಗ ವಾಹನ ನಿಲುಗಡೆ ತಾಣವಾಗಿ ಮಾರ್ಪಟಿದೆ. ಈ ಎಲ್ಲಾ ವಿಶೇಷ ಸೌಲಭ್ಯ ಕಲ್ಪಿಸಲು ಅಳವಡಿಸಿರುವ ಸಾಧನಗಳು ನಿರ್ವಹಣೆ ಇಲ್ಲದೇ ತುಕ್ಕು ಹಿಡಿಯುವುದಿಲ್ಲವೇ ಅಥವಾ ಒಂದಿಷ್ಟು ಹಾನಿ ಆಗುವುದಿಲ್ಲವೇ ಎಂಬ ಪ್ರಶ್ನೆಯೂ ಮೂಡಿದೆ.

ನವೀನಕುಮಾರಿಗೆ ಪಿಹೆಚ್.ಡಿ ಪದವಿ



ಮೈಸೂರು, ಜೂ.12– ಡಾ.ವೈ.ಎಚ್.ನಾಯಕವಾಡಿ ಅವರ ಮಾರ್ಗದರ್ಶನದಲ್ಲಿ ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿನಿ ನವೀನಕುಮಾರಿ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಇತಿಹಾಸ ವಿಷಯದಲ್ಲಿ ಪಿಹೆಚ್.ಡಿ ಪದವಿಗಾಗಿ ಅಂಗೀಕರಿಸಲಾಗಿದೆ ಎಂದು ಮೈವಿವಿ ಪ್ರಕಟಣೆ ತಿಳಿಸಿದೆ.

ಸಾರಿಗೆ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಬಂಪರ್ ಅವಕಾಶ

ಖಾಸಗಿ ಬಸ್‌ಗಳು ಖಾಲಿ ಖಾಲಿ; ಮೈಸೂರಲ್ಲಿ ಬಿಕೋ ಎನ್ನುತ್ತಿದೆ ಖಾಸಗಿ ಬಸ್ ನಿಲ್ದಾಣ

ಆಟೋ, ಟ್ಯಾಕ್ಸಿ ಚಾಲಕರಿಗೂ ತಟ್ಟಿದ ಉಚಿತ ಬಸ್ ಪ್ರಯಾಣದ ಬಿಸಿ



ಮೈಸೂರು, ಜೂ. 12 (ಆರ್‌ಕೆ)– ರಾಜ್ಯಾದ್ಯಂತ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸುವಂತಹ 'ಶಕ್ತಿ' ಯೋಜನೆಯನ್ನು ರಾಜ್ಯ ಸರ್ಕಾರ ನಿನ್ನೆಯಿಂದ ಜಾರಿಗೊಳಿಸಿದೆ. ಇದರಿಂದ ಮಹಿಳಾ ಲೋಕ ಸಂಭ್ರಮದಲ್ಲಿ ಮುಳುಗಿದೆ. ಆದರೆ ಖಾಸಗಿ ಬಸ್, ಆಟೋ ಹಾಗೂ ಟ್ಯಾಕ್ಸಿ ಚಾಲಕರು ಕಂಗಾಲಾಗಿದ್ದಾರೆ.

ನಿನ್ನೆ (ಭಾನುವಾರ)ಯಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚುನಾವಣಾ ಪೂರ್ವದಲ್ಲಿ ನೀಡಿದ್ದ 5 ಗ್ಯಾರಂಟಿಗಳ ಪೈಕಿ ಒಂದಾದ 'ಶಕ್ತಿ' ಯೋಜನೆಗೆ ಚಾಲನೆ ನೀಡಿರುವುದರಿಂದ ಮಹಿಳೆಯರು ಸಾರಿಗೆ ಬಸ್‌ಗಳಲ್ಲಿ ಸಂತಸದಿಂದ ಉಚಿತವಾಗಿ ಪ್ರಯಾಣಿಸಲಾರಂಭಿಸಿದ್ದಾರೆ.

ಎರಡನೇ ದಿನವಾದ ಇಂದು ಮಹಿಳೆಯರು, ಕೆಎಸ್‌ಆರ್‌ಟಿಸಿ ಗ್ರಾಮಾಂತರ ಮತ್ತು ಸಿಟಿ ಬಸ್ಸುಗಳಲ್ಲಿ ಮಾತ್ರ ಪ್ರಯಾಣಿಸಿದರು. ಹಾಗಾಗಿ ಸಿಟಿ ಮತ್ತು ಗ್ರಾಮಾಂತರ ಬಸ್ ನಿಲ್ದಾಣಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರು. ಇದೇ ವೇಳೆ ಖಾಸಗಿ ಬಸ್ಸು, ಟ್ಯಾಕ್ಸಿ ಮತ್ತು ಆಟೋ ಸ್ಟ್ಯಾಂಡ್‌ಗಳು ಖಾಲಿ ಖಾಲಿ. ಅವುಗಳ ಚಾಲಕರಲ್ಲಿ ಒಂದು ರೀತಿಯ ದುಗುಡ. ಮೈಸೂರಿನ ಸಯ್ಯಾಜಿರಾವ್ ರಸ್ತೆ, ಶೇಷಾದ್ರಿ ಅಯ್ಯರ್ ರಸ್ತೆ ನಡುವೆ ಹಳೇ ಆರ್‌ಎಂಸಿ ಸರ್ಕಲ್ ಬಳಿ ಇರುವ ಖಾಸಗಿ ಬಸ್ ನಿಲ್ದಾಣ ಪ್ರಯಾಣಿಕರಿಲ್ಲದೇ ಬಿಕೋ ಎನ್ನುತ್ತಿತ್ತು. ಮಹಿಳಾ ಪ್ರಯಾಣಿಕರ್ಯಾರೂ ಖಾಸಗಿ ಬಸ್ಸುಗಳ ಕಡೆ ತಿರುಗಿಯೂ ನೋಡುತ್ತಿಲ್ಲ. ಇಷ್ಟು ದಿನ ಐದೈದು ನಿಮಿಷಕ್ಕೊಂಡು ಬಸ್ ಸ್ಟ್ಯಾಂಡ್‌ನಿಂದ ಹೊರಡುತ್ತಿತ್ತು. ಆದರೆ ಇಂದು ಖಾಸಗಿ ಬಸ್ಸುಗಳು ಪ್ರಯಾಣಿಕರಿಗಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಓಲ್ಡ್ ಆರ್‌ಎಂಸಿ ಬಳಿಯ ಖಾಸಗಿ ಬಸ್ ನಿಲ್ದಾಣದಲ್ಲಿ ತಿ.ನರಸೀಪುರ, ಕೊಳ್ಳೇಗಾಲ, ಹನೂರು, ಮಲೈಮಹದೇಶ್ವರ ಬೆಟ್ಟ, ಸಂತೇಮರಳ್ಳಿ, ತಲಕಾಡು ಮತ್ತು ಹೊರ ರಾಜ್ಯಕ್ಕೂ ಹೋಗುವ ಖಾಸಗಿ ಬಸ್ಸುಗಳು ಗಂಟೆಗಟ್ಟಲೇ ಕಾದು ನಿಂತರೂ ಪ್ರಯಾಣಿಕರೇ ಬರಲಿಲ್ಲ. ಎರಡೆರಡು ಗಂಟೆ ಕಾದರೂ ನಿರೀಕ್ಷಿತ ಪ್ರಯಾಣಿಕರು ಬರಲೇ ಇಲ್ಲ. ಸದಾ ಪ್ರಯಾಣಿಕರಿಂದ ಗಿಜಿಗುಡುತ್ತಿದ್ದ ಈ ಖಾಸಗಿ ಬಸ್ ನಿಲ್ದಾಣ ಇಂದು ಜನರೇ ಇಲ್ಲದೆ ಬಿಕೋ ಎನ್ನುತ್ತಿತ್ತು. ಚಾಲಕರು, ಕಂಡಕ್ಟರ್ ಹಾಗೂ ಏಜೆಂಟರು ಕೂಗಿಕೊಂಡರೂ ಖಾಸಗಿ ಬಸ್‌ಗಳತ್ತ ಜನ ಬರಲಿಲ್ಲ. ಭಾನುವಾರ ಮಧ್ಯಾಹ್ನದಿಂದಲೇ ಖಾಸಗಿ ಬಸ್‌ಗಳತ್ತ ಮಹಿಳಾ ಪ್ರಯಾಣಿಕರು ಸುಳಿಯುತ್ತಿಲ್ಲ ಎಂದು ಮೈಸೂರು ಜಿಲ್ಲಾ ಖಾಸಗಿ ಬಸ್ ಏಜೆಂಟರ್ ಸಂಘದ ಅಧ್ಯಕ್ಷ ಸಿದ್ದಪ್ಪ ಬೇಸರದಿಂದಲೇ ನುಡಿದರು.

ಖಾಸಗಿ ಬಸ್ ನಿಲ್ದಾಣದಿಂದ ಜಿಲ್ಲೆಯ ವಿವಿಧ ತಾಲೂಕು ಮತ್ತು ಹೋಬಳಿ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ಬಸ್ಸುಗಳಲ್ಲಿ ಹಾರ್ಡಿಂಜ್ ಸರ್ಕಲ್, ಸಬರ್ಬನ್ ಬಸ್ ನಿಲ್ದಾಣ ಎದುರಿನ ಪೀಪಲ್ಸ್ ಪಾರ್ಕ್ ಬಳಿ ಹತ್ತುತ್ತಿದ್ದ ಪ್ರಯಾಣಿಕರೂ ಇಲ್ಲದಂತಾಗಿದೆ. ಮಾರ್ಗ ಮಧ್ಯೆ ವಿವಿಧ ಊರುಗಳಲ್ಲೂ ಜನರನ್ನು ಪಿಕಪ್ ಮಾಡುತ್ತಿದ್ದೆವು. ಆದರೆ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶವಿರುವುದರಿಂದ ನಮ್ಮ ಖಾಸಗಿ ಬಸ್ಸುಗಳಿಗೆ ಮಹಿಳೆಯರು ಹತ್ತುತ್ತಿಲ್ಲ ಎಂದು ಅವರು ತಮ್ಮ ಅಳಲು ತೋಡಿಕೊಂಡರು.

ದಿನಕ್ಕೆ 40 ಬಸ್ಸುಗಳು 80 ಟ್ರಿಪ್ ಮಾಡುತ್ತಿದ್ದೆವು. ಆದರೆ ಇಂದು ಒಂದೊಂದು ಬಸ್ಸು ಒಂದು ಟ್ರಿಪ್ ಮಾಡಲಷ್ಟೇ ಸಾಧ್ಯವಾಯಿತು. ಅದರಲ್ಲೂ ಕೇವಲ 10–15 ಮಂದಿ ಮಾತ್ರ ಪ್ರಯಾಣಿಸುವಂತಾಯಿತು. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಖಾಸಗಿ ಬಸ್ ಮಾಲೀಕರು, ಇವುಗಳನ್ನೇ ಅವಲಂಬಿಸಿರುವ ಡ್ರೈವರ್, ಕಂಡಕ್ಟರ್, ಏಜೆಂಟರುಗಳ ಜೀವನ ಕಷ್ಟಕರವಾಗಲಿದೆ ಎಂದು ಸಿದ್ದಪ್ಪ 'ಮೈಸೂರು ಮಿತ್ರ'ನಲ್ಲಿ ತಮ್ಮ ನೋವು ತೋಡಿಕೊಂಡರು.

ಜೊತೆಗೆ ಬಸ್ ನಿಲ್ದಾಣದಲ್ಲಿ ಇರುವಂತಹ ಟೀ ಅಂಗಡಿ, ಪಂಕ್ಚರ್ ಶಾಪ್, ಟಯರ್ ಅಂಗಡಿಯವರಿಗೂ ಇದರ ಬಿಸಿ ತಟ್ಟುತ್ತಿದೆ. ಸಾರಿಗೆ ಬಸ್ಸುಗಳಲ್ಲಿ ಆಸನ ಸಿಗದಿದ್ದರೂ, ನಿಂತುಕೊಂಡೇ ಪ್ರಯಾಣಿಸುತ್ತಿರುವ ಮಹಿಳೆಯರು, ಆದರೆ ಖಾಸಗಿ ಬಸ್‌ಗಳತ್ತ ಸುಳಿಯುತ್ತಿಲ್ಲ. ಶಕ್ತಿ ಯೋಜನೆ ಜಾರಿಯಾದ ಮರುದಿನವೇ ಖಾಸಗಿ ಬಸ್‌ಗಳು ಖಾಲಿ ಖಾಲಿ ನಿಂತಿರುವುದು ಕಂಡು ಬಂದಿತು.

> ಸರ್ಕಾರ ಮಹಿಳೆಯರಿಗೆ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ನೀಡಿರುವುದರಿಂದ ನಾವು ಖಾಸಗಿ ಬಸ್ಸುಗಳನ್ನು ಮಾರಾಟ ಮಾಡಿ ಬೇರೆ ವೃತ್ತಿ ಅವಲಂಬಿಸುವುದು ಸೂಕ್ತ. ನಮ್ಮ ಬಸ್ಸುಗಳಿಗೆ ಜನರೇ ಬರುತ್ತಿಲ್ಲ. ಡ್ರೈವರ್, ಕಂಡಕ್ಟರ್, ಕ್ಲೀನರ್ ಸಂಬಳ, ಏಜೆಂಟ್‌ಗಳ ಕಮಿಷನ್, ಡೀಸೆಲ್, ತೆರಿಗೆ, ಇನ್ಶೂರೆನ್ಸ್ ಪಾವತಿಸುವುದಾದರೂ ಹೇಗೆ? ನಮಗೆ ಖಾಸಗಿ ಬಸ್ ಸೇವೆಯೇ ಜೀವನಾಧಾರ. ಜನರೇ ಬಾರದಿದ್ದರೆ ಬಸ್ ನಿರ್ವಹಿಸುವುದು ದುಸ್ತರವಾಗುತ್ತದೆ. ಮಲೈಮಹದೇಶ್ವರಬೆಟ್ಟದಲ್ಲಿ ಕೆಎಸ್‌ಆರ್‌ಟಿಸಿ ಬಸ್ಸುಗಳ ಡ್ರೈವರ್, ಕಂಡಕ್ಟರ್‌ಗಳು ಮೈಕ್ ಮೂಲಕ 'ಬನ್ನಿ ಮಹಿಳೆಯರೇ ಉಚಿತ ಪ್ರಯಾಣವಿದೆ' ಎಂದು ಕೂಗಿ ಮಹಿಳೆಯರನ್ನು ಸೆಳೆಯುತ್ತಿದ್ದಾರೆ. ನಮ್ಮ ಬಸ್ಸಿಗೆ ಯಾರು ಹತ್ತುತ್ತಾರೆ? ಅದರ ಬದಲು ಕೆಎಸ್‌ಆರ್‌ಟಿಸಿಯವರಿಗೇ ನಮ್ಮ ಬಸ್ಸುಗಳನ್ನು ಮಾರಾಟ ಮಾಡಿ ಬೇರೆ ವೃತ್ತಿ ಆರಂಭಿಸುವುದು ಒಳಿತು. ಇದೇ ಕೆಲಸ ನಂಬಿಕೊಂಡಿದ್ದರೆ ನಮ್ಮ ಕುಟುಂಬದ ಜೊತೆಗೆ ಖಾಸಗಿ ಬಸ್ ಚಾಲಕ, ಕಂಡಕ್ಟರ್, ಕ್ಲೀನರ್‌ಗಳ ನಂಬಿದವರೂ ಸಹ ಬೀದಿಗೆ ಬರಲಿದ್ದಾರೆ. ಇನ್ನು ಮುಂದೆ ಖಾಸಗಿ ಬಸ್ ಯುಗ ಮುಗಿದಂತೆಯೇ ಸರಿ.
> **– ಶಿವಲಿಂಗೇಗೌಡ, ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ.**

> ದಿನಕ್ಕೆ ಖರ್ಚು ಕಳೆದು 600ರಿಂದ 700 ರೂ. ಉಳಿಸಿ ಜೀವನ ನಡೆಸುತ್ತಿದ್ದೆವು. ಆಟೋದಿಂದಲೇ ನಮ್ಮ ಮಕ್ಕಳನ್ನೂ ಓದಿಸಿ, ಮನೆ ಬಾಡಿಗೆ ಕಟ್ಟುತ್ತಿದ್ದೆವು. ಇದೀಗ ಸಿಟಿ ಬಸ್ ಸೇರಿದಂತೆ ರಾಜ್ಯಾದ್ಯಂತ ಎಲ್ಲಾ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ 'ಶಕ್ತಿ' ಯೋಜನೆ ಜಾರಿಗೊಳಿಸಿರುವುದರಿಂದ ಇಂದು ಬೆಳಗ್ಗೆಯಿಂದ ಕಾಯುತ್ತಿದ್ದರೂ ಪ್ರಯಾಣಿಕರೇ ಬರುತ್ತಿಲ್ಲ. ಆಟೋ ಮಾಲೀಕನಿಗೆ ಬಾಡಿಗೆ ಹೇಗೆ ಕೊಡುವುದು, ಗ್ಯಾಸ್ ತುಂಬಿಸುವುದ್ಹೇಗೆ, ಮನೆಗೆ ಏನು ಕೊಡಲಿ? ಪರಿಸ್ಥಿತಿ ಹೀಗೆಯೇ ಮುಂದುವರಿದರೆ ನಾವು ಬೀದಿ ಪಾಲಾಗಬೇಕಾಗುತ್ತದೆ. ತೀರಾ ತುರ್ತು ಕೆಲಸವಿರುವವರು, ಗರ್ಭಿಣಿಯರು, ವೃದ್ಧರು, ರೋಗಿಗಳು ಮಾತ್ರ ಆಟೋ ಕೇಳುತ್ತಾರೆ. ಅದಕ್ಕೂ ಹತ್ತಾರು ಆಟೋಗಳು ಬಂದು ಸ್ಪರ್ಧೆಯೊಡ್ಡುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಆಟೋ ಓಡಿಸಿ ಜೀವನ ಸಾಗಿಸುವುದು ಕಷ್ಟ ಕಷ್ಟ. **– ಗಣೇಶ, ಮನು, ಸಲೀಂ, ಆಟೋ ಚಾಲಕರು.**

ಕಾದು ನಿಂತ ಆಟೋ, ಟ್ಯಾಕ್ಸಿಗಳು

ಖಾಸಗಿ ಬಸ್‌ಗಳಷ್ಟೇ ಅಲ್ಲದೆ, ಆಟೋ, ಟ್ಯಾಕ್ಸಿ, ಕ್ಯಾಬ್‌ಗಳಿಗೂ ಬಿಸಿ ತಟ್ಟಿದೆ. ಬೆಳಗ್ಗೆ 11 ಗಂಟೆ ವೇಳೆಗೆ ಸುಮಾರು 400, 500 ರೂ. ದುಡಿಯುತ್ತಿದ್ದ ಆಟೋ ಚಾಲಕರೂ ನಿಲ್ದಾಣಗಳಲ್ಲಿ ತಮ್ಮ ಸರತಿಗಾಗಿ ಕಾದು ನಿಲ್ಲುವಂತಾಗಿದೆ. ಮೈಸೂರು ನಗರದಲ್ಲಿ ಕೆಲಸ ಕಾರ್ಯಗಳಿಗಾಗಿ ಆಟೋ, ಸ್ವಲ್ಪ ಆರ್ಥಿಕ ಸ್ಥಿತಿವಂತರು ಅವಲಂಬಿಸಿದ್ದ ಟ್ಯಾಕ್ಸಿಗಳತ್ತ ಮಹಿಳೆಯರು ಸುಳಿಯುತ್ತಿಲ್ಲ ಎಂದು ಇವುಗಳ ಚಾಲಕರು ತಮ್ಮ ಅಸಹಾಯಕತೆ ವ್ಯಕ್ತಪಡಿಸುತ್ತಿದ್ದಾರೆ.

ಮೈಸೂರಿನ ಪೀಪಲ್ಸ್ ಪಾರ್ಕ್ ಎದುರು ಹಾರ್ಡಿಂಜ್ ಸರ್ಕಲ್‌ನ ಪೊಲೀಸ್ ಆಯುಕ್ತರ ಕಚೇರಿಗೆ ಹೋಗುವ ಮಿರ್ಜಾ ರಸ್ತೆ ಜಂಕ್ಷನ್ ಬಳಿ ಪ್ರಯಾಣಿಕರಿದ್ದರಾದರೂ ಅವರು ಸಿಟಿ ಬಸ್, ಗ್ರಾಮಾಂತರ ಸಾರಿಗೆ ಬಸ್‌ಗಳಿಗೆ ಕಾಯುತ್ತಿದ್ದರೆ, ಖಾಸಗಿ ಬಸ್ ಕಂಡಕ್ಟರ್‌ಗಳು ಕೂಗಿಕೊಂಡರೂ ಮಹಿಳೆಯರು ಖಾಸಗಿ ಬಸ್‌ಗಳತ್ತ ಮುಖ ಮಾಡುತ್ತಿಲ್ಲ. ಆದರೆ ಸಾರಿಗೆ ಬಸ್‌ಗಳಲ್ಲಿ ಮಾತ್ರ ಶೇ.60ಕ್ಕೂ ಹೆಚ್ಚು ಮಹಿಳೆಯರು ಸಂಚರಿಸುತ್ತಿರುವುದು ಕಂಡು ಬರುತ್ತಿದ್ದು, ಬಸ್ ಕಂಡಕ್ಟರ್ ಸಹ ಬನ್ನಿ ಉಚಿತ ಸೇವೆ ಎಂದು ಹೇಳಿ ಮಹಿಳಾ ಪ್ರಯಾಣಿಕರನ್ನು ಸೆಳೆಯಲು ಪ್ರಯತ್ನಿಸುತ್ತಿದ್ದುದು ಇಂದು ಕಂಡು ಬಂದಿತು.





ನಕ್ಕರೆ ಅದೇ ಸ್ವರ್ಗ

ಶಿಕ್ಷಕರು : (ಪರೀಕ್ಷೆ ಹಾಲ್‌ನಲ್ಲಿ ಗಂಭೀರವಾಗಿ ಕುಳಿತ ವಿದ್ಯಾರ್ಥಿಗಳನ್ನು ಕುರಿತು) "ಯಾವುದಾದರೂ ಪ್ರಶ್ನೆಗಳು ಕಠಿಣವಾಗಿವೆಯೇ?"

ವಿದ್ಯಾರ್ಥಿಗಳು : "ಖಂಡಿತಾ ಇಲ್ಲ. ಎಲ್ಲಾ ಪ್ರಶ್ನೆಗಳು ತೀರಾ ಸರಳವಾಗಿವೆ. ಆದರೆ ಉತ್ತರಗಳು ಮಾತ್ರ ಕಠಿಣ ಸಾರ್!".

ಮೈಸೂರು ಮಿತ್ರ

ಮಂಗಳವಾರ, 13 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಒಳ್ಳೆಯ ಕೆಲಸವನ್ನು ಮಾಡುವವನು ಯಾವತ್ತೂ ದುರ್ಗತಿಯನ್ನು ಹೊಂದುವುದಿಲ್ಲ – ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದು ಹೋಳಿಗೆ ಕೊಟ್ಟರೆ ಬೆಲ್ಲ ಸಾಲದು ಎಂದನಂತೆ

ನಿಮ್ಮ ಪತ್ರಗಳು

ವಿವೇಕಾನಂದರ ಚಿತ್ರಪಟವನ್ನು ಸರಿಪಡಿಸಿ ವಿಶ್ವಗುರುವಿಗೆ ಗೌರವ ಸಲ್ಲಿಸಿ



ಮಾನ್ಯರೇ

ಭಾರತದ ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ತ್ವಜ್ಞಾನಿಗಳಲ್ಲಿ ಒಬ್ಬರಾದ ವಿಶ್ವಗುರು, ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಬೃಹತ್ ಕಟೌಟನ್ನು ಮೈಸೂರು ನಗರದ ಒಂಟಿಕೊಪ್ಪಲ್‌ನ ಬಿ.ಸಿ.ಲಿಂಗಯ್ಯ ವೃತ್ತದ ಬಳಿ ಅಳವಡಿಸಲಾಗಿದೆ. ಆ ವೃತ್ತಕ್ಕೆ ಅದೇ ಒಂದು ವಿಶೇಷ ಮೆರಗು. ಆದರೆ, ಆ ಕಟೌಟ್ ಅಸ್ತವ್ಯಸ್ತವಾಗಿ ಹಲವಾರು ದಿನಗಳು ಕಳೆದಿದೆ. ಅದನ್ನು ಸರಿಪಡಿಸದಿರುವುದು ವಿವೇಕಾನಂದರಿಗೆ ತೋರುವ ಅಗೌರವವೇ ಸರಿ. ಅದೇನೆ ಇರಲಿ; ಸಂಬಂಧಪಟ್ಟವರು ಅತೀ ತುರ್ತಾಗಿ ವಿವೇಕಾನಂದರ ಚಿತ್ರಪಟವನ್ನು ಸರಿಪಡಿಸಿ ವಿಶ್ವಗುರುವಿಗೆ ಗೌರವ ಸಲ್ಲಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲ್ ಮೈಸೂರು.

ಸಾರ್ವಜನಿಕ ನೀರಿನ ತೊಂಬೆ (ವಾಟರ್ ಟ್ಯಾಂಕ್)ಯಲ್ಲಿ ಅನೈರ್ಮಲ್ಯ ತೊಲಗಿಸಿ



ಮಾನ್ಯರೆ,

ಚಾಮರಾಜನಗರ ತಾಲೂಕಿನ ಮರಿಯಾಲಹುಂಡಿ ಗ್ರಾಮದಲ್ಲಿ ಸಾರ್ವಜನಿಕರ ಬಳಕೆಗಾಗಿ ಇರುವ ನೀರಿನ ತೊಂಬೆಯನ್ನು "ನಮ್ಮ ಸ್ವಂತ ಸ್ವತ್ತು ಎಂಬಂತೆ" ಕೆಲವು ಮಹಿಳೆಯರು ದಿನ ನಿತ್ಯ ಕುಳಿತು ಮನೆಯಲ್ಲಿ ಬಳಸುವ ಪಾತ್ರೆಗಳು ಮತ್ತು ಬಟ್ಟೆಗಳನ್ನು, ಹಾಗೂ ಇತರೆ ಪದಾರ್ಥಗಳನ್ನು ತೊಳೆಯುತ್ತಿರುತ್ತಾರೆ. ಇದರಿಂದ ನೀರಿನ ತೊಂಬೆಯ ಸುತ್ತಲೂ ಅನೈರ್ಮಲ್ಯ ಎದ್ದು ಕಾಣುತ್ತಿದೆ. ಗ್ರಾಮದಲ್ಲಿ ಚಿಕ್ಕ ಚಿಕ್ಕ ಮಕ್ಕಳು ಹೆಚ್ಚಾಗಿದ್ದು, ಹಿರಿಯರು, ವೃದ್ಧರಿದ್ದು, ನೀರಿನ ತೊಂಬೆಯು ಸ್ವಚ್ಛತೆ ಇಲ್ಲದ ಕಾರಣ ರೋಗ ಹರಡುವ ಭೀತಿಯಲ್ಲಿದ್ದಾರೆ. ಇದರ ಬಗ್ಗೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಲೀ, ಸದಸ್ಯರಾಗಲಿ ಅಥವಾ ಅಧಿಕಾರಿಗಳಾಗಲೀ ಗಮನಹರಿಸುತ್ತಿಲ್ಲ. ಕೂಡಲೇ ಸಂಬಂಧಪಟ್ಟವರು ತೊಂಬೆಯನ್ನು ಸ್ವಚ್ಛತೆ ಮಾಡಲು ಕ್ರಮ ಕೈಗೊಂಡು ಗ್ರಾಮದ ಸಾರ್ವಜನಿಕರ ಆರೋಗ್ಯ ಕಾಪಾಡಲು ಮುಂದಾಗಬೇಕು ಎಂದು ಕಳಕಳಿಯ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಆಧಾರ್ ಕಾರ್ಡ್ ನವೀಕರಣ ಹೆಸರಲ್ಲಿ ಸುಲಿಗೆ

ಮಾನ್ಯರೆ,

ಆಧಾರ್ ಕಾರ್ಡನ್ನು ನವೀಕರಿಸಬೇಕೆಂದು ಮಾಧ್ಯಮಗಳಲ್ಲಿ ಬಂದಿದೆ. ಆನ್‌ಲೈನ್‌ನಲ್ಲಿ ಉಚಿತವಾಗಿ ಮತ್ತು ಆಧಾರ್ ಕೇಂದ್ರಗಳಲ್ಲಿ ರೂ. 50 ನೀಡಿ ನವೀಕರಿಸಬಹುದು ಎಂದಿದೆ. ನಮ್ಮ ಗುರುತು ಇರುವವರು ಒಬ್ಬರು ಸರಸ್ವತಿಪುರಂನ ಖಾಸಗಿ ಕೇಂದ್ರದಲ್ಲಿ ಮಾಡಿಸಿದರಂತೆ. ಅಲ್ಲಿ ರೂ 150 ವಸೂಲಿ ಮಾಡಿದರೆಂದು ಹೇಳಿದರು. ಯಾವ ಪಾರ್ಟಿಯ ಸರ್ಕಾರವೇ ಬರಲಿ ಭ್ರಷ್ಟಾಚಾರ ಮಾತ್ರ ಎಗ್ಗು ಸಿಗ್ಗಿಲ್ಲದೇ ನಾಟ್ಯವಾಡುತ್ತಿದೆ. ಕಾಂಗ್ರೆಸ್ ಸರ್ಕಾರ ಇದನ್ನ ತಪ್ಪಿಸಲಿ. ಹೆಚ್ಚು ದರ ತೆಗೆದುಕೊಳ್ಳುವವರ ಪರವಾನಗಿ ರದ್ದು ಮಾಡಲಿ.

–ಅಕ್ಕಿ ಹೆಬ್ಬಾಳು ವೆಂಕಟೇಶ್, ಮೈಸೂರು

ನಾನು ಅವನಲ್ಲ !

ಮಾನ್ಯರೆ,

ರಾಜ್ಯದಲ್ಲಿ ನೂತನವಾಗಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಈ ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ತೆಗೆದುಕೊಂಡಿದ್ದ ಕೆಲವು ನಿರ್ಣಯಗಳನ್ನು ಪುನಃ ಪರಿಶೀಲಿಸುವುದಾಗಿ ಹೇಳಿದೆಯಲ್ಲದೆ ಕೆಲವು ಕಾಮಗಾರಿಗಳಿಗೆ ತಡೆಯೊಡ್ಡಿರುವ ವಿಚಾರ ಮಾಧ್ಯಮಗಳಲ್ಲಿ ಪ್ರಕಟವಾಗಿದೆ.

ಹಿಂದಿನ ಬಿಜೆಪಿ ಸರ್ಕಾರ ಕೆಲವು ಜನ ವಿರೋಧಿ ನೀತಿಗಳನ್ನು ಅಂಗೀಕರಿಸಿದ್ದರೆ, ಅಥವಾ ಭ್ರಷ್ಟಾಚಾರದ ವ್ಯವಹಾರಗಳನ್ನು ನಡೆಸಿದ್ದರೆ, ಅವುಗಳನ್ನು ಪುನರ್ ಪರಿಶೀಲಿಸುವುದು ತಪ್ಪಲ್ಲ. ಆದರೆ ಹಿಂದಿನ ಸರ್ಕಾರ ಮಾಡಿದ್ದೆಲ್ಲವೂ ಸರಿಯಲ್ಲ, ತಾನು ಮಾಡುವುದೇ ಸರಿ ಎಂಬ ಧೋರಣೆ ದ್ವೇಷ ರಾಜಕಾರಣದ ಮತ್ತೊಂದು ಮುಖವೆನ್ನಬಹುದು. ಮೊಸರಲ್ಲಿ ಕಲ್ಲನ್ನು ಹುಡುಕುವ ಕೆಲಸ ಮಾಡುತ್ತಾ ಕೂತರೆ, ಅದಕ್ಕೆ ಕೊನೆ ಮೊದಲೆಂಬುದೇ ಇರುವುದಿಲ್ಲ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಾಗ, ಹಳೆಯ ಸರ್ಕಾರ ತೆಗೆದುಕೊಂಡ ಅನೇಕ ಸಾಮಾನ್ಯ ನಿರ್ಧಾರಗಳು ಹೊಸ ಸರ್ಕಾರಕ್ಕೂ ಬಂಧನಕಾರಿಯಾಗಿರುತ್ತದೆ. ಅದೇ ರೀತಿ ಹಳೆಯ ಸರ್ಕಾರ ಮಾಡಿದ್ದ ಸಾಲ ತೀರಿಸುವ ಜವಾಬ್ದಾರಿ ಕೂಡ ಹೊಸ ಸರ್ಕಾರದ ಮೇಲಿರುತ್ತದೆ. ಆದ್ದರಿಂದ ಎಲ್ಲಾ ಮಾಡಿದ್ದು ಅವನು, ನಾನು ಅವನಲ್ಲ ಎಂಬ ಧೋರಣೆ ಸರಿಯಲ್ಲ

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ, – 574 104 ಉಡುಪಿ ಜಿಲ್ಲೆ

ದಿಕ್ಕುದೆಸೆ

ವಿಕಾಸ ಪಥದಲ್ಲಿ ಭಾರತ–ವಿನಾಶದತ್ತ ಪಾಕಿಸ್ತಾನ

ಪಾಕಿಸ್ತಾನದಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್‌ರು ಸರಕಾರ ಮತ್ತು ಸೇನೆಯೊಂದಿಗೆ ಸಂಘರ್ಷ ಮುಂದುವರೆಸಿದ್ದಾರೆ. ಇನ್ನೊಂದೆಡೆ ಪಾಕ್‌ನ ಆಡಳಿತ ಪಕ್ಷ ಪಾಕಿಸ್ತಾನ ಡೆಮಾಕ್ರಟಿಕ್ ಮೂವ್‌ಮೆಂಟ್ (ಪಿಡಿಎಂ) ದೇಶದ ಸುಪ್ರೀಂಕೋರ್ಟ್‌ನೊಂದಿಗೆ ಸಂಘರ್ಷಕ್ಕಿಳಿದಿದೆ. ಪಾಕ್‌ನಲ್ಲಿ ಸೇನೆಯ ಪ್ರಾಬಲ್ಯತೆ ಮತ್ತೆ ಶುರುವಾಗಿದೆಯೇ ಎಂಬ ಚರ್ಚೆ ಆರಂಭವಾಗಿದೆ. ದೇಶದ ಎಲ್ಲಾ ರಾಜಕೀಯ ಪಕ್ಷಗಳು ಒಂದನ್ನೊಂದು ದೇಶದ್ರೋಹಿ ಪಕ್ಷಗಳೆಂಬ ಆರೋಪ ಮಾಡುತ್ತಿವೆ. ಸೇನೆಯನ್ನು ವಿರೋಧಿಸುವವರ ಮೇಲೆ ಭಯೋತ್ಪಾದನೆ ಮತ್ತು ದೇಶದ್ರೋಹ ಸಂಬಂಧಿತ ಕಾನೂನಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಮಧ್ಯೆ ಪಾಕ್‌ನಲ್ಲಿ ಅಧಿಕಾರದಲ್ಲಿರುವವರು ತೋರುತ್ತಿರುವ ಫ್ಯಾಸಿಸ್ಟ್ ಸ್ವಭಾವ ಮತ್ತು ವ್ಯಾಪಕ ಮಾನವಾದಿಕಾರಗಳ ಉಲ್ಲಂಘನೆ ಬಗ್ಗೆ ಚಿಂತೆ ವ್ಯಕ್ತಪಡಿಸುವ ಸ್ವರಗಳು ಏಳಲಾರಂಭಿಸಿವೆ. ಸರಕಾರವು ಅಧಿಕಾರ ದುರುಪಯೋಗ, ಸೇನಾಶಕ್ತಿಯ ದುರುಪಯೋಗ ಮತ್ತು ವಿಶೇಷವಾಗಿ ನ್ಯಾಯಾಲಯದ ಆದೇಶಗಳನ್ನು ದುರುಪಯೋಗ ಪಡಿಸುತ್ತಿರುವುದನ್ನು ತಡೆಯಲು ವಿಶ್ವಸಂಸ್ಥೆ, ಅಂತಾರಾಷ್ಟ್ರೀಯ ಸಮುದಾಯ ಹಾಗೂ ಮಾನವಾಧಿಕಾರ ಸಂಘಟನೆಗಳು ಸರಕಾರದ ಮೇಲೆ ಒತ್ತಡ ಹೇರಬೇಕೆಂದು ಪಾಕಿಸ್ತಾನದ ಕೆಲವು ಪ್ರಭಾವಿ ವ್ಯಕ್ತಿಗಳು, ಸಂಘಟನೆಗಳು ಒತ್ತಾಯಿಸುತ್ತಿವೆ. ಪಾಕಿಸ್ತಾನದ ಇಂದಿನ ಸ್ಥಿತಿಗೆ ಆ ದೇಶ ಅಸ್ತಿತ್ವಕ್ಕೆ ಬಂದ ರೀತಿಯು ಕಾರಣವಾಗಿದೆ. ಸಾಂಸ್ಕೃತಿಕ ಬೇರುಗಳಿಲ್ಲದೇ ಕೇವಲ ರಾಜಕೀಯ ಹಾಗೂ ದ್ವೇಷದ ಆಧಾರದಲ್ಲಿ ಒಂದು ದೇಶ ಸೃಷ್ಟಿಯಾಗಿದೆ. ಕಾಲ ಸರಿದಂತೆ ಆ ದೇಶದ ಪರಿಸ್ಥಿತಿ ಏನಾಗಬಹುದು ಎಂಬುದಕ್ಕೆ ಪಾಕಿಸ್ತಾನ ಉದಾಹರಣೆಯಾಗಿದೆ.

1947ರಲ್ಲಿ ಒಂದು ದಿನದ ಅಂತರದಲ್ಲಿ ಉಪಖಂಡದಲ್ಲಿ ರಾಜಕೀಯ ನೆಲೆಯಲ್ಲಿ ಭಾರತ ಮತ್ತು ಪಾಕಿಸ್ತಾನಗಳೆಂಬ ಎರಡು ದೇಶಗಳ ಉದಯವಾದವು. ಎರಡೂ ದೇಶಗಳು ಜಾತ್ಯಾತೀತತೆಯ ಆಧಾರದಲ್ಲಿ ಮುಂದೆ ಹೋಗುವ ಸಂಕಲ್ಪ ಮಾಡಿದವು. ಆದರೆ ಭಾರತ ನಿಜವಾದ ಜಾತ್ಯಾತೀತ ರಾಷ್ಟ್ರವಾಗಿ ಅಭಿವೃದ್ಧಿ ಸಾಧಿಸಿದರೆ, ಪಾಕಿಸ್ತಾನವು ಇಸ್ಲಾಮಿಕ್ ಭಯೋತ್ಪಾದನೆ, ಮತಾಂಧತೆ ಹಾಗೂ ಭಾರತದ ಮೇಲಿನ ದ್ವೇಷವನ್ನು ತನ್ನ ಆಡಳಿತ ಧರ್ಮವಾಗಿ ಅನುಸರಿಸಿತು. ಭಾರತವಿಂದು ಜಗತ್ತಿನ ಐದನೇ ಆರ್ಥಿಕ ಶಕ್ತಿಯಾಗಿದ್ದರೆ, ಪಾಕಿಸ್ತಾನವು ರಾಜಕೀಯ ಅಸ್ಥಿರತೆ, ಅಪನಂಬಿಕೆ, ಭಾರತ ದ್ವೇಷ, ದೇಶದ ರಾಜಕಾರಣದಲ್ಲಿ ನಿರಂತರವಾಗಿ ಸೇನೆಯ ಹಸ್ತಕ್ಷೇಪ, ಹೆಸರಿಗೆ ಮಾತ್ರವಿರುವ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸರ್ವಾಧಿಕಾರಿಗಳ ಆಡಳಿತದಿಂದ ಪಾಕ್‌ನಲ್ಲಿಂದು ಅರಾಜಕತಾ ಸ್ಥಿತಿ ಇದೆ. ಆರ್ಥಿಕವಾಗಿ ದಿವಾಳಿಯಾಗಿ ಬಡ ಭಿಕಾರಿ ರಾಷ್ಟ್ರವಾಗಿದೆ.

ಸಾಮಾನ್ಯವಾಗಿ ಪಾಕಿಸ್ತಾನದಲ್ಲಿ ಚುನಾಯಿತ ಸರಕಾರಗಳು ಅಧಿಕಾರದಲ್ಲಿರಬೇಕಾದರೆ ಸೇನೆಯನ್ನು, ಇಸ್ಲಾಮಿಕ್ ಮತಾಂಧರನ್ನು,



ಹಾಗೂ ಭಯೋತ್ಪಾದಕ ಸಂಘಟನೆಗಳನ್ನು ಸಂತೋಷದಲ್ಲಿರಿಸಬೇಕು. ಸೇನೆ ಮತ್ತು ನಾಗರಿಕ ಸರಕಾರಗಳ ನಡುವೆ ಅಧಿಕಾರಕ್ಕಾಗಿ ನಡೆಯುತ್ತಿರುವ ಸಂಘರ್ಷವು ಅಲ್ಲಿನ ಪ್ರಜಾಸತ್ತಾತ್ಮಕ ವ್ಯವಸ್ಥೆಗಳು, ಸಾಂವಿಧಾನಿಕ ನಿಯಮಗಳನ್ನು ನಾಶಪಡಿಸಿವೆ. ಜನರಲ್ಲಿ ಅಭದ್ರತೆಯನ್ನು ಸೃಷ್ಟಿಸಿದೆ. ಅವಕಾಶಗಳನ್ನು ವಂಚಿಸಿದೆ.

ಪಾಕ್‌ನಲ್ಲಿನ ಪ್ರಸ್ತುತ ವಿದ್ಯಮಾನಗಳನ್ನು ಅರಿಯಲು ಅದರ ಇತಿಹಾಸವನ್ನು ಅವಲೋಕಿಸಬೇಕಾಗಿದೆ. ಪಾಕಿಸ್ತಾನವು ದೇಶವಾದ ಮೂರು ವರ್ಷದ ನಂತರ ಪ್ರಧಾನಿಯನ್ನು ಗುಂಡಿಕ್ಕಿ ಹತ್ಯೆ ಮಾಡಲಾಯಿತು. ಜ.ಅಯೂಬ್ ಖಾನ್ ಸೇನಾಧ್ಯಕ್ಷರಾದರು. 1958ರಲ್ಲಾದ ಸೇನಾ ಕ್ಷಿಪ್ರ ಕ್ರಾಂತಿಯಲ್ಲಿ ಅಧಿಕಾರಕ್ಕೇರಿದ ಅಯೂಬ್‌ಖಾನ್ ಹನ್ನೊಂದು ವರ್ಷಗಳ ಕಾಲ ಅಧಿಕಾರದಲ್ಲಿದ್ದರು. 1958 ರಿಂದ ಪಾಕಿಸ್ತಾನವು ನಾಲ್ಕು ಬಾರಿ ಸುದೀರ್ಘ ಅವಧಿಗೆ ಸೇನಾಡಳಿತಕ್ಕೆ ಒಳಗಾಗಿತ್ತು. ಪಾಕ್ ಸೇನೆ ಅಧಿಕಾರಕ್ಕಾಗಿ ಆಗಾಗ ಬಣ್ಣ ಬದಲಿಸುತ್ತಿರುತ್ತದೆ. ಪಾಕ್ ಸೇನಾ ಪ್ರಮುಖನು ದೇಶದ ರಾಷ್ಟ್ರಪತಿ, ಅಧ್ಯಕ್ಷ, ಸರ್ವಾಧಿಕಾರಿ, ಮುಖ್ಯ ಆಡಳಿತಾಧಿಕಾರಿ ಈ ರೀತಿ ಏನು ಬೇಕಾದರೂ ಆಗಬಹುದು. ದೇಶದ ಅಧಿಕಾರ ವಶಪಡಿಸಿಕೊಂಡ ಸೇನಾಧಿಕಾರಿಗಳು ಆರ್ಮಿ (2ನೇ ಹಂತದ ಸೇನಾಧಿಕಾರಿಗಳು), ಅದಾಲತ್ (ನ್ಯಾಯಾಲಯ) ಹಾಗೂ ಅಮೇರಿಕಾ– ಈ ಶಕ್ತಿಗಳ ವಿಶ್ವಾಸ ಗಳಿಸಿದರೆ ಸುದೀರ್ಘ ಅವಧಿಗೆ ಅಧಿಕಾರದಲ್ಲಿರಬಹುದು.

ಪ್ರಸ್ತುತ ಪಾಕಿಸ್ತಾನದಲ್ಲಿ ಸೇನೆಯ ಆಣತಿಯಂತೆ ನಡೆಯುವ ಪ್ರಧಾನಿ ಶಹಬಾಜ್ ಶರೀಫ್ ನೇತೃತ್ವದ ನಾಗರಿಕ ಸರಕಾರವಿದೆ. ಒಂದು ರೀತಿಯಲ್ಲಿ ಹೈಬ್ರಿಡ್ ಸರಕಾರವಿದೆ. ಸೇನಾಡಳಿತದ ಸಮರ್ಥಕರು, ದೇಶದ ಆಡಳಿತ ನಡೆಸುವ ಆಸಕ್ತಿ ಸೇನೆಗಿಲ್ಲ. ಆದರೆ ಪಾಕ್‌ನಲ್ಲಿರುವ ಚುನಾಯಿತ ನಾಗರಿಕ ಸರಕಾರಗಳಿಂದ ಪಾಕಿಸ್ತಾನವನ್ನು ರಕ್ಷಿಸಲು ಸೇನೆ ಹಸ್ತಕ್ಷೇಪಿಸುತ್ತಿದೆ ಎನ್ನುತ್ತಾರೆ. ಪಾಕ್‌ನ ದುರದೃಷ್ಟವೆಂದರೆ ಅಲ್ಲಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರಕಾರಗಳು, ಸೇನಾಡಳಿತಗಳು ಭ್ರಷ್ಟ ಅಧ್ಯಕ್ಷ ಮತ್ತು ಸಾಮರ್ಥ್ಯಹೀನವಾಗಿವೆ. ಪಾಕಿಸ್ತಾನದ ಇನ್ನೂ ಒಂದು ವಿಚಿತ್ರವೆಂದರೆ ನಾಗರಿಕ ಸರಕಾರದ ಪ್ರಮುಖರು, ಸೇನಾಡಳಿತಗಾರರು ತಮ್ಮ ವೈಫಲ್ಯ ಮುಚ್ಚಿ ಹಾಕಲು ಇಸ್ಲಾಂ ಅಪಾಯದಲ್ಲಿದೆ ಎಂದು ಸುದ್ದಿ ಹಬ್ಬಿಸಿದರೆ ಸರಕಾರಗಳ ವಿರುದ್ಧ ಜನಸಾಮಾನ್ಯರಿಗಿರುವ ಆಕ್ರೋಶ ಸ್ವಲ್ಪ ಕಾಲ ತಣ್ಣಗಾಗಿರುತ್ತದೆ. ಇದನ್ನು ತಿಳಿದ ಅಯೂಬ್ ಖಾನ್‌ರು 1958ರಲ್ಲಿ ಈ ವಿಷಯ ಪ್ರಸ್ತಾಪಿಸಿ

> "ಪಾಕಿಸ್ತಾನದಲ್ಲಿರುವ ಅತ್ಯಂತ ನಾಜೂಕಿನ ಪರಿಸ್ಥಿತಿ ಪಾಕ್ ಸಹಿತ ದಕ್ಷಿಣ ಪೂರ್ವ ಏಷ್ಯಾದ ಪ್ರಾದೇಶಿಕ ಸ್ಥಿರತೆ, ಶಾಂತಿಗೆ ಅಪಾಯಕಾರಿಯಾಗಿದೆ. ಭಾರತವು ಅಭಿವೃದ್ಧಿ ಮತ್ತು ಆರ್ಥಿಕ ವಿಕಾಸದಿಂದ ದೇಶದೊಳಗೆ ಶಾಂತಿ ಮತ್ತು ಸ್ಥಿರತೆ ತರುವಲ್ಲಿ ಯಶಸ್ವಿಯಾಗಿದೆ. ಪಾಕಿಸ್ತಾನದ ಸರಕಾರಿ ಸಂಸ್ಥೆಗಳ ಮಧ್ಯೆ ವಿಶ್ವಾಸಾರ್ಹತೆ ಮೂಡಿಸಿದಲ್ಲಿ, ಆಂತರಿಕ ಭಿನ್ನಮತ ನಿವಾರಿಸಿದಲ್ಲಿ ನಿಜಾರ್ಥದಲ್ಲಿ ಪ್ರಜಾಸತ್ತಾತ್ಮಕ ದೇಶವಾಗಿ ಬದಲಾಗಬಹುದು. ವ್ಯವಸ್ಥೆಯಲ್ಲಿನ ಕೊರತೆಗಳನ್ನು, ದೋಷಗಳನ್ನು ಸರಿಪಡಿಸುವುದು ಆ ದೇಶದ ಜನರ ಉತ್ತಮ ಜೀವನಕ್ಕಾಗಿ ಅನಿವಾರ್ಯವಾಗಿದೆ.

ಅಧಿಕಾರದಲ್ಲಿ ಉಳಿದರು. 1969 ರಲ್ಲಿ ಯಾಹ್ಯಾ ಖಾನ್ ಆನಂತರ ಮುಷರ್ರಫ್ ಕೂಡ ಇದನ್ನೇ ಹೇಳಿ ಅಧಿಕಾರದಲ್ಲಿ ಮುಂದುವರಿದಿದ್ದರು. ಇಮ್ರಾನ್ ಖಾನ್‌ರು ಇದನ್ನೇ ಉಚ್ಚರಿಸಿದ್ದರು.

ಪಾಕ್ ರಾಜಕೀಯದ ಪ್ರಮುಖ ಲಕ್ಷಣವಾದ ಅಸ್ಥಿರತೆಯನ್ನು ಪ್ರತಿ ಬಾರಿ ಸರಿಪಡಿಸುವ ತೋರಿಕೆ ಶಕ್ತಿಯಾಗಿ ಸೇನೆ ಕಾರ್ಯಾಚರಿಸುತ್ತಿದೆ. ಆದರೆ ಈ ಬಾರಿ ಸೇನೆಗೆ ದೇಶದ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವಿಲ್ಲ ಎಂಬುದು ಪಾಕ್ ಜನತೆಗೆ ಮನವರಿಕೆಯಾಗಿದೆ. ಪ್ರತಿ ಬಾರಿ ದೇಶದ ಆಡಳಿತ ಸೇನೆ ವಹಿಸಿದಾಗ ಆರಂಭದಲ್ಲಿ ಉತ್ತಮವೆಂದು ತೋರಿದರೂ ಕೊನೆಯಲ್ಲಿ ವಿಫಲವಾಗುತ್ತಿದೆ. ಆದರೂ ಪಾಕ್ ರಾಜಕಾರಣದಲ್ಲಿ ಸೇನಾ ಮಹತ್ವ ಕಡಿಮೆಯಾಗಿಲ್ಲ, ಅಂತ್ಯವೂ ಆಗಿಲ್ಲ. ಜುಲ್ಫಿಕಾರ್ ಆಲಿ ಭುಟ್ಟೋ ಕಾಲದಲ್ಲಿ ಸೇನೆಯ ಮಹತ್ವ ಕಡಿಮೆಯಾಗಿತ್ತು. ಇದರ ಪರಿಣಾಮ ಎಂಬಂತೆ ಎರಡನೇ ವರ್ಷದಲ್ಲೇ ಭುಟ್ಟೋರನ್ನು ಸೇನೆ ಗಲ್ಲಿಗೇರಿಸಿತು.

ಪಾಕಿಸ್ತಾನದ ರಾಜಕೀಯದಲ್ಲಿ ಪ್ರಯೋಗಗಳಾಗುವುದಿಲ್ಲ. ಅಲ್ಲಿ ಪ್ರಯೋಗಗಳ ಮೇಲೆಯೇ ಪ್ರಯೋಗಗಳಾಗುತ್ತವೆ. ಸೇನಾಧಿಕಾರಿಗಳ ಮೇಜುಗಳ ಮೇಲೆ ರಾಜಕೀಯ ಪಕ್ಷಗಳ ಸೃಷ್ಟಿ, ಬೆಳವಣಿಗೆಯಾಗುತ್ತದೆ. ಅದೇ ಮೇಜಿನಲ್ಲಿ ಸೃಷ್ಟಿಯಾದ ಪಕ್ಷಕ್ಕೆ ವಿರೋಧವನ್ನು ರೂಪಿಸಲಾಗುತ್ತದೆ. ಅಲ್ಲೇ ಅದನ್ನು ನಾಶ ಮಾಡಿ ಮತ್ತೆ ಹೊಸ ಪಕ್ಷ ಪ್ರಾರಂಭಿಸುವ ಸರಣಿ ಮುಂದುವರಿಯುತ್ತದೆ. ಮತ್ತೆ ಹೊಸ ಬಾಟಲಿಯಲ್ಲಿ ಹಳೆ ಮದ್ಯ ಬರುತ್ತದೆ.

ಈ ವಿಷಯಗಳನ್ನು ತಿಳಿದ ಇಮ್ರಾನ್ ಖಾನ್‌ರು ತಮ್ಮ ಅಧಿಕಾರದ ಕೊನೆಯ ದಿನಗಳಲ್ಲಿ ಅಮೇರಿಕ ಸೇನೆಯನ್ನು ಕಟುವಾಗಿ ಟೀಕಿಸಿದರು. ಇದರ ಪರಿಣಾಮ ಸೇನೆ ಅವರನ್ನು ಪ್ರಧಾನಿ ಪಟ್ಟದಿಂದ ಬಲಮತವಾಗಿ ಕೆಳಗಿಳಿಸಿತು. ಕೊನೆಗೆ ಬಂಧಿಸಲಾಯಿತು. ಆ ನಂತರ ಅವರ ಮೇಲೆ ಗುಂಡಿನ ದಾಳಿಯಾಯಿತು. ಇಮ್ರಾನ್ ಖಾನ್‌ರ ಪಕ್ಷ ತೆಹ್ರಿಕ್–ಎ–ಇನ್ಸಾಫ್‌ನ ಸಮರ್ಥಕರು, ಕಾರ್ಯಕರ್ತರು ಮೇ 9ರಂದು ಸೇನಾ ನೆಲೆಗಳ ಮೇಲೆ ದಾಳಿ ಮಾಡಿದರು. ಇಮ್ರಾನ್‌ಖಾನ್‌ರು ಸೇನಾ ಪ್ರಮುಖರ ಮೇಲೆ ಕಟುವಾದ ಟೀಕಾ ಪ್ರಹಾರ ಮಾಡಿದರು. ಸೇನೆ ಮೌನವಾಗಿ ಪ್ರತ್ಯುತ್ತರ ನೀಡಲಾರಂಭಿಸಿದೆ. ದೇಶಾದ್ಯಂತ ಇಮ್ರಾನ್ ಖಾನ್ ಪಕ್ಷದ ಸಹಸ್ರಾರು ಬೆಂಬಲಿಗರನ್ನು ಬಂಧಿಸಲಾಗಿದೆ. ಹಿಂದೆ ನವಾಜ್ ಷರೀಫ್‌ಗೆ ಮಾಡಿದಂತೆ ಸೇನೆಯ ಬೆದರಿಕೆಗೆ ಇಮ್ರಾನ್ ಖಾನ್ ಪಕ್ಷದ ಮುಂಚೂಣಿ ನಾಯಕರು, ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಪಕ್ಷ ತ್ಯಜಿಸುತ್ತಿದ್ದಾರೆ. ಪಾಕಿಸ್ತಾನ ಮತ್ತೊಮ್ಮೆ ಸಂಪೂರ್ಣ ಮಿಲಿಟರಿ ಆಡಳಿತದತ್ತ ಸರಿಯುತ್ತಿದೆ.

ಇದಕ್ಕೆ ಪ್ರತಿಯಾಗಿ ಭಾರತದಲ್ಲಿ ಪ್ರಜಾಪ್ರಭುತ್ವದ ಬೇರುಗಳು ಬಲಿಷ್ಠವಾಗಿವೆ. ಜಗತ್ತೇ ಬೆರಗಾಗುವ ರೀತಿಯಲ್ಲಿ ಕಾಲ ಕಾಲಕ್ಕೆ ಅತ್ಯಂತ ಪಾರದರ್ಶಕವಾಗಿ ಚುನಾವಣೆಗಳು ನಡೆದು ಶಾಂತಿಯುತವಾಗಿ ಅಧಿಕಾರ ಹಸ್ತಾಂತರ ವ್ಯವಸ್ಥಿತವಾಗಿ ನಡೆಯುತ್ತಿವೆ. ಇದರ ಪರಿಣಾಮ ಭಾರತವಿಂದು ಜಗತ್ತಿನ ಆರ್ಥಿಕ ಚಟುವಟಿಕೆಯ ಕೇಂದ್ರವಾಗುತ್ತಿದೆ. ರಾಜಕೀಯ ಸ್ಥಿರತೆ, ಸ್ಥಿರ ಸರಕಾರಗಳಿಂದಾಗಿ ದೇಶವು ಆರ್ಥಿಕವಾಗಿ ಬಲಶಾಲಿಯಾಗಿದೆ. ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 189 ದೇಶಗಳಲ್ಲಿ 131ನೇ ಸ್ಥಾನದಲ್ಲಿದ್ದರೆ, ಪಾಕಿಸ್ತಾನವು 154ನೇ ಸ್ಥಾನದಲ್ಲಿದೆ. ಉದ್ಯಮ ಸ್ನೇಹಿ ಸೂಚ್ಯಂಕದಲ್ಲಿ ಭಾರತವು 63ನೇ ಸ್ಥಾನದಲ್ಲಿದ್ದರೆ ಪಾಕಿಸ್ತಾನ 108ನೇ ಸ್ಥಾನದಲ್ಲಿದೆ. ಭಾರತದ ವಿದೇಶಿ ವಿನಿಮಯ ಸಂಗ್ರಹ 596 ಬಿಲಿಯನ್ ಡಾಲರ್‌ಗೆ ಏರಿಕೆಯಾದರೆ ಕಳೆದ ತಿಂಗಳು ಪಾಕ್‌ನ ವಿ.ವಿ. ಸಂಗ್ರಹ ಕೇವಲ 4.38 ಬಿಲಿಯನ್ ಡಾಲರ್ ಆಗಿತ್ತು.

ಪಾಕಿಸ್ತಾನದಲ್ಲಿರುವ ಅತ್ಯಂತ ನಾಜೂಕಿನ ಪರಿಸ್ಥಿತಿ ಪಾಕ್ ಸಹಿತ ದಕ್ಷಿಣ ಪೂರ್ವ ಏಷ್ಯಾದ ಪ್ರಾದೇಶಿಕ ಸ್ಥಿರತೆ, ಶಾಂತಿಗೆ ಅಪಾಯಕಾರಿಯಾಗಿದೆ. ಭಾರತವು ಅಭಿವೃದ್ಧಿ ಮತ್ತು ಆರ್ಥಿಕ ವಿಕಾಸದಿಂದ ದೇಶದೊಳಗೆ ಶಾಂತಿ ಮತ್ತು ಸ್ಥಿರತೆ ತರುವಲ್ಲಿ ಯಶಸ್ವಿಯಾಗಿದೆ. ಪಾಕಿಸ್ತಾನದ ಸರಕಾರಿ ಸಂಸ್ಥೆಗಳ ಮಧ್ಯೆ ವಿಶ್ವಾಸಾರ್ಹತೆ ಮೂಡಿಸಿದಲ್ಲಿ, ಆಂತರಿಕ ಭಿನ್ನಮತ ನಿವಾರಿಸಿದಲ್ಲಿ ನಿಜಾರ್ಥದಲ್ಲಿ ಪ್ರಜಾಸತ್ತಾತ್ಮಕ ದೇಶವಾಗಿ ಬದಲಾಗಬಹುದು. ವ್ಯವಸ್ಥೆಯಲ್ಲಿನ ಕೊರತೆಗಳನ್ನು, ದೋಷಗಳನ್ನು ಸರಿಪಡಿಸುವುದು ಆ ದೇಶದ ಜನರ ಉತ್ತಮ ಜೀವನಕ್ಕಾಗಿ ಅನಿವಾರ್ಯವಾಗಿದೆ.

ಭಾರತದಲ್ಲಿರುವ ಬಲವಾದ ಪ್ರಜಾಸತ್ತಾತ್ಮಕ ವ್ಯವಸ್ಥೆ ಮತ್ತು ಜನಸಾಮಾನ್ಯರಿಗೆ ವ್ಯವಸ್ಥೆ ಮೇಲಿರುವ ನಂಬಿಕೆಯಿಂದಾಗಿ ಭಾರತ ಯಶಸ್ವಿ ರಾಷ್ಟ್ರವಾಗಿದೆ. ಆದರೆ ಪಾಕಿಸ್ತಾನದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಗಳನ್ನು ರಕ್ಷಿಸುವಲ್ಲಿ ತೋರಿದ ವೈಫಲ್ಯದಿಂದ ಪಾಕ್ ವಿಫಲ ರಾಷ್ಟ್ರವಾಗಿದೆ. ದ್ವೇಷ, ಮತಾಂಧತೆಯ ಆಧಾರದಲ್ಲಿ ನಿರ್ಮಾಣವಾದ ಕೃತಕ ದೇಶ ಪಾಕ್ ಜಗತ್ತಿನಲ್ಲಿಂದು ಯಾರಿಗೂ ಬೇಡವಾದ, ನಂಬಿಕೆಗೆ ಯೋಗ್ಯವಲ್ಲದ ಪರಿತ್ಯಕ್ತ ದೇಶವೆನಿಸಿದೆ. ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಬದ್ಧತೆ ಇದ್ದಲ್ಲಿ ಪ್ರಪಂಚದ ಯಾವುದೇ ದೇಶ ಸ್ಥಿರತೆ ಮತ್ತು ಸಮೃದ್ಧಿ ಸಾಧಿಸಲು ಸಾಧ್ಯ ಎಂಬುದಕ್ಕೆ ಭಾರತವು ಉದಾಹರಣೆಯಾಗಿದೆ.

ಮೈಸೂರು ಜಿಲ್ಲೆಯಲ್ಲಿ 71 ಬಾಲ ಕಾರ್ಮಿಕರ ರಕ್ಷಣೆ

ಇದೊಂದು ಅಪರಾಧ ಕೃತ್ಯ, ಪ್ರಕರಣ ದಾಖಲಿಸುವುದರ ಜೊತೆಗೆ ಭಾರೀ ದಂಡ



ಮೈಸೂರು, ಜೂ.12(ಎಂಕೆ)– ಕಾರ್ಮಿಕ ಇಲಾಖೆ ಕಳೆದೊಂದು ವರ್ಷದಲ್ಲಿ ಮೈಸೂರು ಜಿಲ್ಲೆಯ ವಿವಿಧೆಡೆ ನಡೆಸಿರುವ ಬಾಲಕಾರ್ಮಿಕರ 660 ತಪಾಸಣಾ ಕಾರ್ಯಾಚರಣೆಯಲ್ಲಿ 71 ಬಾಲ ಕಾರ್ಮಿಕರನ್ನು ರಕ್ಷಣೆ ಮಾಡಲಾಗಿದೆ.

2022ರ ಏಪ್ರಿಲ್ ನಿಂದ 2023ರ ಮಾರ್ಚ್ ವರೆಗೆ ಕಾರ್ಮಿಕ ಅಧಿಕಾರಿ, ಹಿರಿಯ ಕಾರ್ಮಿಕ ನಿರೀಕ್ಷಕರು ಹಾಗೂ ಕಾರ್ಮಿಕ ನಿರೀಕ್ಷರ ನೇತೃತ್ವದಲ್ಲಿ ನಡೆಸಲಾಗಿರುವ ಬಾಲಕಾರ್ಮಿಕರ ಪತ್ತೆ ಕಾರ್ಯಾಚರಣೆಯಲ್ಲಿ 20 ಬಾಲ ಕಾರ್ಮಿಕರು ಹಾಗೂ 51 ಕಿಶೋರ ಕಾರ್ಮಿಕರು ಸೇರಿ ಒಟ್ಟು 70 ಬಾಲ ಕಾರ್ಮಿಕರನ್ನು ರಕ್ಷಣೆ ಮಾಡಿ ಮಕ್ಕಳ ಕಲ್ಯಾಣ ಸಮಿತಿ ಮಾರ್ಗದರ್ಶನದ ಮೇರೆಗೆ ಬಾಲಮಂದಿರಗಳಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ.

ಮೈಸೂರಿನ ಹಿರಿಯ ಕಾರ್ಮಿಕ ನಿರೀಕ್ಷಕರ ವೃತ್ತ–1ರ ವ್ಯಾಪ್ತಿಯಲ್ಲಿ 153 ತಪಾಸಣೆಗಳಲ್ಲಿ 19 ಬಾಲ ಕಾರ್ಮಿಕರು ಪತ್ತೆಯಾದರೆ, ಮೈಸೂರು 2ನೇ ವೃತ್ತ ವ್ಯಾಪ್ತಿಯಲ್ಲಿ 55 ತಪಾಸಣೆಯಲ್ಲಿ 4, ಮೈಸೂರು 3ನೇ ವೃತ್ತ ವ್ಯಾಪ್ತಿಯಲ್ಲಿ 77 ತಪಾಸಣೆಗಳಲ್ಲಿ 2, ಮೈಸೂರು 4ನೇ ವೃತ್ತ ವ್ಯಾಪ್ತಿಯಲ್ಲಿ 69 ತಪಾಸಣೆಯಲ್ಲಿ 9, ನಂಜನಗೂಡು ತಾಲೂಕು ವ್ಯಾಪ್ತಿಯಲ್ಲಿ 50 ತಪಾಸಣೆಯಲ್ಲಿ 11, ಟಿ.ನರಸೀಪುರ ತಾಲೂಕು ವ್ಯಾಪ್ತಿಯಲ್ಲಿ 32 ತಪಾಸಣೆಯಲ್ಲಿ 10, ಕೆ.ಆರ್.ನಗರ ಮತ್ತು ಸಾಲಿಗ್ರಾಮ ವ್ಯಾಪ್ತಿಯಲ್ಲಿ 57 ತಪಾಸಣೆಯಲ್ಲಿ 3, ಪಿರಿಯಾಪಟ್ಟಣ ವ್ಯಾಪ್ತಿಯಲ್ಲಿ 67 ತಪಾಸಣೆಯಲ್ಲಿ 4, ಹುಣಸೂರು 60 ತಪಾಸಣೆಯಲ್ಲಿ 9 ಬಾಲಕಾರ್ಮಿಕರು ಪತ್ತೆಯಾಗಿದ್ದರೆ. ಹೆಚ್.ಡಿ. ಕೋಟೆ ಮತ್ತು ಸರಗೂರು ವ್ಯಾಪ್ತಿಯಲ್ಲಿ 34 ತಪಾಸಣೆ ನಡೆಸಿದ್ದು, ಬಾಲಕಾರ್ಮಿಕರು ಪತ್ತೆಯಾಗಿಲ್ಲ.


ದಂಡ ವಸೂಲಿ: ಬಾಲಕಾರ್ಮಿಕರಿಂದ ದುಡಿಸಿಕೊಳ್ಳುವವರ ವಿರುದ್ಧ ಬಾಲ ಅಥವಾ ಕಿಶೋರ ಕಾರ್ಮಿಕ ಕಾಯ್ದೆಯಡಿ 36 ಪ್ರಕರಣ ದಾಖಲಿಸಿ 8,13,334 ರೂ. ದಂಡ ವಸೂಲಿ ಮಾಡಲಾಗಿದೆ. ಹಾಗೆಯೇ ನ್ಯಾಯಾಲಯಗಳಲ್ಲಿ ಖುಲಾಸೆಗೊಳಿಸಿ ದಂಡ ವಿಧಿಸಿರುವ 8 ಪ್ರಕರಣಗಳಿಂದ 1,20,000 ರೂ. ವಸೂಲಿ ಮಾಡಲಾಗಿದೆ.

ಬಾಲಕಾರ್ಮಿಕರಿಗೆ ಶಿಕ್ಷಣ: ಕಳೆದೊಂದು ವರ್ಷದಲ್ಲಿ ಜಿಲ್ಲೆಯಲ್ಲಿ ಪತ್ತೆಯಾದ 71 ಬಾಲ ಕಾರ್ಮಿಕರ ಪೈಕಿ 4 ಮಕ್ಕಳು ವಲಸೆ ಕಾರ್ಮಿಕ ಮಕ್ಕಳಾಗಿದ್ದು, ಉಳಿದಂತೆ ಎಲ್ಲಾ ಮಕ್ಕಳು ಶಾಲೆಯಲ್ಲಿ ವ್ಯಾಸಂಗ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಗಿರಿಜನ ಉಪಯೋಜನೆಯಡಿ ನಂಜನಗೂಡು ಮತ್ತು ಟಿ.ನರಸೀಪುರ ತಾಲೂಕಿನಲ್ಲಿ ಕಂಡು ಬಂದ 6 ಮಕ್ಕಳಿಗೆ ಪುಸ್ತಕ ಹಾಗೂ ಲೇಖನ ಸಾಮಾಗ್ರಿಗಳ ಕಿಟ್ ವಿತರಿಸುವ ಮೂಲಕ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗಿದೆ.

ಜನಜಾಗೃತಿ: ಜಿಲ್ಲಾ ವ್ಯಾಪ್ತಿಯಲ್ಲಿ ಬಾಲ ಕಾರ್ಮಿಕರ ಪದ್ಧತಿ ನಿರ್ಮೂಲನೆಗಾಗಿ ಬೀದಿ ನಾಟಕ, ಗೋಡೆ ಬರಹ, ಕರಪತ್ರ ಹಂಚುವಿಕೆ, ಕಾನೂನು ಅರಿವು ಕಾರ್ಯಕ್ರಮ, ಕಾರ್ಯಾಗಾರ ಹಾಗೂ ಭಿತ್ತಿ ಪತ್ರ ಅಂಟಿಸುವ ಮೂಲಕ ಮಕ್ಕಳನ್ನು ಕೆಲಸಕ್ಕೆ ಕಳುಹಿಸುವ ಬದಲು ಶಿಕ್ಷಣ ಕೊಡಿಸಿ ಎಂಬ ಅರಿವಿನ ಜೊತೆಗೆ ಬಾಲಕಾರ್ಮಿಕರನ್ನು ಬಳಸಿಕೊಂಡರೆ ಕಾನೂನು ಕ್ರಮಗಳ ಕೈಗೊಳ್ಳುವ ಕುರಿತು ಎಚ್ಚರಿಕೆ ನೀಡಲಾಗುತ್ತಿದೆ.

ಅಪರಾಧ: ಕಾರ್ಖಾನೆಗಳು, ಹೋಟೆಲ್‌ಗಳು ಸೇರಿದಂತೆ ವಿವಿಧ ಬಗೆಯ ಕೆಲಸ ಸ್ಥಳಗಳಲ್ಲಿ 5–14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದು ಅಪರಾಧವಾಗಿದೆ. ಅದರಲ್ಲೂ 14 ವರ್ಷದೊಳಗಿದ್ದರೆ ಕೆಲಸದ ವ್ಯಾಪ್ತಿಯೊಳಗಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗುವುದು ಎಂದು ಮೈಸೂರು ಜಿಲ್ಲಾ ಕಾರ್ಮಿಕ ಅಧಿಕಾರಿ ರಾಜೇಶ್ ಜಾಧವ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

10 ಪಟ್ಟು ದಂಡ ವಸೂಲಿ...



"ಬಾಲ ಕಾರ್ಮಿಕರನ್ನು ಬಳಸಿಕೊಂಡವರ ವಿರುದ್ಧ ಜೆಎಂಎಫ್‌ಸಿ (ಪ್ರಥಮ ದರ್ಜೆಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯ)ಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಲಿದೆ. ಅದಕ್ಕೂ ಮುನ್ನ ತಪಾಸಣೆ ನಡೆಸುವ ವೇಳೆ ಬಾಲಕಾರ್ಮಿಕರೆಂದು ದೃಢಪಟ್ಟಲ್ಲಿ ಕನಿಷ್ಠ ವೇತನ ಕಾಯ್ದೆಯಡಿ ಬಾಲಕಾರ್ಮಿಕನಿಗೆ ನೀಡುತ್ತಿದ್ದ ಸಂಬಳದ ವ್ಯತ್ಯಾಸದ ಹಣವನ್ನು ಲೆಕ್ಕಾಚಾರ ಮಾಡಿ ಸಂಬಳದ 10 ಪಟ್ಟು ಹಣವನ್ನು ದಂಡದ ರೂಪವಾಗಿ ಬಾಲಕಾರ್ಮಿಕನಿಗೆ ಕೊಡಿಸಲಾಗುವುದು. ಹಾಗೆಯೇ ಬಾಲ ಕಾರ್ಮಿಕರಿಂದ ಹೇಳಿಕೆ ಪಡೆದು ಬಾಲಮಂದಿರಗಳಿಗೆ ಕಳುಹಿಸಲಾಗುವುದು. ಈ ವೇಳೆ ಮಕ್ಕಳ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತೇವೆ ಎಂದು ಲಿಖಿತ ರೂಪದಲ್ಲಿ ಬರೆದುಕೊಟ್ಟರಷ್ಟೇ ಅವರೊಂದಿಗೆ ಕಳುಹಿಸಲಾಗುವುದು. ಹಾಗೆಯೇ ಸಾರ್ವಜನಿಕ ಶಿಕ್ಷಣ ಇಲಾಖೆಯ ಹಾಜರಾತಿ ಪ್ರಾಧಿಕಾರಕ್ಕೆ ಮಾಹಿತಿ ನೀಡಿ ಮಕ್ಕಳ ವಿದ್ಯಾಭ್ಯಾಸದ ಕುರಿತು ಆಗಾಗ ಮಾಹಿತಿ ಪಡೆಯಲಾಗುವುದು. –ರಾಜೇಶ್ ಜಾದವ್, ಜಿಲ್ಲಾ ಕಾರ್ಮಿಕ ಅಧಿಕಾರಿ

ರಾಜ್ಯದ ಹಲವೆಡೆ ಮುಂದಿನ 4 ದಿನ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಮುಂದಿನ 4 ದಿನ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಿಪಾರ್ ಜಾಯ್ ಚಂಡಮಾರುತ ಪ್ರಭಾವದ ಕಾರಣ ಜೂ.15ರವರೆಗೆ ಅರಬ್ಬಿ ಸಮುದ್ರದಲ್ಲಿ ಮೀನುಗಾರಿಕೆ ಕಾರ್ಯಾಚರಣೆ ಸಂಪೂರ್ಣವಾಗಿ ಸ್ಥಗಿತಗೊಳಿಸುವಂತೆ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಇದರಿಂದಾಗಿ ಕರಾವಳಿ ಪ್ರದೇಶಗಳಲ್ಲಿ ದೋಣಿಗಳನ್ನು ಎತ್ತರದ ಪ್ರದೇಶಕ್ಕೆ ಮೀನುಗಾರರು ಸ್ಥಳಾಂತರಿಸಿದ್ದಾರೆ. ಕರಾವಳಿ ಕರ್ನಾಟಕ, ಮಲೆನಾಡು, ದಕ್ಷಿಣ ಒಳನಾಡಿನಲ್ಲಿ ಮಳೆಯಾಗಲಿದೆ. ಮುಂಗಾರು ಮಳೆ ನಿರೀಕ್ಷೆಯಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಶಿವಮೊಗ್ಗದಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂಬ ಎಚ್ಚರಿಕೆ ಸಿಕ್ಕಿದೆ.

ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ಮಂಡ್ಯ, ಚಾಮರಾಜನಗರ, ಮೈಸೂರು, ತುಮಕೂರು, ವಿಜಯನಗರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ನಾಳೆ ರಕ್ತದಾನ ಶಿಬಿರ

ಮೈಸೂರು,ಜೂ.12–ರಕ್ತದಾನದ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಸುಯೋಗ್ ಆಸ್ಪತ್ರೆ ವತಿಯಿಂದ ಜೂ.14ರ ಬೆಳಗ್ಗೆ 10.30ಕ್ಕೆ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಕೆ.ಆರ್. ಕ್ಷೇತ್ರದ ಶಾಸಕ ಶ್ರೀವತ್ಸ ಶಿಬಿರ ಉದ್ಘಾಟಿಸಲಿದ್ದು, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ರಕ್ತದಾನದ ಮಹತ್ವ ಕುರಿತು ಕೆ.ಆರ್.ಆಸ್ಪತ್ರೆ ಬ್ಲಡ್ ಬ್ಯಾಂಕ್ ಅಧಿಕಾರಿ ಡಾ.ಮಂಜುನಾಥ್ ಉಪನ್ಯಾಸ ನೀಡಲಿದ್ದಾರೆ. ರಕ್ತದಾನ ಮಾಡುವ ಆಸಕ್ತ ದಾನಿಗಳು ತಮ್ಮ ಹೆಸರನ್ನು 0821–2533600, 9986399862 ನೋಂದಾಯಿಸಿಕೊಳ್ಳಬಹುದು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಜೂ.12–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜೂ.15ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಯುಎಇಯಲ್ಲಿ ಉದ್ದಿಮೆ ಆರಂಭಿಸಲು ರಫ್ತು ಉದ್ಯಮಿಗಳ ಆಸಕ್ತಿ

ಉನ್ನತ ಮಟ್ಟದ ಯುಎಇ ನಿಯೋಗದಿಂದ ಮೈಸೂರಲ್ಲಿ ಉದ್ದಿಮೆದಾರರೊಂದಿಗೆ ಸಮಾಲೋಚನೆ



ಮೈಸೂರು, ಜೂ. 12(ಆರ್‌ಕೆ)– ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ನಲ್ಲಿ ಉದ್ದಿಮೆ ಸ್ಥಾಪಿಸಿ, ವಹಿವಾಟು ನಡೆಸಲು ಮೈಸೂರಿನ ಕೈಗಾರಿಕೋದ್ಯಮಿಗಳು ಆಸಕ್ತಿ ತೋರಿದ್ದಾರೆ.

ಮೈಸೂರು ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಎಂಸಿಸಿಐ) ಪದಾಧಿಕಾರಿಗಳು ಅಸೋಸಿಯೇಟೆಡ್ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಆಫ್ ಇಂಡಿಯಾ (ASSOCHAM) ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ನ ಶಾರ್ಜಾ ಸರ್ಕಾರದ ನಿಯೋಗದೊಂದಿಗೆ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ "ಯುಎಇ ಮೂಲಕ ವಿಶ್ವ ಮಟ್ಟದಲ್ಲಿ ಉದ್ದಿಮೆ ವಿಸ್ತರಿಸುವ" ಕುರಿತ ಸಭೆಯಲ್ಲಿ 50ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಸಮಾಲೋಚನೆ ನಡೆಸಿದರು.

ಯುಎಇ ಶಾರ್ಜಾ ಸರ್ಕಾರದ ಕಮರ್ಷಿಯಲ್ ಅಫೇರ್ಸ್‌ನ ಡೆಪ್ಯುಟಿ ಎಕ್ಸಿಕ್ಯೂಟಿವ್ ಡೈರೆಕ್ಟರ್ ಅಲಿ ಅಲ್ ಜರ್ವಾನ, ಓವರ್ ಸೀಸ್ ಪ್ರೊಮೋಷನ್ ಮುಖ್ಯಸ್ಥ ಮೊಹಮ್ಮದ್ ಬಷೀರ್, ಬ್ಯುಸಿನೆಸ್ ಡೆವೆಲಪ್‌ಮೆಂಟ್ ಮುಖ್ಯಸ್ಥ ಜಿಯೋಮಾನ್ ಜಾರ್ಜ್, ಉಪನಿರ್ದೇಶಕ ಇರ್ಫಾನ್ ಅಲನ್ ಹಾಗೂ ಹಿರಿಯ ಅಧಿಕಾರಿಗಳು ಇಂದು ಮೈಸೂರಿನ ಕೈಗಾರಿಕೋದ್ಯಮಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಮೈಸೂರು ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಕೆ.ಬಿ. ಲಿಂಗರಾಜು, ಮಾಜಿ ಅಧ್ಯಕ್ಷ ಎ.ಎಸ್. ಸತೀಶ್, ಉಪಾಧ್ಯಕ್ಷ ಆರ್. ಆನಂದ, ಕಾರ್ಯದರ್ಶಿ ಕೆ ಶಿವಾಜಿರಾವ್, ಖಜಾಂಚಿ ಎಸ್‌ಜಿ ಅಶೋಕ್, ಜಂಟಿ ಕಾರ್ಯದರ್ಶಿ ವಿನೋದ ಜೈನ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದು, ಸಮಾಲೋಚನೆಗೆ ಸಹಕಾರ ನೀಡಿದರು.

ಯುಎಇಯಲ್ಲಿ ಉದ್ದಿಮೆ ಆರಂಭಿಸಲು ಎಸ್‌ಇಝೆಡ್‌ನಲ್ಲಿ ನೋಂದಣಿಯಾಗಿರುವ ಮೈಸೂರಿನ ಕೈಗಾರಿಕೋದ್ಯಮಿಗಳಿಗೆ ಶಾರ್ಜಾ ಸರ್ಕಾರವು ಗುತ್ತಿಗೆ ಆಧಾರ ದಲ್ಲಿ ಅಗತ್ಯ ಭೂಮಿ ನೀಡಿ, ಉದ್ದಿಮೆ ರಹದಾರಿ, ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದಲ್ಲದೆ, ರಫ್ತು ಉದ್ಯಮಕ್ಕೂ ಉತ್ತೇಜನ ನೀಡಲಿದೆ ಎಂದು ಇರ್ಫಾನ್ ಅಲನ್ ಮೈಸೂರು ಉದ್ಯಮಿಗಳಿಗೆ ಇದೇ ವೇಳೆ ಭರವಸೆ ನೀಡಿದರು.

ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಆರ್ಥಿಕ ಅಭಿವೃದ್ಧಿಯಾಗಿದ್ದು, ರಫ್ತು ಉದ್ಯಮಕ್ಕೆ ಹೆಚ್ಚು ಒತ್ತು ನೀಡುತ್ತಿದೆ. ಸಾರಿಗೆ ಸಂಪರ್ಕ, ಮೂಲಭೂತ ಸೌಕರ್ಯ ಹೊಂದಿರುವ ಶಾರ್ಜಾದಲ್ಲಿ ಮುಕ್ತ ಮಾರಾಟ ವಲಯವಿದ್ದು, ಕೈಗಾರಿಕೆಗಳಿಗೆ ಅತ್ಯಂತ ಕಡಿಮೆ ತೆರಿಗೆ ಜಾರಿಯಲ್ಲಿರುವುದರಿಂದ ಉದ್ಯಮಿಗಳಿಗೆ ಅನುಕೂಲವಾಗಲಿದೆ ಎಂದು ಅವರು ತಿಳಿಸಿದರು.

ಮುಕ್ತ ಮಾರಾಟ ವಲಯಗಳಲ್ಲಿ ಎಲ್ಲಾ ಕೈಗಾರಿಕೋದ್ಯಮಿಗಳಿಗೂ ತೆರಿಗೆ ರಹಿತ ವ್ಯವಹಾರಕ್ಕೆ ಅವಕಾಶವಿದ್ದು, ರಫ್ತು ಮತ್ತು ಆಮದು ವಹಿವಾಟಿಗೂ ಶೇ. 100ರಷ್ಟು ತೆರಿಗೆ ವಿನಾಯಿತಿ ಇರುವುದಲ್ಲದೇ, ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಗೋದಾಮು, ಉದ್ದಿಮೆ ವಿಸ್ತರಣೆಗೆ ಪ್ರೋತ್ಸಾಹ ನೀಡಿ, ಎಲ್ಲೆಲ್ಲಿ ಕೈಗಾರಿಕಾ ಉತ್ಪನ್ನಗಳ ವಸ್ತುಪ್ರದರ್ಶನದ ಮೂಲಕ ವ್ಯಾಪಾರಕ್ಕೆ ಅನುವು ಮಾಡಿಕೊಡಲಾಗುತ್ತದೆ ಎಂದು ಅಮು ಮೈಸೂರಿನ ಉದ್ಯಮಿಗಳಿಗೆ ಮಾಹಿತಿ ನೀಡಿದರು.

ಯುಎಇಯಲ್ಲಿ ಭಾರತೀಯ ಶಾಖೆ ತೆರೆದು ವಿದೇಶಗಳಲ್ಲಿ ವ್ಯಾಪಾರ ವಿಸ್ತರಿಸಲು ಹಾಗೂ ಮಾರುಕಟ್ಟೆ ಒದಗಿಸಲು ಅನುಕೂಲ ಮಾಡುವ ಜೊತೆಗೆ ಗಾಲ್ಫ್ ದೇಶ, ಆಫ್ರಿಕಾ, ಯೂರೋಪ್‌ಗಳಂತಹ ರಾಷ್ಟ್ರಗಳಲ್ಲಿ ರಫ್ತು ಉದ್ಯಮ ನಡೆಸಲು ಅಗತ್ಯ ಮಾಹಿತಿ ಮತ್ತು ಪ್ರೋತ್ಸಾಹ ನೀಡಲಾಗುವುದು ಎಂದು ಇರ್ಫಾನ್ ಆಲನ್ ತಿಳಿಸಿದರು.

ನವೀನ ಮಾದರಿಯ ಸೌಲಭ್ಯಗಳು, ಲಾಜಿಸ್ಟಿಕ್ಸ್, ಹೂಡಿಕೆದಾರರ ಸಂಪರ್ಕ, ಕ್ರಿಟಿಕಲ್ ಆಪರೇಷನ್ಸ್ ಸಪೋರ್ಟ್, ವಿಶ್ವ ಮಟ್ಟದ ವ್ಯಾಪಾರ, ಗೂಡ್ಸ್ ಅಂಡ್ ಸರ್ವಿಸ್, ಸಲಹೆ, ಮಾರ್ಗದರ್ಶನ ನೀಡಲಾಗುವುದು ಎಂದ ಅಮು ಶಾರ್ಜಾದಲ್ಲಿ ಶೇ. 30ರಿಂದ 35ರಷ್ಟು ಭಾರತೀಯ ಕಂಪನಿಗಳು ಉದ್ದಿಮೆ ನಡೆಸುತ್ತಿವೆಯಾದ್ದರಿಂದ ನೀವೂ ನೋಂದಣಿ ಮಾಡಿಸಿದಲ್ಲಿ ಸರ್ವ ರೀತಿಯ ಸಹಕಾರ ನೀಡುವುದಾಗಿಯೂ ಅವರು ಭರವಸೆ ನೀಡಿದರು.

ಯೋಗ ದಿನಾಚರಣೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಎಡಿಸಿ ಸೂಚನೆ



ಮೈಸೂರು, ಜೂ.12(ಎಂಕೆ)– ಜೂ.21ರ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಯಶಸ್ವಿಗೆ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಪೂರ್ವ ಸಿದ್ಧತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ(ಎಡಿಸಿ) ಕವಿತಾ ರಾಜರಾಮ್ ಸೂಚಿಸಿದರು.

ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪೂರ್ವಭಾವಿ ಸಭೆ ನಡೆಸಿದ ಅವರು, ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ 500 ಜನರಿಂದ ಸಾಂಕೇತಿಕ ಯೋಗ ಪ್ರದರ್ಶನ ಹಾಗೂ ಅರಮನೆ ಮೈದಾನದಲ್ಲಿ ನಡೆಯುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಸುಮಾರು 12 ಸಾವಿರ ಜನರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಅಂದು ಬೆಳಗ್ಗೆ 6 ಗಂಟೆಯಿಂದ 8 ಗಂಟೆಯವರೆಗೆ ಯೋಗ ಕಾರ್ಯಕ್ರಮ ನಡೆಯಲಿದ್ದು, ಈ ಬಾರಿ ಮ್ಯಾಟ್‌ಗಳನ್ನು ಪೂರೈಸಲಾಗುವುದಿಲ್ಲ. ಯೋಗ ದಿನಾಚರಣೆಯಲ್ಲಿ ಭಾಗವಹಿಸುವವರು ಟೀ ಶರ್ಟ್ ಮತ್ತು ಟ್ರ್ಯಾಕ್ ಪ್ಯಾಂಟ್ ಧರಿಸುವುದು. ಜೊತೆಗೆ ಯೋಗ ಮ್ಯಾಟ್‌ನ್ನೂ ಅವರೇ ತರಬೇಕು ಎಂದರು.

ಪೂರ್ವಾಭ್ಯಾಸ: ಜೂ.18 ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ರಿಹರ್ಸಲ್(ಪೂರ್ವಾಭ್ಯಾಸ) ನಡೆಯಲಿದ್ದು, ಆಸಕ್ತರು ಆ ದಿನವೂ ಭಾಗವಹಿಸಬಹುದು. ಯೋಗ ನಡೆಯುವ ಸ್ಥಳದಲ್ಲಿ ಆಂಬುಲೆನ್ಸ್, ಶೌಚಾಲಯ, ಅಗ್ನಿಶಾಮಕ, ಕುಡಿಯುವ ನೀರು ಹಾಗೂ ಇನ್ನಿತರ ಮೂಲಸೌಕರ್ಯಗಳನ್ನು ಒದಗಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿರುವ ಯೋಗ ಸಂಸ್ಥೆಗಳು, ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಎನ್‌ಎಸ್‌ಎಸ್ ಘಟಕ, ಪದವಿ ಪೂರ್ವ ಶಿಕ್ಷಣ ಇಲಾಖೆ, ಆಯುಷ್ ಯೋಗ ತರಬೇತುದಾರರು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯೋಗ ತರಬೇತುದಾರರು ಸಕ್ರಿಯವಾಗಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳಬೇಕು ಎಂದರು.

ಪಟ್ಟಿ ಬಿಡುಗಡೆ: ಇದೇ ವೇಳೆ ಯೋಗಭ್ಯಾಸದ ಅಭ್ಯಾಸ ಪಟ್ಟಿಯನ್ನು ಅಪರ ಜಿಲ್ಲಾಧಿಕಾರಿಗಳು ಬಿಡುಗಡೆಗೊಳಿಸಿದರು. ಆಯುಷ್ ಇಲಾಖೆಯ ಅಧಿಕಾರಿ ಡಾ.ಪುಷ್ಪ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರಲ್ಲಿ 'ಶಕ್ತಿ'ಗೆ ಮಹಿಳೆಯರಿಂದ ಉತ್ತಮ ಪ್ರತಿಕ್ರಿಯೆ

ಒಂದೇ ದಿನ ಕೆಎಸ್‌ಆರ್‌ಟಿಸಿ ಬಸ್ಸಲ್ಲಿ ಸುಮಾರು 2 ಲಕ್ಷಕ್ಕೂ ಅಧಿಕ ಮಹಿಳೆಯರು ಉಚಿತ ಪ್ರಯಾಣ



ಮೈಸೂರು, ಜೂ. 12(ಆರ್‌ಕೆ)– ಸರ್ಕಾರ ಜಾರಿಗೆ ತಂದಿರುವ 'ಶಕ್ತಿ' ಯೋಜನೆಯಡಿ ಮಹಿಳೆಯರ ಉಚಿತ ಬಸ್ ಪ್ರಯಾಣಕ್ಕೆ ಮೈಸೂರಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿದೆ.

ಚುನಾವಣೆಗೆ ಮುನ್ನಾ ಕಾಂಗ್ರೆಸ್ ನೀಡಿದ್ದ 5 ಗ್ಯಾರಂಟಿಗಳಲ್ಲೊಂದಾದ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಒದಗಿಸುವ 'ಶಕ್ತಿ' ಯೋಜನೆಗೆ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಂಗಳೂರಲ್ಲಿ ಚಾಲನೆ ನೀಡಿದರೆ, ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಈ ಯೋಜನೆಯನ್ನು ಮಹಿಳಾ ಪ್ರಯಾಣಿಕರಿಗೆ ಟಿಕೆಟ್ ನೀಡುವ ಮೂಲಕ ಉದ್ಘಾಟಿಸಿದ್ದರು.

ಈ ಯೋಜನೆ ಫಲಾನುಭವಿಗಳಾದ ಮಹಿಳಾ ಪ್ರಯಾಣಿಕರಿಂದ ಎರಡನೇ ದಿನವಾದ ಇಂದು ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಒಂದೇ ದಿನ ಸರಿ ಸುಮಾರು 2 ಲಕ್ಷ ಮಂದಿ ಕೆಎಸ್‌ಆರ್‌ಟಿ ಬಸ್ಸುಗಳಲ್ಲಿ ಮೈಸೂರಿನಿಂದ ವಿವಿಧ ಸ್ಥಳಗಳಿಗೆ ಸಂಚರಿಸಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ (ಪ್ರಭಾರ) ಮರೀಗೌಡ ತಿಳಿಸಿದ್ದಾರೆ.

ಸಾಮಾನ್ಯವಾಗಿ ಪ್ರತೀದಿನ ನಾಲ್ಕು ಲಕ್ಷ ಮಂದಿ ಸಾರಿಗೆ ಬಸ್‌ಗಳಲ್ಲಿ ಓಡಾಡುತ್ತಿದ್ದರು. 'ಶಕ್ತಿ' ಯೋಜನೆಗೆ ಅರ್ಹರಾಗಿರುವ ಶೇ. 50ರಷ್ಟು ಮಂದಿ ಮಹಿಳೆಯರು ಇಂದು ಪ್ರಯಾಣಿಸಿದ್ದಾರೆ. ಯೋಜನೆ ಆರಂಭವಾಗಿರುವುದರಿಂದ ಭಾವಚಿತ್ರವಿರುವ ಗುರುತಿನ ಚೀಟಿ ಹೊಂದಿಲ್ಲದವರಿಗೂ ಉಚಿತ ಟಿಕೆಟ್ ನೀಡಲಾಗಿದೆ. ಆದರೆ, ಮುಂದೆ ಗುರುತಿನ ಚೀಟಿ ತೋರಿಸಬೇಕೆಂದು ಹೇಳುತ್ತಿದ್ದೇವೆ ಎಂದು ಅವರು ತಿಳಿಸಿದರು.

ಮೈಸೂರು ವಿಭಾಗದಲ್ಲಿ ನಿತ್ಯ 976 ಬಸ್‌ಗಳು ಕಾರ್ಯಾಚರಣೆ ನಡೆಸುತ್ತವೆ. ಆ ಪೈಕಿ 'ಶಕ್ತಿ' ಯೋಜನೆಗೆ 871 ಬಸ್ಸುಗಳು ಒಳಪಡುತ್ತವೆ. ಮೈಸೂರು ನಗರ, ತಾಲೂಕು ಕೇಂದ್ರ, ಜಿಲ್ಲಾ ಕೇಂದ್ರ, ಬೆಂಗಳೂರು ಕಡೆಗೆ ಸಂಚರಿಸುವ ಬಸ್ಸುಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಿದ್ದು, ಸರ್ಕಾರದ ಯೋಜನೆಯನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಮರೀಗೌಡರು ತಿಳಿಸಿದರು.

ಅಭಿಷೇಕ್–ಅವಿವಾ ಮದುವೆಗೆ ಶುಭ ಕೋರಿದ ಪ್ರಧಾನಿ ಮೋದಿ

ನವದೆಹಲಿ: ನಟಿ, ಸಂಸದೆ ಸುಮಲತಾ ಅಂಬರೀಶ್ ಪುತ್ರ ಅಭಿಷೇಕ್ ಅಂಬರೀಶ್ ಅವರ ಮದುವೆಗೆ ಶುಭಾಶಯ ಕೋರಿದ್ದಾರೆ ಪ್ರಧಾನಿ ನರೇಂದ್ರ ಮೋದಿ ಶುಭಾಶಯ ಕೋರಿ ಕಳುಹಿಸಿದ ಪತ್ರವನ್ನು ಸುಮಲತಾ ತಮ್ಮ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಈ ಹಿಂದೆ ಮದುವೆಗೆ ನರೇಂದ್ರ ಮೋದಿ ಅವರನ್ನು ಖುದ್ದಾಗಿ ಭೇಟಿ ಮಾಡಿ ಆಹ್ವಾನ ನೀಡಿದ್ದರು ಸುಮಲತಾ ಮತ್ತು ಪುತ್ರ ಅಭಿಷೇಕ್. ಶುಭಾಶಯ ಕೋರಿ ಬರೆದ ಪತ್ರಕ್ಕೆ ಪ್ರತಿಕ್ರಿಯೆ ನೀಡಿರುವ ಸುಮಲತಾ, ಅಭಿಷೇಕ ಅಂಬರೀಶ್–ಅವಿವಾ ಬಿಡಪ್ಪ ಅವರ ಮದುವೆಗೆ ಶುಭಾಶಯಗಳನ್ನು ತಿಳಿಸಿ, ನವ ಜೋಡಿಯ ಹೊಸ ಜೀವನ ಸುಖಕರವಾಗಿರಲಿ ಎಂದು ಹಾರೈಸಿದ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳು. ನಿಮ್ಮ ಹಾರೈಕೆ, ಆಶೀರ್ವಾದ ಸದಾ ನಮ್ಮ ಕುಟುಂಬದ ಮೇಲಿರಲಿ ಎಂದು ಮತ್ತೊಮ್ಮೆ ಧನ್ಯವಾದಗಳನ್ನು ತಿಳಿಸುವೆ' ಎಂದು ಬರೆದುಕೊಂಡಿದ್ದಾರೆ.

ದೂರಿದ ಬಳಿಕ ಆರ್‌ಓ ಪ್ಲಾಂಟ್ ದುರಸ್ತಿಗೆ ಕ್ರಮ



ಮೈಸೂರು, ಜೂ.12(ಎಸ್‌ಬಿಡಿ)– ಕಲುಷಿತ ನೀರು ಪೂರೈಸುತ್ತಿದ್ದ ಶುದ್ಧ ಕುಡಿಯುವ ನೀರು ಘಟಕ(ಆರ್‌ಓ ಪ್ಲಾಂಟ್)ದ ಬಗ್ಗೆ ಸಾಮಾಜಿಕ ಕಾರ್ಯಕರ್ತರೊಬ್ಬರು ದೂರಿದ ನಂತರ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತಿದ್ದಾರೆ.

ಮೈಸೂರಿನ ಬೃಂದಾವನ ಬಡಾವಣೆಯಲ್ಲಿರುವ ಆರ್‌ಓ ಪ್ಲಾಂಟ್‌ನಲ್ಲಿ ದುರ್ವಾಸನೆಯುಕ್ತ ಕಲುಷಿತ ನೀರು ಪೂರೈಕೆಯಾಗುತ್ತಿತ್ತು. ಈ ಬಗ್ಗೆ ಸಾರ್ವಜನಿಕರು ನಗರ ಪಾಲಿಕೆ ಗಮನಕ್ಕೆ ತಂದಿದ್ದರೂ ಕ್ರಮ ವಹಿಸಿರಲಿಲ್ಲ. ಆರ್‌ಓ ಪ್ಲಾಂಟ್ ಅವ್ಯವಸ್ಥೆ ಬಗ್ಗೆ ತಿಳಿದ ಸಾಮಾಜಿಕ ಕಾರ್ಯಕರ್ತ ಬಿ.ಎನ್.ನಾಗೇಂದ್ರ, ಪಾಲಿಕೆ ಅಧಿಕಾರಿಗಳಿಗೆ ದೂರಿದರು. ಇದರಿಂದ ಎಚ್ಚೆತ್ತಿರುವ ಅಧಿಕಾರಿಗಳು, ಸಂಬಂಧಪಟ್ಟ ಏಜೆನ್ಸಿಯವರಿಗೆ ಸೂಚನೆ ನೀಡಿದ ಪರಿಣಾಮ ಯಂತ್ರೋಪಕರಣದ ಸ್ವಚ್ಛತೆ ಜೊತೆಗೆ ದುರಸ್ತಿ ಕಾರ್ಯ ಆರಂಭಿಸಿದ್ದಾರೆ.

ಬೋರ್‌ವೆಲ್ ಬದಲು ಏಜೆನ್ಸಿಯವರು ಅಕ್ರಮವಾಗಿ ಕಾವೇರಿ ನೀರು ಸಂಪರ್ಕ ಪಡೆದಿದ್ದಾರೆ. ಇದಕ್ಕೆ ಮೀಟರ್ ಸಹ ಅಳವಡಿಸಿಲ್ಲ. ಪ್ಲಾಂಟ್ ಕಮರ್ಷಿಯಲ್ ಆಗಿರುವುದರಿಂದ ಈವರೆಗೆ ಬಳಕೆ ಮಾಡಿರುವ ನೀರಿಗೆ ಏಜೆನ್ಸಿಯವರಿಂದ ಶುಲ್ಕ ವಸೂಲಿ ಮಾಡಬೇಕು. ಬಹುತೇಕ ಜನ ಆರ್‌ಓ ಪ್ಲಾಂಟ್‌ನಿಂದ ನೀರು ತೆಗೆದುಕೊಂಡು ಹೋಗುತ್ತಾರೆ. ಕಲುಷಿತ ನೀರು ಸೇವಿಸಿ ಹಲವರ ಆರೋಗ್ಯ ಹಾಳಾಗಿರುವ ಸಾಧ್ಯತೆ ಇದೆ. ಆದರೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸದೆ ಮೀನಾಮೇಷ ಎಣಿಸಿದ್ದು ಸರಿಯಲ್ಲ. ಈ ಘಟಕಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದ್ದೆಯೇ ಎಂದು ನಗರ ಪಾಲಿಕೆ ಅಧಿಕಾರಿಗಳು ಪರಿಶೀಲನೆ ನಡೆಸಬೇಕು ಎಂದು ಬಿ.ಎನ್.ನಾಗೇಂದ್ರ ಒತ್ತಾಯಿಸಿದ್ದಾರೆ.

ಜೂನ್ 22ರಂದು ಪುಣೆಯಲ್ಲಿ ಜಿ–20 ರಾಷ್ಟ್ರಗಳ ಶಿಕ್ಷಣ ಸಚಿವರ ಸಭೆ

ನವದೆಹಲಿ: ಜಿ 20 ರಾಷ್ಟ್ರಗಳ ಶಿಕ್ಷಣ ಸಚಿವರು ಜೂನ್ 22ರಂದು ಪುಣೆಯಲ್ಲಿ ಸಭೆ ಸೇರಲಿದ್ದಾರೆ. ಜಿ–20 ಶಿಕ್ಷಣ ಸಮೂಹದ ಸಭೆ ಜೂನ್ 19 ರಿಂದ 21ರವರೆಗೆ ನಡೆಯಲಿದೆ. ನಾಲ್ಕನೆಯ ಮತ್ತು ಅಂತಿಮ ಸಭೆ ಇದಾಗಿದೆ.

ಪುಣೆಯಲ್ಲಿ ನಡೆಯುವ ಉದ್ದೇಶಿತ ಸಭೆಯು 'ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ ಅಡಿಪಾಯದ ಖಾತರಿ' ಘೋಷವಾಕ್ಯದಡಿ ನಡೆಯಲಿದೆ. ಶಿಕ್ಷಣ ಸಚಿವಾಲಯವು ಸಭೆಯ ಆತಿಥ್ಯ ವಹಿಸಿದೆ. 22ರಂದು ಸದಸ್ಯ ರಾಷ್ಟ್ರಗಳ ಶಿಕ್ಷಣ ಸಚಿವರ ಸಭೆ ನಡೆಯಲಿದೆ.

ಸಭೆಯಲ್ಲಿ ಚರ್ಚೆಯಾಗುವ ಅಂಶಗಳು, ಸದಸ್ಯ ರಾಷ್ಟ್ರಗಳಲ್ಲಿ ಆದ್ಯತಾ ಕ್ಷೇತ್ರದಲ್ಲಿ ಬಳಕೆಯಲ್ಲಿರುವ ಅತ್ಯುತ್ತಮ ಕ್ರಮಗಳನ್ನು ಒಳಗೊಂಡ ಹಾಗೂ ಸಚಿವಾಲಯದ ಘೋಷಣೆ ಒಳಗೊಂಡ ವಿಷಯನ್ನು 22ರ ಸಚಿವರ ಸಭೆಯಲ್ಲಿ ಮಂಡಿಸಲಾಗುತ್ತದೆ. ಬ್ರಿಟನ್, ಇಟಲಿ, ಚೀನಾ, ಸಿಂಗಪುರ, ಈಜಿಪ್ಟ್, ಯುಎಇ ಸೇರಿದಂತೆ 14 ರಾಷ್ಟ್ರಗಳ ಸಚಿವರು ಭಾಗವಹಿಸುವಿಕೆ ಖಚಿತಪಡಿಸಿದ್ದಾರೆ.

ಜಿ–20 ಶಿಕ್ಷಣ ಕಾರ್ಯ ಸಮೂಹದ ಮೊದಲ ಸಭೆಯು ಜನವರಿ ತಿಂಗಳಲ್ಲಿ ಚೆನ್ನೈನಲ್ಲಿ ನಡೆದಿತ್ತು. ಎರಡನೇ ಸಭೆ ಮಾರ್ಚ್ ತಿಂಗಳು ಅಮೃತಸರದಲ್ಲಿ ಹಾಗೂ ಮೂರನೇ ಸಭೆಯು ಏಪ್ರಿಲ್ ತಿಂಗಳು ಭುವನೇಶ್ವರದಲ್ಲಿ ನಡೆದಿತ್ತು.



ಮೈಸೂರಿನ ಜೆ.ಪಿ.ನಗರದ ಗೊಬ್ಬಳಿಮರದ ಸಮೀಪದಲ್ಲಿ ಸುಮಯ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಪ್ರಾರಂಭಿಸಿರುವ 'ಸುಮಯ ಹೆವೆನ್ಲಿ ಹೋಮ್ಸ್'ಗೆ ಸೋಮವಾರ ಚಾಲನೆ ನೀಡಲಾಯಿತು. ಜ್ಯೋತಿಷಿ ಗಣಪತಿ ಭಟ್, ಮಾಜಿ ಶಾಸಕ ಸಾ.ರಾ.ಮಹೇಶ್, ಸುಮಯ ಪ್ರಾಪರ್ಟೀಸ್‌ನ ವ್ಯವಸ್ಥಾಪಕ ನಿರ್ದೇಶಕ ಸುಧಿ ಎಸ್.ಶೆಟ್ಟಿ ಮತ್ತು ವಿಶಾಖ ಸಿ.ಹೆಗ್ಡೆ, ಶಾಶ್ವತಿ ಧಾರ್ಮಿಕ ಕ್ರಿಯಾ ಸಮಿತಿ ಸಂಸ್ಥಾಪಕ ಡಾ.ಭಾನುಪ್ರಕಾಶ್ ಶರ್ಮಾ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 13 ಜೂನ್ 2023

ಅಭಿವೃದ್ಧಿ ಹೆಸರಲ್ಲಿ ಬಾಲಕಾರ್ಮಿಕರ ನೇಮಕ ಅಪರಾಧ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಜಿ.ರಮಾ



ಮಂಡ್ಯ, ಜೂ.12– ಅಭಿವೃದ್ಧಿ ಹೆಸರಲ್ಲಿ ಬಾಲ ಕಾರ್ಮಿಕರನ್ನು ಕಡಿಮೆ ವೇತನಕ್ಕೆ ಉದ್ದಿಮೆಗಳಿಗೆ ನೇಮಿಸಿಕೊಳ್ಳುವುದು ಅಪರಾಧ ಎಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಜಿ.ರಮಾ ತಿಳಿಸಿದರು.

ಸೋಮವಾರ ಕಾರ್ಮಿಕ ಇಲಾಖೆ ಮತ್ತು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಹಮ್ಮಿಕೊಂಡಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಾಲ ಹಾಗೂ ಕಿಶೋರ ಕಾರ್ಮಿಕರು ಖಾಸಗಿ ಸಂಸ್ಥೆ, ಉದ್ದಿಮೆಗಳಲ್ಲಿ ಹಾಗೂ ಮನೆಗಳಲ್ಲೂ ಕೂಡ ಇರುತ್ತಾರೆ. ಇದು ಕಾನೂನು ಅಪರಾಧ ಎಷ್ಟೇ ಕಾನೂನು ಬಂದರೂ ಅದನ್ನು ಉಲ್ಲಂಘಿಸಿ ಹಲವು ಸಂಸ್ಥೆಗಳು ಬಾಲಕಾರ್ಮಿಕರನ್ನು ನೇಮಕ ಮಾಡಿಕೊಳ್ಳುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಬಾಲಕಾರ್ಮಿಕ ಪದ್ಧತಿ ಹಾಗೂ ಅದರ ಕಾನೂನಿನ ಬಗ್ಗೆ ತಿಳಿವಳಿಕೆ ಬರಲಿ ಎಂದು ಇಂತಹ ಜಾಗೃತಿ ಜಾಥಾಗಳು ನಡೆಯುತ್ತಿವೆ. ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ಅನುಸರಿಸಿದರೆ ಕಾನೂನಿನ ಪಂಜರದಲ್ಲಿ ಸಿಲುಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಮಾತನಾಡಿ, 18 ವರ್ಷದೊಳಗಿನ ಮಕ್ಕಳನ್ನು ಬಾಲ ಕಾರ್ಮಿಕರಾಗಿ ಬಳಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ. ಸಾರ್ವಜನಿಕರು ಹಾಗೂ ಪೋಷಕರು ತಮ್ಮ ಮಕ್ಕಳನ್ನು ಯಾವುದೇ ಕೆಲಸದಲ್ಲಿ ತೊಡಗಿಸಿಕೊಳ್ಳದೆ ಎಷ್ಟೇ ಕಷ್ಟಗಳಿದ್ದರೂ, ಸರ್ಕಾರ ನೀಡುತ್ತಿರುವ ಉಚಿತ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಿಸಬೇಕು. ಆ ಮೂಲಕ ಸಾಕ್ಷರ ಹಾಗೂ ಸಭ್ಯ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದರು. ಖಾಸಗಿ ಸಂಸ್ಥೆ, ಹೋಟೆಲ್, ನಗರ ಸ್ಥಳೀಯ ಸಂಸ್ಥೆ ಹಾಗೂ ಕಾರ್ಖಾನೆಗಳಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವುದು ಕಂಡು ಬಂದರೆ ಅವರನ್ನು ಶಿಕ್ಷೆಗೆ ಒಳಪಡಿಸಲಾಗುವುದು. ಹಾಗಾಗಿ ಇದಕ್ಕೆ ಅವಕಾಶ ಮಾಡಿಕೊಡದೆ ಎಲ್ಲಾ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂದರು.

ಜಿಲ್ಲಾಧಿಕಾರಿ ಕಚೇರಿಯಿಂದ ಹೊರಟ ಜಾಥಾ ಮೈಸೂರು– ಬೆಂಗಳೂರು ರಸ್ತೆ, ಸಂಜಯ ವೃತ್ತದ ಮೂಲಕ ಕರ್ನಾಟಕ ಸಂಘ ತಲುಪಿತು.

ಜಾಥಾದಲ್ಲಿ ಜಿಪಂ ಸಿಇಒ ಶೇಕ್ ತನ್ವೀರ್ ಆಸಿಫ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ವಾಣಿ.ಎ ಶೆಟ್ಟಿ, ಕಾರ್ಮಿಕ ಅಧಿಕಾರಿ ಮಂಜುಳಾ ದೇವಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ನಾಗರಾಜು, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಟಿ. ಜವರೇಗೌಡ, ವಕೀಲರ ಸಂಘದ ಅಧ್ಯಕ್ಷ ಎಂ.ಟಿ ರಾಜೇಂದ್ರ ಸೇರಿದಂತೆ ಹಲವರಿದ್ದರು.

ಕಡ್ಡಾಯ, ಉಚಿತ ಶಿಕ್ಷಣ ಪ್ರತಿಯೊಬ್ಬರ ಹಕ್ಕು

ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್



ಮಂಡ್ಯ, ಜೂ.12– ಸರ್ಕಾರ ಮಕ್ಕಳಿಗೆ ಕಡ್ಡಾಯ, ಉಚಿತ ಶಿಕ್ಷಣ ಜಾರಿಗೊಳಿಸಿದೆ. ಪ್ರತಿಯೊಬ್ಬ ಮಗುವಿಗೆ ಶಿಕ್ಷಣ ನೀಡುವುದರಿಂದ ಬಾಲಕಾರ್ಮಿಕ ಪದ್ಧತಿ ವಿರೋಧಿ ಚಟುವಟಿಕೆ ತಡೆಗಟ್ಟಬಹುದು ಎಂದು ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ(ರಿ), ವಕೀಲರ ಸಂಘ, ಡಾನ್ ಬಾಸ್ಕೋ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಸಂಘದಲ್ಲಿ ನಡೆದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಲಕಾರ್ಮಿಕರನ್ನು ಹೆಚ್ಚಾಗಿ ಕೃಷಿ, ಕಾರ್ಖಾನೆ, ಹೋಟೆಲ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ತೊಡಗಿಸಿರುವುದನ್ನು ನಾವು ಕಾಣಬಹುದು. ಅಂತಹ ಬಾಲ ಕಾರ್ಮಿಕರನ್ನು ಗುರುತಿಸಿ ಶಿಕ್ಷಣ ನೀಡುವುದು ನಮ್ಮ ಆದ್ಯ ಕರ್ತವ್ಯ ಎಂದರು.

ನಮ್ಮ ಭಾರತದ ಸಂವಿಧಾನದ 24ನೇ ವಿಧಿ ಅನ್ವಯ ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಅದನ್ನು ಎಲ್ಲರೂ ಅನುಸರಿಸಬೇಕು ಎಂದರು. ದೇಶಾದ್ಯಂತ ಅನೇಕ ಮಕ್ಕಳು ಬಾಲಕಾರ್ಮಿಕರಾಗಿದ್ದು, ಅನೇಕ ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ. ಇದನ್ನು ತಡೆಗಟ್ಟಲು ಎಲ್ಲರೂ ಕೈ ಜೋಡಿಸಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಮಾತನಾಡಿ, ಅಪಾಯಕಾರಿ ಕೆಲಸಗಳಲ್ಲಿ 18 ವರ್ಷಕ್ಕಿಂತ ಕೆಳಗಿನ ಮಕ್ಕಳನ್ನು ಬಳಸಿಕೊಳ್ಳಬಾರದು. ಆ ರೀತಿ ಬಳಸಿಕೊಂಡಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಡಾನ್ ಬಾಸ್ಕೋ ಸೇರಿದಂತೆ ಅನೇಕ ಸಂಸ್ಥೆಗಳ ಸಹಾಯದಿಂದ ಬಾಲಕಾರ್ಮಿಕ ಪದ್ಧತಿಗೆ ಒಳಪಟ್ಟ ಮಕ್ಕಳ ರಕ್ಷಣೆ ಮಾಡಲಾಗಿದೆ. ಬಾಲಕಾರ್ಮಿಕ ಪದ್ಧತಿಗೆ ಒಳಪಟ್ಟ ಮಕ್ಕಳು ಕಂಡು ಬಂದರೆ ಅಧಿಕಾರಿಗಳ ಗಮನಕ್ಕೆ ತನ್ನಿ. ಸಂಬಂಧಪಟ್ಟ ವ್ಯಕ್ತಿಗೆ ಕಾನೂನು ರೀತ್ಯಾ ಕಠಿಣ ಕ್ರಮ ಜರುಗಿಸಲಾಗುವುದು ಎಂದರು.

ಈ ವೇಳೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ವಾಣಿ ಎ.ಶೆಟ್ಟಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಟಿ.ಎನ್.ಧನಂಜಯ, ನಗರಸಭಾ ಆಯುಕ್ತ ಆರ್.ಮಂಜುನಾಥ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ನಾಗರಾಜು, ಡಾನ್ ಬಾಸ್ಕೋ ನಿರ್ದೇಶಕ ಫಾದರ್ ಸಜೀಜಾರ್ಜ್, ಬಡ್ಸ್ ಸಂಸ್ಥೆ ನಿರ್ದೇಶಕ ವೆಂಕಟೇಶ್ ಇನ್ನಿತರರಿದ್ದರು.

ಶ್ರೀವೆಂಕಟೇಶ್ವರ ಸನ್ನಿಧಿಯಲ್ಲಿ ವಿಜೃಂಭಣೆಯ ಶಯನೋತ್ಸವ



ಭಾರತೀನಗರ, ಜೂ.12– ಇಲ್ಲಿನ ಶ್ರೀವೆಂಕಟೇಶ್ವರ ದೇವಸ್ಥಾನದಲ್ಲಿ ಅರ್ಚಕರಾದ ಗೋಪಾಲಕೃಷ್ಣ ಭಟ್, ಅನಂತಕೃಷ್ಣ ಭಟ್ ಅವರ ನೇತೃತ್ವದಲ್ಲಿ ಶಯನೋತ್ಸವ ವಿಜೃಂಭಣೆಯಿಂದ ನಡೆಯಿತು.

ಈ ವೇಳೆ ಮಾತನಾಡಿದ ಗೋಪಾಲಕೃಷ್ಣ ಭಟ್ ಕಳೆದ 5 ದಿನಗಳಿಂದ ನಡೆದ ಪೂಜಾ ಕಾರ್ಯಕ್ರಮದ ಅಂಗವಾಗಿ ಶ್ರೀವೆಂಕಟೇಶ್ವರ ಸ್ವಾಮಿಯವರ ವಿಶ್ರಾಂತಿಗಾಗಿ ಈ ಪೂಜಾ ಕಾರ್ಯ ನಡೆಸಲಾಗಿದೆ ಎಂದರು. ದೇವಾಲಯದ ಮೊದಲ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಕಲಾವಿದ ಶಿವರಾಂ, ಉಮೇಶ್ ಮತ್ತು ತಂಡದಿಂದ ಏರ್ಪಡಿಸಿದ್ದ ಭಕ್ತಿಗಾಯನ ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು.



ಶ್ರೀರಂಗಪಟ್ಟಣ ತಾಲೂಕಿನ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಿಂದ ಮೊಗರಹಳ್ಳಿ(ಮಂಟಿ) ಗ್ರಾಮದ ಬಳಿ ಬಡಾವಣೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಸಿ.ಜೆ.ಶ್ರೀನಿವಾಸ್ ಸೇರಿದಂತೆ ಇನ್ನಿತರರಿದ್ದರು.

ಕೆ.ಆರ್.ಪೇಟೆಯಲ್ಲಿ ಶಾಸಕರ ನೂತನ ಕಚೇರಿ ಉದ್ಘಾಟನೆ



ಕೆ.ಆರ್.ಪೇಟೆ, ಜೂ.12– ಪಟ್ಟಣದ ತಾಪಂ ಕಾರ್ಯಾಲಯದಲ್ಲಿ ಶಾಸಕರ ನೂತನ ಕಚೇರಿಯನ್ನು ರೈತನಿಂದ ಉದ್ಘಾಟಿಸಿದ ಶಾಸಕ ಹೆಚ್.ಟಿ.ಮಂಜು, ಸಾರ್ವಜನಿಕರ ಕುಂದು ಕೊರತೆ ಆಲಿಸಿದರು.

ಬಳಿಕ ಮಾತನಾಡಿದ ಅವರು, ತಾಲೂಕಿನ ಸಮಗ್ರ ಅಭಿವೃದ್ಧಿ ನನ್ನ ಗುರಿ. ಕ್ಷೇತ್ರದ ಜನತೆ ನನ್ನ ಮೇಲೆ ವಿಶ್ವಾಸವಿಟ್ಟು ಶಾಸಕನನ್ನಾಗಿ ಆಯ್ಕೆ ಮಾಡಿದ್ದಾರೆ. ಜನತೆಯ ಕೆಲಸವನ್ನು ಬದ್ಧತೆಯಿಂದ ಮಾಡಿಕೊಡುವ ಮೂಲಕ ಶಾಸಕನಾದವನು ಹೇಗೆ ಕೆಲಸ ಮಾಡಬೇಕು ಎಂಬುದನ್ನು ತೋರಿಸುತ್ತೇನೆ. ಅಧಿಕಾರಿಗಳು ಜನಸಾಮಾನ್ಯರ ಕೆಲಸಗಳನ್ನು ಮಾಡಲು ಮುಂದಾಗಬೇಕು. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣಕ್ಕೆ ಒತ್ತು ನೀಡಬೇಕು. ಸರ್ಕಾರಿ ಶಾಲೆಗಳ ಶಿಕ್ಷಕರು ಶಾಲೆಗಳ ಬಲವರ್ಧನೆಗೆ ಕೆಲಸ ಮಾಡಬೇಕು. ಮಧ್ಯಾಹ್ನದ ಬಿಸಿಯೂಟ ಸೇರಿದಂತೆ ವಿದ್ಯಾರ್ಥಿಗಳಿಗೆ ತಲುಪಬೇಕಾದ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ತಲುಪಿಸಬೇಕು. ಸರ್ಕಾರದ ವಿವಿಧ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ತಿಳಿಸಿದರು.

ಸಾರ್ವಜನಿಕರು ಯಾವುದೇ ಸಮಸ್ಯೆಗಳಿದ್ದಲ್ಲಿ ತಮ್ಮ ಕಚೇರಿಗೆ ಆಗಮಿಸಿ ಬಗೆಹರಿಸಿಕೊಳ್ಳಬಹುದು ಎಂದರು. ಈ ವೇಳೆ ತಹಸೀಲ್ದಾರ್ ನಿಸರ್ಗ ಪ್ರಿಯ, ತಾಪಂ ಇಓ ಸತೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಸೀತಾರಾಮ್, ಪುರಸಭೆ ಮುಖ್ಯಾಧಿಕಾರಿ ಬಸವರಾಜು, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಶಿವಕುಮಾರ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ವಕೀಲ ಧನಂಜಯ ಕುಮಾರ್, ಸಿಡಿಪಿಓ ಅರುಣಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ.ಮಧುಸೂದನ್ ಸೇರಿದಂತೆ ಇತರರಿದ್ದರು.

ಜೂ.15ಕ್ಕೆ ಉದ್ಯೋಗ ಮೇಳ

ಮಂಡ್ಯ, ಜೂ.12– ಬೆಂಗಳೂರು ಹೋಟೆಲ್ ಅಸೋಸಿಯೇಶನ್ ಹಾಗೂ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಜೂ.15 ರಂದು ಬೆಳಗ್ಗೆ 9ಗಂಟೆಗೆ ಕರ್ನಾಟಕ ಕೌಶಲ್ಯಾಭಿವೃದ್ಧಿ ಕೇಂದ್ರ ಕಚೇರಿ ಬೆಂಗಳೂರಿನಲ್ಲಿ ಸ್ಟೀವರ್ಡ್, ಕ್ಯಾಪ್ಟನ್, ಅಡುಗೆ ಸಹಾಯಕ, ಮಾಣಿ, ಮೇಲ್ವಿಚಾರಕ, ಬಾಣಸಿಗ ಹುದ್ದೆಗಳಿಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ. 10ನೇ ತರಗತಿ, ಪಿಯುಸಿ/ಡಿಪ್ಲೊಮಾ ಪಾಸ್ ಹಾಗೂ ಫೇಲ್ ಆದವರು ಭಾಗವಹಿಸಬಹುದು. 13 ರಿಂದ 16 ಸಾವಿರವರೆಗೆ ವೇತನದ ಜೊತೆಗೆ ಉಚಿತ ವಸತಿ ಮತ್ತು ಊಟದ ಸೌಲಭ್ಯ, ಇಎಸ್ಐ/ಪಿಎಫ್ ಸೇವೆ ಒದಗಿಸಲಾಗುವುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗಮಂಗಲದಲ್ಲಿ ಶಕ್ತಿ ಯೋಜನೆಗೆ ಚಾಲನೆ



ನಾಗಮಂಗಲ, ಜೂ.12– ದೇಶದಲ್ಲಿ ಚುನಾವಣೆಗೂ ಮುನ್ನ ನುಡಿದಂತೆ ನಡೆದ ಪಕ್ಷವಿದ್ದರೆ ಅದು ಕಾಂಗ್ರೆಸ್ ಮಾತ್ರ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ಸಾರಿಗೆ ಬಸ್ ನಿಲ್ದಾಣದಲ್ಲಿ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಶಕ್ತಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಚುನಾವಣೆಗೂ ಮುನ್ನಾ ನೀಡಿದ್ದ ಭರವಸೆಯಂತೆ 5 ಗ್ಯಾರಂಟಿಗಳ ಪೈಕಿ ಶಕ್ತಿ ಯೋಜನೆ ಜಾರಿಗೊಳಿಸಿ ಮಹಿಳೆಯರು ಸಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಮಹಿಳೆಯರು ರಾಜ್ಯದ 4 ಸಾರಿಗೆ ನಿಗಮಗಳ ಸಾಮಾನ್ಯ, ನಗರ ಸಾರಿಗೆ ಮತ್ತು ವೇಗದೂತ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು ಎಂದರು. ಬಸ್‌ನಲ್ಲಿ ಪ್ರಯಾಣಿಸುವಾಗ ಮಹಿಳೆಯರು ತಪ್ಪದೇ ಆಧಾರ್ ಅಥವಾ ಚುನಾವಣಾ ಗುರುತಿನ ಚೀಟಿ ಹಾಜರುಪಡಿಸಿ ನಿರ್ವಾಹಕರಿಂದ ಶೂನ್ಯ ಮೊತ್ತದ ಟಿಕೆಟ್ ಪಡೆಯಬೇಕು. ಮಹಿಳೆಯರ ಪ್ರಯಾಣಕ್ಕೆ ತಗಲುವ ವೆಚ್ಚವನ್ನು ಪ್ರತಿ ಮಾಹೆ ಸರ್ಕಾರ ನಿಗಮಕ್ಕೆ ಪಾವತಿಸಲಿದೆ ಎಂದರು. ಈ ವೇಳೆ ತಹಸೀಲ್ದಾರ್, ಡಿಪೋ ಮ್ಯಾನೇಜರ್ ಸೇರಿದಂತೆ ಇತರ ಅಧಿಕಾರಿಗಳಿದ್ದರು.

ಒಟ್ಟಿಗೆ ಸ್ನಾನಕ್ಕೆ ಹೋದ ಜೋಡಿ ಗ್ಯಾಸ್ ಗೀಸರ್‌ನಿಂದ ವಿಷಾನಿಲ ಸೋರಿ ಸಾವು

ಬೆಂಗಳೂರು, ಜೂ.12– ಒಟ್ಟಿಗೆ ಸ್ನಾನಕ್ಕೆ ತೆರಳಿದ್ದ ಜೋಡಿ, ಗ್ಯಾಸ್ ಗೀಸರ್‌ನಿಂದ ಸೋರಿಕೆಯಾದ ವಿಷಾನಿಲದಿಂದ ಉಸಿರುಗಟ್ಟಿ ಬಾತ್‌ರೂಮ್‌ನಲ್ಲೇ ಸಾವನ್ನಪ್ಪಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಚಂದ್ರಶೇಖರ್ ಮತ್ತು ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕು ಮೂಲದ ಸುಧಾರಾಣಿ ಮೃತಪಟ್ಟವರು. ಬೆಂಗಳೂರಿನ ಚಿಕ್ಕಜಾಲದ ತರಬನಹಳ್ಳಿಯಲ್ಲಿ ಜೂನ್ 10ರಂದು ಈ ದುರ್ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ನಂದಿ ಹಿಲ್ಸ್ ಬಳಿಯ ಗಾಲ್ಫ್ ಹೋಟೆಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಚಂದ್ರಶೇಖರ್ ಮತ್ತು ಸುಧಾರಾಣಿ ಮದುವೆಯಾಗಲು ನಿರ್ಧರಿಸಿದ್ದರು. ಜೂನ್ 10ರಂದು ರಾತ್ರಿ ಸುಮಾರು 9 ಗಂಟೆಗೆ ತರಬನಹಳ್ಳಿಯ ಚಂದ್ರಶೇಖರ್ ನಿವಾಸಕ್ಕೆ ಸುಧಾರಾಣಿ ಬಂದಿದ್ದರು. ಈ ವೇಳೆ ಇಬ್ಬರೂ ಜೊತೆಯಾಗಿ ಸ್ನಾನ ಮಾಡಲು ನಿರ್ಧರಿಸಿ, ಸ್ನಾನದ ಕೋಣೆಯ ಕಿಟಕಿ, ಬಾಗಿಲು ಮುಚ್ಚಿ ಗ್ಯಾಸ್ ಗೀಸರ್ ಆನ್ ಮಾಡಿಕೊಂಡಿದ್ದಾರೆ. ಈ ವೇಳೆ ಗ್ಯಾಸ್ ಗೀಸರ್‌ನಿಂದ ವಿಷಾನಿಲ ಕಾರ್ಬನ್ ಮೋನಾಕ್ಸೈಡ್ ಸೋರಿಕೆಯಾಗಿ ಉಸಿರಾಡಲಾಗದೆ ಇಬ್ಬರೂ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಮನೆಯಿಂದ ಯಾರೂ ಹೊರಗೆ ಬಾರದಿದ್ದಾಗ ಮಾಲೀಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಬಂದು ಬಾಗಿಲು ಒಡೆದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ಕೆಲವೇ ದಿನಗಳಲ್ಲಿ ಹಸೆಮಣೆ ಏರಬೇಕಿದ್ದ ಜೋಡಿ ಹೀಗೆ ದಾರುಣ ಅಂತ್ಯ ಕಂಡಿದೆ.

ಸರ್ಕಾರಿ ಆಸ್ಪತ್ರೆಗಳ ಸಮಗ್ರ ಸುಧಾರಣೆಗೆ ಕ್ರಮ: ಮುಖ್ಯಮಂತ್ರಿ ಸಿದ್ದರಾಮಯ್ಯ



ಬೆಂಗಳೂರು: ಖಾಸಗಿ ಆಸ್ಪತ್ರೆಗಳಿಗೆ ಸಮಾನವಾದ ಸೇವೆ ಸಿಗುವಂತೆ ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಸುಧಾರಣೆಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಅತ್ಯುತ್ತಮ ಸೇವೆ ಸಲ್ಲಿಸಿರುವ ನರ್ಸ್‌ಗಳಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.


ಸರ್ಕಾರಿ ಆಸ್ಪತ್ರೆಗಳ ವೈದ್ಯರು ಮತ್ತು ನರ್ಸ್‌ಗಳು ಹಾಗೂ ಖಾಸಗಿ ಆಸ್ಪತ್ರೆಗಳ ವೈದ್ಯರು ಮತ್ತು ನರ್ಸ್‌ಗಳಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಆದರೆ, ಕಾರ್ಯನಿರ್ವಹಣೆಯ ವಿಧಾನ ಮತ್ತು ಶಿಸ್ತಿನಲ್ಲಿ ವ್ಯತ್ಯಾಸ ಇದೆ. ಸರ್ಕಾರಿ ಆಸ್ಪತ್ರೆಗಳಲ್ಲೂ ಶಿಸ್ತು ತಂದರೆ ಸುಧಾರಣೆ ಸಾಧ್ಯವಾಗಲಿದೆ ಎಂದರು.

ಬಡವರು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೆ, ಶ್ರೀಮಂತರು ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ. ನಾನೂ ಸೇರಿದಂತೆ ಬಹುತೇಕ ರಾಜಕಾರಣಿಗಳು ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತೇವೆ. ರಾಜಕಾರಣಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಮೂಲಕ ಜನರಲ್ಲಿ ಭರವಸೆ ಮೂಡಿಸುವ ಕೆಲಸ ಮಾಡಬೇಕಿದೆ ಎಂದು ಹೇಳಿದರು. ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ರಾಜಕಾರಣಿಗಳು ಮತ್ತು ಶ್ರೀಮಂತರು ಚಿಕಿತ್ಸೆ ಪಡೆಯುತ್ತಾರೆ. ಅಲ್ಲಿ ಶಿಸ್ತು ಇರುವುದಕ್ಕೆ ಎಲ್ಲರೂ ಹೋಗುತ್ತಾರೆ. ಅಲ್ಲಿ ಸಾಧ್ಯವಾಗುವುದು ಇತರ ಸರ್ಕಾರಿ ಆಸ್ಪತ್ರೆಗಳಲ್ಲಿ ಏಕೆ ಸಾಧ್ಯ ಆಗುವುದಿಲ್ಲ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳ ಕೊರತೆ ಆಗದಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ. ಸರ್ಕಾರಿ ಆಸ್ಪತ್ರೆಗಳ ಸುಧಾರಣೆಗೆ ವೈದ್ಯರು ಮತ್ತು ನರ್ಸ್‌ಗಳು ಸಂಪೂರ್ಣ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ನರ್ಸ್‌ಗಳು ವೈದ್ಯಕೀಯ ಕ್ಷೇತ್ರದ ಆಧಾರ ಸ್ತಂಭ ಇದ್ದಂತೆ. ವೈದ್ಯರು ರೋಗಿಯನ್ನು ಪರೀಕ್ಷಿಸಿ, ಸಮಸ್ಯೆ ಅರಿತು ಔಷಧಿ ಬರೆಯುತ್ತಾರೆ. ಅದನ್ನು ಕಾಲಕಾಲಕ್ಕೆ ಕೊಟ್ಟು, ರೋಗಿಗಳಲ್ಲಿ ಧೈರ್ಯ ತುಂಬುವವರು ನರ್ಸ್‌ಗಳು. ಅವರ ಬೆಂಬಲದಿಂದಲೇ ಕ್ಯಾನ್ಸರ್ ವಿರುದ್ಧ ಜಯ ಗಳಿಸಿದವರೂ ಇದ್ದಾರೆ ಎಂದು ಶ್ಲಾಘಿಸಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಸಮಿತಿ ಅಧ್ಯಕ್ಷ ಐವಾನ್ ನಿಗ್ಲಿ, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್, ಆಯುಕ್ತ ಡಿ. ರಂದೀಪ್ ಉಪಸ್ಥಿತರಿದ್ದರು.

'ಮಗು ಎದ್ದಿದೆ' ಕೃತಿ ಲೋಕಾರ್ಪಣೆ



ಮೈಸೂರು, ಜೂ. 12–ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ ವತಿಯಿಂದ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ತಮ್ಮ ತಾಯಿ ಜಯಲಕ್ಷ್ಮೀ ರಾಮಣ್ಣ ಅವರನ್ನು ಕುರಿತು ರಾಜ್ಯ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ಬಿ.ಆರ್. ನಟರಾಜ ಜೋಯಿಸ್ ಅವರು ರಚಿಸಿರುವ 'ಮಗು ಎದ್ದಿದೆ' ಕೃತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಹಿರಿಯ ಸಮಾಜ ಸೇವಕ ಕೆ.ರಘುರಾಂ, ವಿಶ್ವ ಹಿಂದೂ ಪರಿಷತ್ ಮುಖಂಡ ಎಂ.ಎಲ್.ರವೀಂದ್ರ, ಎಕೆಬಿಎಂಎಸ್ ಮಹಿಳಾ ಘಟಕದ ಅಧ್ಯಕ್ಷೆ ವಿಜಯಲಕ್ಷ್ಮೀ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್. ಅನಂತ, ಯೋಗಪ್ರಕಾಶ್, ಉಮಾಶಂಕರ್, ವಿದ್ವಾನ್ ಲಕ್ಷ್ಮೀನರಸಿಂಹ ಶಾಸ್ತ್ರಿ, ನೋಟರಿ ಕೆ.ವಿ. ವಾಸು, ಗುರುಪ್ರಸಾದ್ ಭಟ್, ಮುತ್ತುಸ್ವಾಮಿ ಇತರರು ಉಪಸ್ಥಿತರಿದ್ದರು.

ಮಾಂಟೆಸ್ಸರಿ ಹಂತದಲ್ಲೇ ಮಕ್ಕಳಿಗೆ ಸಾಮಾಜಿಕ ಅರಿವು



ಮೈಸೂರು, ಜೂ. 12– ಹಿರಿಯರಿಗೆ ಗೌರವ, ಕಿರಿಯರಲ್ಲಿ ಪ್ರೀತಿ, ಪರಿಸರದಲ್ಲಿ ಪ್ರೇಮ ಮುಂತಾದ ಸಾಮಾಜಿಕ ಅರಿವನ್ನು ಮಕ್ಕಳಿಗೆ ಮಾಂಟೆಸ್ಸರಿ ಹಂತದಲ್ಲೇ ಕಲಿಸುವ ಜವಾಬ್ದಾರಿ ಪೂರ್ವಪ್ರಾಥಮಿಕ ಶಿಕ್ಷಕರದ್ದಾಗಿರಬೇಕು ಎಂದು ಎಸ್‌ಎಸ್ ಐಟಿ ಸಲ್ಯೂಷನ್ಸ್‌ನ ವ್ಯವಸ್ಥಾಪಕ ನಿರ್ದೇಶಕಿ ಗಾಯತ್ರಿ ಸುಂದರೇಶ್ ತಿಳಿಸಿದ್ದಾರೆ.

ಮಾಂಟೆಸ್ಸರಿ ಹಾಗೂ ನರ್ಸರಿ ಶಿಕ್ಷಣ ತರಬೇತಿ ಪಡೆದ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿದ ನಂತರ ಮಾತನಾಡಿದ ಅವರು, ಮಕ್ಕಳ ಕಲಿಕಾ ವಿಷಯದಲ್ಲಿ ಪೋಷಕರಿಗಿಂತಲೂ ಶಿಕ್ಷಕರ ಪಾತ್ರ ಹಿರಿದಾಗಿರುತ್ತದೆ. ಮಾಂಟೆಸ್ಸರಿ ಹಂತದ ಮಕ್ಕಳು ಶಿಕ್ಷಕರ ಮಾತನ್ನು ವೇದವಾಕ್ಯದಂತೆ ಪಾಲಿಸುತ್ತಾರೆ ಹಾಗಾಗಿ ಅವರುಗಳಲ್ಲಿ ಒಳ್ಳೆಯ ವಿಚಾರಧಾರೆಗಳನ್ನು ಶಿಕ್ಷಕರು ತುಂಬಬೇಕು ಎಂದು ಹೇಳಿದರು. ತರಬೇತಿ ಸಂಸ್ಥೆಯಲ್ಲಿ ನಡೆದ ನಾಲ್ಕನೇ ವರುಷದ ಮಾಂಟೆಸ್ಸರಿ ಪದವಿ ಪ್ರಮಾಣ ಪತ್ರ ವಿತರಣಾ ಸಮಾರಂಭದಲ್ಲಿ ನೂತನ ಅಭ್ಯರ್ಥಿಗಳಿಗೆ ಕಾರ್ಯಾಗಾರ ಹಾಗೂ ಉದ್ಯೋಗ ಮಾಹಿತಿ ಶಿಬಿರವನ್ನು ಇದೇ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ತರಬೇತುದಾರರಾದ ಹಿಮಬಿಂದು ಹಾಗೂ ನಂದಿನಿ ಉಪಸ್ಥಿತರಿದ್ದರು.

ಭಾನುವಾರ ಒಂದೇ ದಿನ 5.71 ಲಕ್ಷ ಮಹಿಳೆಯರು ಸರ್ಕಾರಿ ಬಸ್‌ನಲ್ಲಿ ಉಚಿತ ಪ್ರಯಾಣ

ಬೆಂಗಳೂರು: ರಾಜ್ಯ ಸರ್ಕಾರ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ ಶಕ್ತಿ ಯೋಜನೆಗೆ ಭಾನುವಾರ ಚಾಲನೆ ನೀಡಿದ್ದು, ಮೊದಲ ದಿನವೇ ಬರೋಬ್ಬರಿ 5.71 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ. ಭಾನುವಾರ ಮಧ್ಯಾಹ್ನ 1ರಿಂದ ರಾತ್ರಿ 12ರವರೆಗೆ ಒಟ್ಟು 5.71 ಲಕ್ಷ ಮಹಿಳೆ ಯರು ಪ್ರಯಾಣಿಸಿದ್ದಾರೆ. ಈ ಪೈಕಿ ಬಿಎಂಟಿಸಿ ಬಸ್‌ನಲ್ಲಿ ಒಟ್ಟು 2,01,215, ವಾಯವ್ಯ ಸಾರಿಗೆ ಬಸ್‌ನಲ್ಲಿ 1,22,354, ಕಲ್ಯಾಣ ಕರ್ನಾಟಕ ಸಾರಿಗೆಯಲ್ಲಿ 53,623, ಮಹಿಳೆಯರು ಪ್ರಯಾಣಿಸಿದ್ದು, ಇವರ ಪ್ರಯಾಣದ ಟಿಕೆಟ್ ವೆಚ್ಚ 1,40,22,878 ರೂ. ಆಗಿದೆ.

ದೆಹಲಿ ದರ್ಶನಕ್ಕೆ ಹೊರಟ ಕೊರಗ, ಜೇನು ಕುರುಬರು



ಮೈಸೂರು, ಜೂ. 12– ದೆಹಲಿ ದರ್ಶನ ಹಾಗೂ ರಾಷ್ಟ್ರಪತಿಗಳ ಭೇಟಿಗಾಗಿ 20 ಜನರ ಜೇನುಕುರುಬ ಹಾಗೂ ಕೊರಗ ಜನಾಂಗದ ಮುಖಂಡರು ಮೈಸೂರಿನಿಂದ ದೆಹಲಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದರು.

ಮೈಸೂರಿನ ನ್ಯಾಯಾಂಗ ಬಡಾವಣೆಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ದೆಹಲಿಯಲ್ಲಿ ಆಯೋಜಿಸಿರುವ ಅಳಿವಿನ ಅಂಚಿನಲ್ಲಿರುವ ಮೂಲವಾಸಿ ಬುಡಕಟ್ಟು ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ನಡೆಯುವ ಕಾರ್ಯಾಗಾರದಲ್ಲಿ ದೇಶದ 15 ರಾಜ್ಯಗಳಿಂದ ಬುಡಕಟ್ಟು ಜನರ ಪ್ರತಿನಿಧಿಗಳು ಭಾಗವಹಿಸುತ್ತಾರೆ. ಮೈಸೂರು, ಕೊಡಗು, ಚಾಮರಾಜನಗರ, ಮಂಗಳೂರು, ಉಡುಪಿ ಜಿಲ್ಲೆಗಳಿಂದ ಹೊರಟ 20 ಜನರಲ್ಲಿ 7 ಜನ ಮಹಿಳೆಯರು, 13 ಜನ ಗಂಡಸರು ಇದ್ದಾರೆ. ಇವರೆಲ್ಲರಿಗೂ ರಾಷ್ಟ್ರಪತಿ ಭೇಟಿ ನಂತರ ದೆಹಲಿ ದರ್ಶನ ಮಾಡಿಸಲಾಗುವುದು ಎಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ| ಎಲ್. ಶ್ರೀನಿವಾಸ್ ತಿಳಿಸಿದರು. ಉಪ ನಿರ್ದೇಶಕರಾದ ಬಿ.ಎಸ್. ಪ್ರಭಾ ಅರಸ್, ಸಮಾಜ ಕಲ್ಯಾಣ ಇಲಾಖೆಯ ಅಧೀನ ಕಾರ್ಯದರ್ಶಿ ಶಿವಲಿಂಗ ಪ್ರಭುವಾಲಿ, ಸಹಾಯಕ ನಿರ್ದೇಶಕ ಹೆಚ್. ಶ್ರೀನಿವಾಸ್ ತಂಡದೊಂದಿಗೆ ದೆಹಲಿಗೆ ತೆರಳಿದರು. ಈ ಸಂದರ್ಭದಲ್ಲಿ ಸಂಶೋಧನಾ ಅಧಿಕಾರಿ, ಶಿವಕುಮಾರ್ ಸಿ.,ಕಲ್ಯಾಣಾಧಿಕಾರಿ ಬಸವರಾಜು, ಅರುಣಾಪ್ರಭು ಹಾಜರಿದ್ದರು.

ಜೂನ್ 15ಕ್ಕೆ ಸಿಇಟಿ ಪರೀಕ್ಷೆ ಫಲಿತಾಂಶ ಪ್ರಕಟ ಸಾಧ್ಯತೆ

ಬೆಂಗಳೂರು: ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಕೆಸಿಇಟಿ) ಫಲಿತಾಂಶವು ಜೂನ್ 15 ರಂದು ಪ್ರಕಟವಾಗುವ ಸಾಧ್ಯತೆಯಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ಎಸ್ ರಮ್ಯಾ, ಜೂನ್ 12 ಮತ್ತು ಜೂ.14 ರ ನಡುವೆ ಪ್ರಾಧಿಕಾರ ಫಲಿತಾಂಶ ಪ್ರಕಟಿಸಲು ಯೋಜಿಸಿತ್ತು ಆದರೆ, ಯಾವುದೇ ನಿರ್ದಿಷ್ಟ ದಿನಾಂಕ ಹೇಳಿರಲಿಲ್ಲ. ಆದಾಗ್ಯೂ, ಜೂನ್ 14 ಸಂಜೆಯೊಳಗೆ ಫಲಿತಾಂಶ ಪ್ರಕಟಿಸಲು ಸಿದ್ಧವಾಗಲಿದೆ ಎಂದು ಅವರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಫಲಿತಾಂಶ ಸಿದ್ಧವಾಗಿದ್ದರೂ ಜೂನ್ 15 ರ ಬೆಳಿಗ್ಗೆಯವರೆಗೆ ಫಲಿತಾಂಶ ಪ್ರಕಟಿಸುವುದನ್ನು ಪ್ರಾಧಿಕಾರ ತಡೆಹಿಡಿಯುತ್ತದೆ ಎಂದು ಅವರು ಹೇಳಿದರು. ಸಂಜೆ ಫಲಿತಾಂಶ ಪ್ರಕಟಿಸಿದರೆ, ಅಭ್ಯರ್ಥಿಗಳು ರಿಸಲ್ಟ್ ಪಡೆಯಲು ಕಷ್ಟಪಡುತ್ತಾರೆ. ಯಾವುದೇ ಸರ್ವರ್ ಸಮಸ್ಯೆಗಳನ್ನು ಸರಿಪಡಿಸಲು ಸಹ ಕಷ್ಟವಾಗುತ್ತದೆ. ಈ ಕಾರಣದಿಂದಾಗಿ, ನಾವು ಜೂನ್ 15 ರ ಬೆಳಿಗ್ಗೆ ಫಲಿತಾಂಶಗಳನ್ನು ಪ್ರಕಟಿಸುತ್ತೇವೆ ಎಂದಿದ್ದಾರೆ.

ಅಭ್ಯರ್ಥಿಗಳು ಫಲಿತಾಂಶ ಪಡೆಯಲು ಸಾಕಷ್ಟು ಸಮಯವಿರುತ್ತದೆ ಮತ್ತು ಯಾವುದೇ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಿಕೊಳ್ಳಬಹುದು ಎಂದು ಅವರು ಹೇಳಿದರು. ಮೇ 20 ಮತ್ತು 21 ರಂದು ನಡೆದಿದ್ದ ಕೆಸಿಇಟಿಯಲ್ಲಿ ಸುಮಾರು 2.60 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದರು.

ಗೃಹಜ್ಯೋತಿ ಯೋಜನೆ ಜಾರಿ ಹೊರೆ ಗ್ರಾಹಕರ ಮೇಲೆ ಹೇರುವುದಿಲ್ಲ

ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟನೆ



ಬೆಂಗಳೂರು: ಗೃಹಜ್ಯೋತಿ ಯೋಜನೆ ಜಾರಿ ಹೊರೆಯನ್ನು ಗ್ರಾಹಕರ ಮೇಲೆ ಹೇರುವುದಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಸೋಮವಾರ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದಲ್ಲಿ ಅಧಿಕಾರಿಗಳ ಜೊತೆಗಿನ ಸಭೆಯ ಬಳಿಕ ಮಾತನಾಡಿದ ಸಚಿವರು, ಹಿಂದಿನ ಸರ್ಕಾರದ ವಿದ್ಯುತ್ ದರ ಏರಿಕೆ ಆದೇಶ ಇದೀಗ ಜಾರಿಯಾಗಿದೆ. ಕೆಇಆರ್‌ಸಿ ಒಮ್ಮೆ ಆದೇಶ ಮಾಡಿದರೆ ಹಿಂಪಡೆಯಲು ಆಗುವುದಿಲ್ಲ ಎಂದು ಹೇಳಿದರು. ಅಲ್ಲದೆ, ಗೃಹಜ್ಯೋತಿ ಯೋಜನೆ ಜಾರಿ ಹೊರೆಯನ್ನು ಗ್ರಾಹಕರ ಮೇಲೆ ಹೇರುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಕೆಇಆರ್‌ಸಿ ಕಾಯ್ದೆ ಕೇಂದ್ರ ಸರ್ಕಾರದ ಅಧೀನದಲ್ಲಿದೆ. ವಿದ್ಯುತ್ ಏರಿಕೆ ವಿಚಾರವನ್ನು ಕೇವಲ ಅಧಿಕಾರಿಗಳು ನಿರ್ಧರಿಸುವುದಿಲ್ಲ. ಸಿಎಂ, ಇಂಧನ ಇಲಾಖೆ ಸಚಿವರು ಸಭೆ ನಡೆಸಿ ನಿರ್ಧಾರ ಕೈಗೊಳ್ಳುತ್ತಾರೆ. ನಾವು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಕೆಇಆರ್‌ಸಿ ಮೇಲೆ ಹಾಕಲ್ಲ. ಹಿಂದಿನ ಬಿಲ್ ಪಾವತಿಸಲು ಗ್ರಾಹಕರಿಗೆ 3 ತಿಂಗಳ ಕಾಲಾವಕಾಶವಿದೆ ಎಂದು ಹೇಳಿದರು.

ಹಾಜರಾತಿಯಿಂದ ವಿನಾಯಿತಿ ಆಗಸ್ಟ್ 2 ರವರೆಗೆ ವಿಸ್ತರಿಸಿದ ಹೈಕೋರ್ಟ್; ರಾಹುಲ್ ಗಾಂಧಿಗೆ ರಿಲೀಫ್



ಮುಂಬೈ: 2018ರಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧದ ಹೇಳಿಕೆಗೆ ಸಂಬಂಧಿಸಿದ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ನೀಡಲಾಗಿದ್ದ ವೈಯಕ್ತಿಕ ಹಾಜರಾತಿಯಿಂದ ವಿನಾಯಿತಿಯನ್ನು ಬಾಂಬೆ ಹೈಕೋರ್ಟ್ ಸೋಮವಾರ ಆಗಸ್ಟ್ 2ರವರೆಗೆ ವಿಸ್ತರಿಸಿದೆ.

ರಫೇಲ್ ಯುದ್ಧವಿಮಾನ ಹಗರಣಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ಅವರನ್ನು "ಕಮಾಂಡರ್–ಇನ್–ಥೀಫ್" ಎಂದು ರಾಹುಲ್ ಗಾಂಧಿ ಟೀಕಿಸಿದ್ದರು. ಈ ಸಂಬಂಧ ಬಿಜೆಪಿ ಕಾರ್ಯಕರ್ತರೊಬ್ಬರು ರಾಹುಲ್ ಗಾಂಧಿ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿ ದ್ದಾರೆ. ದೂರುದಾರ ವಕೀಲರು ಸಮಯಾವಕಾಶ ಕೋರಿದ ನಂತರ 2021 ರಲ್ಲಿ ಸ್ಥಳೀಯ ನ್ಯಾಯಾಲಯ ತನಗೆ ನೀಡಿದ್ದ ಸಮನ್ಸ್ ಅನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ವಿ. ಕೊತ್ವಾಲ್ ಅವರ ಏಕ ಸದಸ್ಯ ಪೀಠ, "ಈ ಹಿಂದೆ ನೀಡಲಾದ ಹಾಜರಾತಿಯಿಂದ ವಿನಾಯಿತಿ ಆಗಸ್ಟ್ 2 ರವರೆಗೆ ಮುಂದುವರಿಯುತ್ತದೆ" ಎಂದು ಹೇಳಿ, ವಿಚಾರಣೆ ಮುಂದೂಡಿದ್ದಾರೆ.

ಎಸ್‌ಐ–ಯುಕೆ ಇಂಡಿಯಾ ಮೈಸೂರು ಕಚೇರಿ ಉದ್ಘಾಟನೆ

ಮೈಸೂರು, ಜೂ. 12– ಎಸ್‌ಐ–ಯುಕೆ ಇಂಡಿಯಾ, 17 ವರ್ಷಗಳ ಸೇವಾ ಉತ್ಕೃಷ್ಟತೆಯೊಂದಿಗೆ ವಿದೇಶದಲ್ಲಿ ಅಧ್ಯಯನದ ವಿಶ್ವಾಸಾರ್ಹ ಕನ್ಸಲ್ಟೆನ್ಸಿಯಾಗಿದ್ದು, ಮೈಸೂರಿನಲ್ಲಿ ಇದರ ಹೊಸ ಕಚೇರಿಯನ್ನು 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು ಸೋಮವಾರ (ಜೂ.12) ಉದ್ಘಾಟಿಸಿದರು. ಯುನೈಟೆಡ್ ಕಿಂಗ್‌ಡಮ್, ಐರ್ಲೆಂಡ್, ದುಬೈ ಮತ್ತು ಕೆನಡಾದಲ್ಲಿ ಅಧ್ಯಯನ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಸೇವೆ ಒದಗಿಸುವ ಕೇಂದ್ರವಾಗಿ ಈ ಕಚೇರಿ ಕೆಲಸ ಮಾಡುತ್ತದೆ. ಎಸ್‌ಐ–ಯುಕೆ ಇಂಡಿಯಾ ಸೇಲ್ಸ್ ಹೆಡ್ ರುಚಿ ಸಬರ್‌ವಾಲ್; ಮೈಸೂರು ಲೀಡ್ ಪಾರ್ಟನರ್ ಸುಧೀಂದ್ರ ರಾಜ್, ಕರ್ನಾಟಕ ಮತ್ತು ಎಪಿ ರೀಜನಲ್ ಹೆಡ್ ಪೂಜಾ ಕಿಶಿನ್, ಬೆಂಗಳೂರು ಬ್ಯುಸಿನೆಸ್ ಡೆವಲಪ್‌ಮೆಂಟ್ ಮ್ಯಾನೇಜರ್ ಕೆ.ವಿ.ಜಸ್ವಂತ್ ಉಪಸ್ಥಿತರಿದ್ದರು.

'ಶಕ್ತಿ'ಯಿಂದ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಳ

ಪ್ರಯಾಣಿಕರಿಲ್ಲದೆ ಸಂಕಷ್ಟಕ್ಕೆ ಸಿಲುಕಿದ ಖಾಸಗಿ ಬಸ್ ಮಾಲೀಕರು



ಮಡಿಕೇರಿ, ಜೂ.12– ಮಹಿಳೆಯರಿಗೆ ಉಚಿತ ಪ್ರಯಾಣದ 'ಶಕ್ತಿ' ಯೋಜನೆಗೆ ರಾಜ್ಯಾದ್ಯಂತ ಚಾಲನೆ ದೊರೆತ ಬೆನ್ನಲ್ಲೆ, ಕೊಡಗು ಜಿಲ್ಲೆಯಾದ್ಯಂತ ಸರ್ಕಾರಿ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ದ್ವಿಗುಣಗೊಂಡಿರುವುದು ಕಂಡುಬಂದಿದೆ. ಈ ಬೆಳವಣಿಗೆಯಿಂದ ಖಾಸಗಿ ಬಸ್‌ನವರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕೊಡಗಿನಾದ್ಯಂತ ಸುಮಾರು 91 ಕೆಎಸ್‌ಆರ್‌ಟಿಸಿ ಬಸ್ ರೂಟ್‌ಗಳಿದ್ದು, ಇವುಗಳಲ್ಲಿ ಹೊರ ಜಿಲ್ಲೆಗೆ ಸಂಚರಿಸುವ ಹಾಗೂ ಇನ್ನಿತರ ಲಕ್ಸುರಿ ಬಸ್‌ಗಳನ್ನು ಹೊರತುಪಡಿಸಿದಲ್ಲಿ ಸುಮಾರು 40 ಬಸ್‌ಗಳಷ್ಟೇ ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸುತ್ತವೆ. ಉಚಿತ ಪ್ರಯಾಣ ಹಿನ್ನೆಲೆ ಮಹಿಳಾ ಪ್ರಯಾಣಿಕರ ಪ್ರಮಾಣ ಹೆಚ್ಚಿರುವುದರಿಂದ ಹೆಚ್ಚಿನ ಬಸ್‌ಗಳ ಅವಶ್ಯಕತೆ ಕಾಣಿಸಿಕೊಂಡಿದೆ.

ಬೆಳಗಿನ ಅವಧಿಯಲ್ಲಿ ಮಡಿಕೇರಿಯಿಂದ ತೆರಳುವ ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸುವ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಿತ್ತಾದರೆ, ಬೆಳಗ್ಗೆ 10 ಗಂಟೆಯ ಬಳಿಕ ಬಸ್‌ಗಳಲ್ಲಿ ಹೆಚ್ಚಿನ ಪ್ರಯಾಣಿಕರು ಕಂಡು ಬರಲಿಲ್ಲ. ಯಾವೆಲ್ಲ ಮಾರ್ಗಗಳಲ್ಲಿ ಸರ್ಕಾರಿ ಬಸ್‌ಗಳು ಸಂಚರಿಸುತ್ತವೆಯೋ ಅಲ್ಲೆಲ್ಲ, ಖಾಸಗಿ ಬಸ್‌ಗಳನ್ನು ಬಿಟ್ಟು ಸರ್ಕಾರಿ ಬಸ್‌ಗಳನ್ನೇ ಮಹಿಳೆಯರು ಏರುತ್ತಿದ್ದರು ಎಂದು ತಮ್ಮ ಅನುಭವವನ್ನು ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕರು ಹಂಚಿಕೊಂಡರು.

ಪ್ರಯಾಣಿಕರ ಸಂಖ್ಯೆ ಏರಿಕೆ: ಮಡಿಕೇರಿ–ಅರಸೀಕೆರೆ ನಡುವೆ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್ ಪ್ರತಿನಿತ್ಯ ನಗರಕ್ಕೆ ಆಗಮಿಸುವ ಸಂದರ್ಭ ಅದರಲ್ಲಿನ ಪ್ರಯಾಣಿಕರಿಂದ ಸಂಗ್ರಹವಾಗುವ ಟಿಕೆಟ್ ಹಣ ಸರಿ ಸುಮಾರು 5 ಸಾವಿರ ರೂ.ಗಳು. ಅರಸೀಕೆರೆಯಿಂದ ಆಗಮಿಸಿದ ಬಸ್‌ನಲ್ಲಿ ಸಂಗ್ರಹವಾದ ಟಿಕೆಟ್ ಹಣ ಕೇವಲ 3 ಸಾವಿರ. ಆದರೆ, ಪ್ರಯಾಣಿಸಿದ ಮಹಿಳಾ ಪ್ರಯಾಣಿಕರಿಗೆ ನೀಡಿದ ಶೂನ್ಯ ಟಿಕೆಟ್ ಮೊತ್ತ ಬರೋಬ್ಬರಿ 7 ಸಾವಿರದಷ್ಟಿತ್ತು ಎಂದು ನಿರ್ವಾಹಕರು ಮಾಹಿತಿ ನೀಡಿ ಅಚ್ಚರಿ ಮೂಡಿಸಿದರು.

ತಲೆ ಮೇಲೆ ಕೈ: ಒಂದು ಗಂಟೆ ವಿಳಂಬವಾದರೂ ಸರಿ ಸರ್ಕಾರಿ ಬಸ್‌ನಲ್ಲೇ ತೆರಳುತ್ತೇವೆಂದು ಖಾಸಗಿ ಬಸ್ ನಿಲ್ದಾಣದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದತ್ತ ಮಹಿಳೆಯರು ತೆರಳುತ್ತಿದ್ದಾರೆ. ಅವರನ್ನು ತಡೆಯುವುದಕ್ಕೆ ನಮ್ಮಿಂದ ಸಾಧ್ಯವಿಲ್ಲ. ಹೀಗಾದರೆ ನಮ್ಮ ಪಾಡೇನು ಎಂದು ಹೆಸರು ಹೇಳಲು ಬಯಸದ ಖಾಸಗಿ ಬಸ್ ನಿರ್ವಾಹಕರು ತಮ್ಮ ಅಳಲನ್ನು ತೋಡಿಕೊಂಡರು.

ಸರ್ಕಾರಿ ಬಸ್ ಇಲ್ಲದೆ ಬೇಸರ: ಕೊಡಗಿನ ಬಹುತೇಕ ಗ್ರಾಮೀಣ ಭಾಗಗಳನ್ನು ಸಂಪರ್ಕಿಸಲು ಇರುವ ವ್ಯವಸ್ಥೆ ಎಂದರೆ ಅದು ಖಾಸಗಿ ಬಸ್‌ಗಳು. ಮಡಿಕೇರಿಯಿಂದ ನಾಪೋಕ್ಲು, ಗಾಳಿಬೀಡು, ಚೇರಂಬಾಣೆ, ಭಾಗಮಂಡಲ, ವಿರಾಜಪೇಟೆಯಿಂದ ಪಾಲಿಬೆಟ್ಟ, ಅಮ್ಮತ್ತಿ, ಸೋಮವಾರಪೇಟೆಯಿಂದ ಶನಿವಾರಸಂತೆ, ಮಾದಾಪುರ ಮೊದಲಾದೆಡೆಗಳಿಗೆ ಬೆರಳೆಣಿಕೆಯ ಸರ್ಕಾರಿ ಬಸ್‌ಗಳಿವೆಯಾದರು, ಖಾಸಗಿ ಬಸ್‌ಗಳೇ ಈ ಗ್ರಾಮೀಣರಿಗೆ ಸಂಚಾರಕ್ಕಿರುವ ಏಕಮಾತ್ರ ಸೌಲಭ್ಯ. ಖಾಸಗಿ ಬಸ್ ನಿಲ್ದಾಣದಲ್ಲಿ ಕುಳಿತಿದ್ದ ಗ್ರಾಮೀಣ ಮಹಿಳೆಯರು, ನಮ್ಮ ಊರಿಗೆ ತೆರಳಲು ಸರ್ಕಾರಿ ಬಸ್ ಇಲ್ಲ. ಸರ್ಕಾರ ಉಚಿತ ಪ್ರಯಾಣ ವ್ಯವಸ್ಥೆ ಕಲ್ಪಿಸಿದರು ನಮಗೆ ಹೆಚ್ಚಿನ ಉಪಯೋಗವಿಲ್ಲ, ದುಡ್ಡು ಕೊಟ್ಟೆ ಖಾಸಗಿ ಬಸ್‌ನಲ್ಲಿ ಪ್ರಯಾಣಿಸಬೇಕೆಂದು ಬೇಸರ ವ್ಯಕ್ತಪಡಿಸಿದರು.

ನಮಗೆ ಫ್ರೀ ಬೇಡ

ಉಚಿತ ಪ್ರಯಾಣದ ಶಕ್ತಿ ಯೋಜನೆಯ ಬಗ್ಗೆ ಇನ್ನೂ ಪರ ವಿರೋಧದ ಚರ್ಚೆಗಳು ನಡೆಯುತ್ತಲೆ ಇದೆ. ಆದರೆ, ಯಾವುದೇ ಬಸ್‌ಗಳಲ್ಲಿ ಮಹಿಳೆಯರು 'ಶೂನ್ಯ' ಟಿಕೆಟ್ ಬೇಡ, ದುಡ್ಡು ಕೊಟ್ಟು ಪ್ರಯಾಣಿಸುತ್ತೇವೆ ಎನ್ನುವ ಪ್ರಕರಣ ತೀರ ಅಪರೂಪ. ಆದರೆ, ಮಡಿಕೇರಿ ಗೋಕರ್ಣ ಬಸ್‌ನಲ್ಲಿದ್ದ ಮೂವರು ಮಹಿಳೆಯರು, ಯೋಜನೆಯ ಬಗ್ಗೆ ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ. ಮಾತ್ರವಲ್ಲದೇ ದುಡ್ಡು ಕೊಟ್ಟು ಪ್ರಯಾಣಿಸಿರುವ ಅಪರೂಪದ ಘಟನೆಯನ್ನು ಆ ಬಸ್‌ನ ನಿರ್ವಾಹಕರು 'ಮೈಸೂರುಮಿತ್ರ' ನೊಂದಿಗೆ ಹಂಚಿಕೊಂಡರು.

ಮಧ್ಯದಲ್ಲಿ ಇಳಿದರೆ ಲೆಕ್ಕಕ್ಕಿಲ್ಲ

ಶೂನ್ಯ ಟಿಕೆಟ್ ನೀಡಿ ಬಸ್ ಏರುವ ಮಹಿಳಾ ಪ್ರಯಾಣಿಕರಲ್ಲಿ ಕೆಲವರು, ಮಾರ್ಗ ಮಧ್ಯೆ ಟೀ ಕಾಫಿಗೆಂದು ಬಸ್ ನಿಂತಾಗ, ಬಸ್‌ನಿಂದ ಇಳಿದು, ತಾವು ತೆರಳಬೇಕಾದ ಹಾದಿಯಲ್ಲಿ ಸಾಗುವ ಮತ್ತೊಂದು ಬಸ್ ಏರಿ ಹೋಗುತ್ತಿರುವ ಘಟನೆಗಳು ನಡೆಯುತ್ತಿವೆ. ಸರ್ಕಾರಿ ಬಸ್‌ಗಳ ಪ್ರಯಾಣದ ನಡುವೆ ತಪಾಸಣೆ ನಡೆದಲ್ಲಿ, ಈ ರೀತಿ ಮಾರ್ಗ ಮಧ್ಯೆ ಇಳಿದು ಹೋದವರ ಲೆಕ್ಕ ಸಿಗದೆ, ನಿರ್ವಾಹಕರು ಕಕ್ಕಾಬಿಕ್ಕಿಯಾಗುವ ಅವಕಾಶವಿದೆ. ಈ ಬಗ್ಗೆ ಕೆಎಸ್‌ಆರ್‌ಟಿಸಿ ಪ್ರಮುಖರು ಗಮನಿಸಬೇಕೆಂದು ನಿರ್ವಾಹಕರೊಬ್ಬರು ಮನವಿ ಮಾಡಿದರು.

ಸುಂಟಿಕೊಪ್ಪ–ಮಡಿಕೇರಿ ರಾಷ್ಟ್ರೀಯ ಹೆದ್ದಾರಿಯಲ್ಲಿ

ಒಣಗಿದ ಮರಗಳನ್ನು ತೆರವುಗೊಳಿಸಲು ಆಗ್ರಹ



ಸುಂಟಿಕೊಪ್ಪ ಜೂ.12– ಕೊಡಗಿಗೆ ಮುಂಗಾರು ಪ್ರವೇಶಿಸಿದ್ದು, ಮಳೆ ತೀವ್ರಗೊಳ್ಳುವ ಮುನ್ನ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಬೃಹದಾಕಾರದ ಒಣಗಿದ ಮರಗಳನ್ನು ಚೆಸ್ಕಾಂ ಹಾಗೂ ಅರಣ್ಯ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ತೆರವುಗೊಳಿಸುವಂತೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪಿ.ಎಂ.ಲತೀಫ್ ಹಾಗೂ ವಾಹನ ಚಾಲಕರು ಆಗ್ರಹಿಸಿದ್ದಾರೆ.

ಸುಂಟಿಕೊಪ್ಪದಿಂದ ಮಡಿಕೇರಿಗೆ ತೆರಳುವ ರಾಷ್ಟ್ರೀಯ ಹೆದ್ದಾರಿ 275ರ ರಸ್ತೆ ಬದಿ ಒಣಗಿದ ಬೃಹದಾಕಾರದ ಮರಗಳು ವಾಹನ ಸವಾರರಿಗೆ ಸಂಚಕಾರ ಉಂಟು ಮಾಡುವ ಎಲ್ಲಾ ಸಾಧ್ಯತೆಗಳಿವೆ. ಬೋಯಿಕೇರಿ, ಸಿಂಕೋನ, ಬಾಳೆಕಾಡು, ಕೆದಕಲ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಳೆಗಾಲದಲ್ಲಿ ವಾಹನಗಳ ಮೇಲೆ ಮರ ಬಿದ್ದು ಸಾವು ನೋವು ಸಂಭವಿಸಿದೆ. ಮುಂದೆ ಇಂತಹ ಅನಾಹುತ ಮರುಕಳಿಸದಂತೆ ತಡೆಯಲು ರಸ್ತೆ ಬದಿ ಒಣಗಿನಿಂತ ಮರಗಳನ್ನು ಮುಂಗಾರಿನ ವೇಳೆ ಕಡಿದು ತೆರವುಗೊಳಿಸಬೇಕು ಎಂದು ಮಾಜಿ ಜಿಪಂ ಸದಸ್ಯ ಪಿ.ಎಂ.ಲತೀಫ್ ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಇಂದು ಜಿಲ್ಲಾಮಟ್ಟದ ಕಾರ್ಯಾಗಾರ

ಮಡಿಕೇರಿ, ಜೂ.12– ಕೊಡಗು ಕೇಂದ್ರೀಯ ವಿದ್ಯಾಲಯ ವತಿಯಿಂದ ವರ್ಚುವಲ್ ಮೋಡ್‌ನಲ್ಲಿ 'ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರವನ್ನು ಖಚಿತಪಡಿಸಿಕೊಳ್ಳುವ ಸಂಬಂಧ' ಜಿಲ್ಲಾ ಮಟ್ಟದ ಕಾರ್ಯಾಗಾರವು ಜೂ.13 ರಂದು ಮಧ್ಯಾಹ್ನ 3 ಗಂಟೆಗೆ ಕೇಂದ್ರೀಯ ವಿದ್ಯಾಲಯದಲ್ಲಿ ನಡೆಯಲಿದೆ ಎಂದು ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರು ತಿಳಿಸಿದ್ದಾರೆ.

ವಿ.ಪೇಟೆಯಲ್ಲಿ ಮಹಿಳೆಯರ ಉಚಿತ ಬಸ್ ಪ್ರಯಾಣಕ್ಕೆ ಚಾಲನೆ

ಒಂದು ಗ್ಯಾರಂಟಿ ಜಾರಿ ಮಾಡಿ ನುಡಿದಂತೆ ನಡೆದಿದೆ ಕಾಂಗ್ರೆಸ್ ಸರ್ಕಾರ: ಪೊನ್ನಣ್ಣ



ವಿರಾಜಪೇಟೆ, ಜೂ.12– ದೇಶದ ಇತಿಹಾಸದಲ್ಲೇ ಸರ್ಕಾರ ರಚನೆಯಾಗಿ 21 ದಿನಗಳಲ್ಲಿ ಗ್ಯಾರಂಟಿ ಯೋಜನೆ ಜಾರಿಗೊಳಿಸಿ ಕಾಂಗ್ರೆಸ್ ಸರಕಾರ ನುಡಿದಂತೆ ನಡೆದಿದೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಪುತ್ತೂರು ವಿಭಾಗದ ಮೂಲಕ ವಿರಾಜಪೇಟೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ನಡೆದ ಕರ್ನಾಟಕ ಸರ್ಕಾರದ ಶಕ್ತಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಪೊನ್ನಣ್ಣ, ಮಹಿಳೆಯರಿಗೆ ಉಚಿತವಾಗಿ ರಾಜ್ಯಾದ್ಯಂತ ಪ್ರಯಾಣ ಮಾಡಲು ರಾಜ್ಯದಲ್ಲಿ ಏಕಕಾಲಕ್ಕೆ ಶಕ್ತಿ ಯೋಜನೆಗೆ ಚಾಲನೆ ನೀಡಲಾಗಿದೆ. ಚುನಾವಣೆಗೂ ಮುನ್ನ ಕೊಟ್ಟಂತಹ ಎಲ್ಲಾ ಆಶ್ವಾಸನೆಗಳನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ. ಐದು ಗ್ಯಾರಂಟಿಗಳಲ್ಲಿ ಮೊದಲನೆ ಗ್ಯಾರಂಟಿ ಫಲಿಸಿದೆ ಎಂದರು.

ಮಹಿಳೆಯರ ಸಬಲೀಕರಣ, ಸದೃಢಗೊಳಿಸುವುದು ಸಂವಿಧಾನದ ಆಶಯ. ಈ ನಿಟ್ಟಿನಲ್ಲಿ ಸಿದ್ದರಾಮಯ್ಯ ಅವರು ಈ ಯೋಜನೆ ಜಾರಿಗೆ ತಂದಿದ್ದಾರೆ. ಇದು ಎಲ್ಲಾ ಮಹಿಳೆಯರಿಗೆ ಸದುಪಯೋಗವಾಗಲಿ, ನಾಡಿನ ಜನತೆಗೆ ಒಳಿತಾಗಲಿ ಎಂದು ಹಾರೈಸಿದರು. ವಿರಾಜಪೇಟೆ ಪಪಂ ಆಡಳಿತ ಅಧಿಕಾರಿ, ಸಹಾಯಕ ಆಯುಕ್ತ ಉತೀಶ್ ಉಲ್ಲಾಳ್ ಮಾತನಾಡಿ, ಕರ್ನಾಟಕದ ಇತಿಹಾಸದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆ ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರು.

ಪುತ್ತೂರು ವಿಭಾಗೀಯ ಯಾಂತ್ರಿಕ ಅಭಿಯಂತರರಾದ ಆಶಾಲತಾ ಮಾತನಾಡಿ, ರಾಜ್ಯದಲ್ಲಿ ಎಲ್ಲಾ ಜಿಲ್ಲೆ, ತಾಲೂಕು ಕೇಂದ್ರಗಳಲ್ಲಿ ಏಕಕಾಲದಲ್ಲಿ ಶಕ್ತಿ ಯೋಜನೆಗೆ ಚಾಲನೆ ನೀಡಲಾಗಿದೆ. ರಾಜ್ಯದ ಎಲ್ಲಾ ಮಹಿಳೆಯರಿಗೆ ಶಕ್ತಿ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ಪಡೆಯಲು ಅವಕಾಶವಿದೆ. ಸ್ಮಾರ್ಟ್ ಕಾರ್ಡ್ ಪಡೆಯುವವರಿಗೆ ಯಾವುದಾದರೊಂದು ಮನೆ ವಿಳಾಸ, ಭಾವಚಿತ್ರ ಇರುವ ಗುರುತಿನ ಚೀಟಿ ಅನ್ನು ತೆಗೆದುಕೊಂಡು ಹೋಗಬೇಕು. ವೋಟರ್ ಐಡಿ, ವಾಹನ ಚಾಲನಾ ಪರವಾನಗಿ, ಆಧಾರ್ ಕಾರ್ಡ್, ರೇಷನ್ ಕಾರ್ಡ್ ಸೇರಿದಂತೆ ಸರ್ಕಾರದ ಯಾವುದೇ ಗುರುತಿನ ಚೀಟಿಗಳಲ್ಲಿ ಒಂದನ್ನು ಪ್ರಯಾಣ ಮಾಡುವಾಗ ಹೊಂದಿರಬೇಕು ಎಂದು ಹೇಳಿದರು.

ಈ ಸಂದರ್ಭ ವಿರಾಜಪೇಟೆ ತಹಶೀಲ್ದಾರ್ ರಾಮಚಂದ್ರ, ಪೊನ್ನಂಪೇಟೆ ತಹಶೀಲ್ದಾರ್ ಪ್ರಶಾಂತ್ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಜೂನಿಯರ್ ಇಂಜಿನಿಯರ್ ಶರತ್, ಸಹಾಯಕ ಸಂಚಾರ ಅಧೀಕ್ಷಕ ಇರ್ಷಪ್ಪ ಹಾಗೂ ಸಿಬ್ಬಂದಿ ವರ್ಗ, ಕಾಂಗ್ರೆಸ್ ಪ್ರಮುಖರು, ಮಹಿಳೆಯರು ಹಾಜರಿದ್ದರು.

ಬೆಟ್ಟವನ್ನೇ ಅಗೆದು, ಮರವನ್ನು ಕಡಿದ ಉದ್ಯಮಿಗಳು

- ಬೆಟ್ಟದ ತಪ್ಪಲಿನ ನಿವಾಸಿಗಳಲ್ಲಿ ಆತಂಕ
- ಜಿಲ್ಲಾಧಿಕಾರಿ ಭೇಟಿ
- ಕಾಮಗಾರಿ ಸ್ಥಗಿತ
- ಅರಣ್ಯ ಇಲಾಖೆಯಲ್ಲಿ ಪ್ರಕರಣ ದಾಖಲು



ಮಡಿಕೇರಿ, ಜೂ.12– ಮಳೆಗಾಲದಲ್ಲಿ ಭೂ ಕುಸಿತದಂತಹ ಪ್ರಕೃತಿ ವಿಕೋಪ ಸಂಭವಿಸುವ ಸೂಕ್ಷ್ಮ ಪ್ರದೇಶವೆಂದು ಭೂ ವಿಜ್ಞಾನಿಗಳು ವರದಿ ನೀಡಿರುವ ಮಡಿಕೇರಿ ನಗರದ ಮಂಗಳಾದೇವಿ ನಗರದಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಕಾಮಗಾರಿ ಇದೀಗ ಬೆಟ್ಟದ ತಪ್ಪಲಿನ ನಿವಾಸಿಗಳ ನಿದ್ದೆಗೆಡಿಸಿದೆ.

ಮಂಗಳಾದೇವಿ ನಗರದಲ್ಲಿ ಆಂಧ್ರಪ್ರದೇಶದ ನೆಲ್ಲೂರು ಮೂಲದ ಉದ್ಯಮಿಗಳಿಗೆ ಸೇರಿದ ಸುಮಾರು 38 ಏಕರೆ ಖಾಸಗಿ ಪ್ರದೇಶದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಜೆಸಿಬಿ ಯಂತ್ರಗಳ ಮೂಲಕ ಅವೈಜ್ಞಾನಿಕವಾಗಿ ಬೆಟ್ಟವನ್ನು ಕೊರೆಯಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಆಂಧ್ರದ ನೆಲ್ಲೂರು ಮೂಲದ ಉದ್ಯಮಿಗಳು ಇಲ್ಲಿ ಐಷಾರಾಮಿ ವಿಲ್ಲಾ ಅಥವಾ ರೆಸಾರ್ಟ್ ನಿರ್ಮಿಸುವ ಉದ್ದೇಶದಿಂದ ಸುಮಾರು 38 ಏಕರೆ ಪ್ರದೇಶದಲ್ಲಿದ್ದ ಮರಗಳನ್ನು ಕಡಿದಿದ್ದಾರೆ. ಅಷ್ಟೇ ಅಲ್ಲದೇ ಕಡಿದ ಮರಗಳ ಕುರುಹು ಸಿಗದಂತೆ ಮಾಡಲು ಮರಗಳ ಬುಡಗಳನ್ನು ಮಣ್ಣಿನಿಂದ ಮುಚ್ಚಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಇದರೊಂದಿಗೆ ನೈಸರ್ಗಿಕ ನೀರಿನ ಮೂಲಗಳ ಮೇಲೆಯೇ ಸಿಮೆಂಟ್ ರಸ್ತೆಯನ್ನು ನಿರ್ಮಿಸಲಾಗಿದ್ದು, ರಸ್ತೆ ನಿರ್ಮಾಣದಿಂದಾಗಿ ಜೀವಸೆಲೆಗಳು ಮುಚ್ಚಿಹೋಗಿವೆ ಎನ್ನಲಾಗಿದೆ.

ಮಂಗಳಾದೇವಿ ನಗರದಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಕಾಮಗಾರಿಯ ಬಗ್ಗೆ ಕ್ರಮಕೈಗೊಳ್ಳುವಂತೆ ನಿವೃತ್ತ ಏರ್‌ಮಾರ್ಷಲ್ ನಂದ ಕಾರ್ಯಪ್ಪ ಅವರು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ದೂರು ನೀಡಿದ್ದು, ಸ್ಥಳಕ್ಕೆ ಅರಣ್ಯ ಇಲಾಖಾಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಸೂಚನೆ ನೀಡಿದ ಮೇರೆಗೆ ಕಾಮಗಾರಿ ಸ್ಥಗಿತಗೊಂಡಿದ್ದು, ಆಂಧ್ರಪ್ರದೇಶದ ನೆಲ್ಲೂರು ಮೂಲದ ಉದ್ಯಮಿಗಳಾದ ವೆಂಕಟೇಶ್ವರ ರವಿರೆಡ್ಡಿ, ಅಪ್ಪಾರಾವ್, ಸುಬ್ಬಯ್ಯಮ್ಮ ರಾವ್ ಎಂಬವರ ವಿರುದ್ಧ ಅರಣ್ಯ ಇಲಾಖೆ ಪ್ರಕರಣ ದಾಖಲಿಸಿಕೊಂಡಿದೆ.

> ಕರ್ಣಂಗೇರಿ ಗ್ರಾಮ ವ್ಯಾಪ್ತಿಗೆ ಒಳಪಡುವ ಪ್ರದೇಶದಲ್ಲಿ ಆಂಧ್ರ ಮೂಲದ ವ್ಯಕ್ತಿಗಳು ತಮ್ಮ ಖಾಸಗಿ ಭೂಮಿಯಲ್ಲಿ ಕಾಮಗಾರಿ ನಡೆಸಿದ್ದಾರೆ. 2017ರಲ್ಲಿಯೇ ಆ ಜಾಗದ ಕನ್ವರ್ಷನ್ ಆಗಿದ್ದು, ಅಲ್ಲಿ ಯಾವುದೇ ಅರಣ್ಯ ಭೂಮಿ ಒತ್ತುವರಿ ಆಗಿಲ್ಲ. ಆದರೆ ಅರಣ್ಯ ಇಲಾಖೆ ಅನುಮತಿ ಪಡೆಯದೇ 70ಕ್ಕೂ ಹೆಚ್ಚು ಸಣ್ಣ ಗಾತ್ರದ ಕಾಡು ಮರಗಳನ್ನು ಕಡಿಯಲಾಗಿದೆ. ಈ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿ ಕರ್ನಾಟಕ ಮರ ಸಂರಕ್ಷಣಾ ಕಾಯಿದೆ ಮತ್ತು ಅರಣ್ಯ ಕಾಯಿದೆ ಅಡಿಯಲ್ಲಿ 3 ಮಂದಿಯ ವಿರುದ್ಧ ಅರಣ್ಯ ಇಲಾಖೆ ವತಿಯಿಂದ ಎಫ್‌ಐಆರ್ ದಾಖಲಿಸಲಾಗಿದೆ.
>
> –ಎ.ಟಿ. ಪೂವಯ್ಯ, ಡಿಎಫ್‌ಒ ಮಡಿಕೇರಿ.

ನಾಳೆ ಜಾಥಾ, ರಕ್ತದಾನ ಶಿಬಿರ

ಚಾಮರಾಜನಗರ, ಜೂ.12– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದಿಂದ ವಿಶ್ವ ಸ್ವಯಂಪ್ರೇರಿತ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಜಾಥಾ ಕಾರ್ಯಕ್ರಮವನ್ನು ಜೂ.14ರಂದು ಬೆಳಗ್ಗೆ 10.30 ಕ್ಕೆ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಹಮ್ಮಿಕೊಳ್ಳಲಾಗಿದೆ.

ಜಾಥಾ ಚಾಮರಾಜೇಶ್ವರ ದೇವಸ್ಥಾನದ ಬಳಿ ಆರಂಭಗೊಂಡು ಪ್ರಮುಖ ರಸ್ತೆಗಳಲ್ಲಿ ಸಾಗಿ ಜಿಲ್ಲಾಡಳಿತ ಭವನದ ಬಳಿ ಮುಕ್ತಾಯಗೊಳ್ಳಲಿದೆ. ಅಲ್ಲದೇ ಯೂತ್ ಫಾರ್ ಸೇವಾ ಸಹಯೋಗದೊಂದಿಗೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ ಜಾಥಾವನ್ನು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಉದ್ಘಾಟಿಸುವರು. ಜಿಪಂ ಸಿಇಓ ಎಸ್. ಪೂವಿತಾ, ಎಡಿಸಿ ಎಸ್.ಕಾತ್ಯಾಯಿನಿ ದೇವಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ ಇತರರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ

ಬಾಲಕಾರ್ಮಿಕ ಪದ್ಧತಿ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಅಗತ್ಯ

ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್.ಭಾರತಿ



ಚಾಮರಾಜನಗರ, ಜೂ.12– ಸಮಾಜದಲ್ಲಿ ಬಾಲಕಾರ್ಮಿಕ ಪದ್ಧತಿ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು ಅಗತ್ಯ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರೂ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಕಾರ್ಮಿಕ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಆಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಬಗ್ಗೆ ಮಕ್ಕಳು ಮಾತ್ರವಲ್ಲದೇ ಮಾಲೀಕರು ಸಹ ತಿಳಿದುಕೊಳ್ಳಬೇಕು. ಸಾರ್ವಜನಿಕರು ಬಾಲಕಾರ್ಮಿಕ ಪದ್ಧತಿ ವಿರೋಧಿ ಕಾರ್ಯಕ್ರಮ ಆಚರಣೆ ಜೊತೆಗೆ ಅದರ ಉದ್ದೇಶ ತಿಳಿಯಬೇಕು ಎಂದರು.

ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಮಾತನಾಡಿ, ಮಕ್ಕಳನ್ನು ಅರ್ಥ ಮಾಡಿಕೊಳ್ಳುವುದು ತುಂಬಾ ಕಷ್ಟ ಮಕ್ಕಳು ಹೇಗೆ ಯೋಚಿಸುತ್ತಾರೆ. ಯಾವ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಾರೆ ಎಂಬ ಬಗ್ಗೆ ಪೋಷಕರು ಗಮನ ವಹಿಸಬೇಕು ಎಂದರು.

ಸಮಾಜದಲ್ಲಿರುವ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡಬೇಕು. ಬಾಲ ಕಾರ್ಮಿಕ ಪದ್ಧತಿಯಿಂದ ಹೊರಗೆ ಬಂದಾಗ ಮಾತ್ರ ಸಮ ಸಮಾಜ ಕಾಣಲು ಸಾಧ್ಯ. ಬಾಲ ಕಾರ್ಮಿಕ ಪದ್ಧತಿ ವಿರೋಧಿಸುವುದು ದೇಶದ ಪ್ರಜ್ಞಾವಂತರ ಜವಾಬ್ದಾರಿ ಎಂದರು.

ಬಾಲಕಾರ್ಮಿಕ ಪದ್ಧತಿಗೆ ಸಂಬಂಧಿಸಿದ ಚಟುವಟಿಕೆ, ಬಾಲಕಾರ್ಮಿಕ ಪದ್ಧತಿಯಲ್ಲಿ ಸಿಲುಕಿಕೊಂಡು ತೊಂದರೆ ಅನುಭವಿಸುವುದು ಕಂಡು ಬಂದಲ್ಲಿ ಸಂಬಂಧಪಟ್ಟ ಸಹಾಯವಾಣಿ ಸಂಪರ್ಕಿಸಿ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಡಾ.ಎಂ. ಸವಿತಾ ಮಾತನಾಡಿ, ಬಾಲ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ಹೋಗಲಾಡಿಸಬೇಕಿದೆ. ಬಾಲಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ 1986ರ ಅಡಿ ಎಲ್ಲಾ ರೀತಿಯ ಕ್ರಮ ವಹಿಸಲಾಗುವುದು. ಸುಸ್ಥಿರ ಅಭಿವೃದ್ಧಿ ನಿಟ್ಟಿನಲ್ಲಿ 2025ರೊಳಗೆ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡುವ ಗುರಿ ಹೊಂದಲಾಗಿದೆ ಎಂದರು.

ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಂಬಂಧಿಸಿದಂತೆ 11 ಇಲಾಖೆಗಳ ಜೊತೆಗೆ ಕೈ ಜೋಡಿಸಿ ಎಲ್ಲಾ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅಪಾಯಕಾರಿ ಉದ್ದಿಮೆ ಹಾಗೂ ಇತರೆ ಕಡೆಗಳಲ್ಲಿ ಮಕ್ಕಳನ್ನು ಕೆಲಸದಲ್ಲಿ ತೊಡಗಿಸಿಕೊಂಡಿರುವವರ ವಿರುದ್ಧ ಕಾನೂನು ಕ್ರಮ ವಹಿಸಲಾಗಿದೆ ಎಂದರು. ಮೈಸೂರಿನ ಪೀಪಲ್ಸ್ ಲೀಗಲ್ ಫೋರಂ ನಿರ್ದೇಶಕ ಹಾಗೂ ಹಿರಿಯ ವಕೀಲ ಪಿ.ಪಿ.ಬಾಬುರಾಜ್ ಉಪನ್ಯಾಸ ನೀಡಿದರು.

> ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡುವಲ್ಲಿ ಸಾರ್ವಜನಿಕರ ಪಾತ್ರ ಮಹತ್ವದ್ದು. ಬಾಲಕಾರ್ಮಿಕರ ಬಗ್ಗೆ ಮಾಹಿತಿ ತಿಳಿದಾಗ 1098 ಕರೆ ಮಾಡಿ ಮಾಹಿತಿ ನೀಡಬಹುದು. ಪ್ರತಿಯೊಬ್ಬರಿಗೂ ಸಹ ಅವರದೇ ಆದ ಹಕ್ಕುಗಳು ಇರುತ್ತವೆ. ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿದಾಗ ಮಾತ್ರ ಅವರನ್ನು ಮುಖ್ಯ ವಾಹಿನಿಗೆ ತರಲು ಸಾಧ್ಯ.
>
> –ಪದ್ಮಿನಿ ಸಾಹು, ಜಿಲ್ಲಾ ಎಸ್ಪಿ

ಈ ವೇಳೆ ಬಾಲ ಕಾರ್ಮಿಕ ಪದ್ಧತಿಯಿಂದ ಹೊರಬಂದು ಉನ್ನತ ಹುದ್ದೆ ಅಲಂಕರಿಸಿರುವ ಡಾ.ಸುರೇಶ್, ಹೊಂಗನೂರು ಶಂಕರ್, ರಂಜಿತಾ ಅವರನ್ನು ಸನ್ಮಾನಿಸಲಾಯಿತು. ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಹೆಚ್.ಎಸ್.ಬಿಂದ್ಯಾ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎನ್.ಚಲುವರಾಜ್, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ನಿರ್ದೇಶಕ ಎಂ.ಮಹೇಶ್ ಇತರರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನಾ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ಜಾಥಾಗೆ ಚಾಮರಾಜೇಶ್ವರ ದೇವಾಲಯದ ಬಳಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರೂ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಹಾಗೂ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಜಾಥಾ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಸಾಗಿ ಜಿಲ್ಲಾಡಳಿತ ಭವನದಲ್ಲಿ ಮುಕ್ತಾಯಗೊಂಡಿತು.

ಟನ್ ಕಬ್ಬಿಗೆ ಹೆಚ್ಚುವರಿ 150 ರೂ. ನೀಡಲು ಒತ್ತಾಯ



ಚಾಮರಾಜನಗರ, ಜೂ. 12– ಸರ್ಕಾರದಿಂದ ಪ್ರತಿ ಟನ್ ಕಬ್ಬಿಗೆ ಹೆಚ್ಚುವರಿ 150 ರೂ. ನೀಡುವಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಲಾಯಿತು.

ನಗರದ ಪ್ರವಾಸಿ ಮಂದಿರದಲ್ಲಿ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಮುಖಂಡರು, ರಾಜ್ಯ ಸರ್ಕಾರ ಪ್ರತಿ ಟನ್ ಕಬ್ಬಿಗೆ 150 ರೂ. ಹೆಚ್ಚುವರಿ ಹಣ ನೀಡುವಂತೆ ಸಕ್ಕರೆ ಕಾರ್ಖಾನೆಗಳಿಗೆ ಆದೇಶಿಸಿದರೆ ಇದರಿಂದ ರೈತರಿಗೆ ಲಾಭವಾಗಲಿದೆ. ಕೃಷಿ ಪಂಪ್‌ಸೆಟ್‌ಗಳಿಗೆ ಕೆಆರ್‌ಸಿ ಆದೇಶದಂತೆ ಆಧಾರ್ ಲಿಂಕ್ ಮಾಡುವುದನ್ನು ತಕ್ಷಣ ಕೈ ಬಿಡಬೇಕು. ರಾಜ್ಯ ಸರ್ಕಾರ ಮೇಕೆದಾಟು ಯೋಜನೆ ಕೈಗೆತ್ತಿಕೊಂಡು ರಾಜ್ಯದ ಪಾಲಿನ 200 ಟಿಎಂಸಿ ನೀರು ಉಳಿಸಲು ಕ್ರಮ ಕೈಗೊಳ್ಳಬೇಕು.

ಬ್ಯಾಂಕುಗಳಲ್ಲಿ ಕೃಷಿ, ರೈತರ ಮಕ್ಕಳಿಗೆ ವಿದ್ಯಾಭ್ಯಾಸ ಸಾಲ ನೀಡಲು ಸಿಬಿಲ್ ಸ್ಕೋರ್ ಕೈಬಿಡಲು ರಾಜ್ಯ ಸರ್ಕಾರ ಆದೇಶಿಸಬೇಕು. ರೈತರ ಹಾಲು ಉತ್ಪನ್ನಗಳಿಗೆ ಸರ್ಕಾರ ನೀಡುತ್ತಿದ್ದ ಪ್ರೋತ್ಸಾಹಧನ ಹೆಚ್ಚಿಸಬೇಕು. ಎಪಿಎಂಸಿ ಕಾಯ್ದೆ ತಿದ್ದುಪಡಿ ರದ್ದುಪಡಿಸಬೇಕು. ವಿದ್ಯುತ್ ಬಾಕಿ ಉಳಿಸಿಕೊಂಡಿರುವ ರೈತರ ಬಾಕಿಯನ್ನು ಮನ್ನಾ ಮಾಡಬೇಕು. ಕೃಷಿಗೆ ಹಗಲು ವೇಳೆ 12 ಗಂಟೆಗೆ ವಿದ್ಯುತ್ ನೀಡಬೇಕು ಎಂದು ಸಚಿವರಿಗೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಭಾಗ್ಯರಾಜ್ ಒತ್ತಾಯಿಸಿದರು. ಈ ವೇಳೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ನಾಗರಾಜು, ಜಿಲ್ಲಾ ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ, ಜಿಲ್ಲಾ ಕಾರ್ಯದರ್ಶಿ ಮಹದೇವಸ್ವಾಮಿ, ತಾಲೂಕು ಉಪಾಧ್ಯಕ್ಷ ಶಿವಸ್ವಾಮಿ, ತಾಲೂಕು ಪ್ರಧಾನ ಕಾರ್ಯದರ್ಶಿ ಹರ್ಷ, ಬಸವರಾಜಪ್ಪ, ನಂಜುಂಡನಾಯಕ, ನಾಗೇಂದ್ರ, ಸುಂದ್ರಪ್ಪ ಹಾಜರಿದ್ದರು.

ಕೇಂದ್ರದ ಸಾಧನೆ ತಲುಪಿಸುವ ಅಭಿಯಾನ ಆರಂಭ



ಚಾಮರಾಜನಗರ, ಜೂ.12– ಕೇಂದ್ರ ಬಿಜೆಪಿ ಸರ್ಕಾರ 9 ವರ್ಷ ಪೂರೈಸಿ, 10ನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭ ಸರ್ಕಾರದ ಸಾಧನೆಗಳನ್ನು ಜಿಲ್ಲೆಯ ಮನೆ–ಮನೆಗೂ ತಲುಪಿಸುವ ಅಭಿಯಾನ ಆರಂಭಿಸಲಾಗಿದೆ ಎಂದು ಮಾಜಿ ಶಾಸಕ ಎನ್. ಮಹೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಜನಪ್ರಿಯ ಯೋಜನೆಗಳನ್ನು ಜನರಿಗೆ ತಲುಪಿಸುವ ಕಾರ್ಯಕ್ರಮ ಆಯೋಜಿಸುವಂತೆ ರಾಷ್ಟ್ರ ಹಾಗೂ ರಾಜ್ಯದ ವರಿಷ್ಠರು ಸೂಚಿಸಿದ್ದಾರೆ. ಅದರಂತೆ ಮುಂದಿನ ತಿಂಗಳು ಜಿಲ್ಲೆಯ ಒಂದು ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಸರ್ಕಾರದ ಸಾಧನೆ ತಿಳಿಸುವ ಕೆಲಸ ಮಾಡಲಾಗುವುದು ಎಂದರು.

ಕೊರೊನಾ ಸಂದರ್ಭ ಲಸಿಕೆ ನೀಡುವ ಮೂಲಕ ಜನರ ಆರೋಗ್ಯ ಕಾಪಾಡಿ, ಸಾವು–ನೋವು ಹೆಚ್ಚಾಗದಂತೆ ನೋಡಿಕೊಳ್ಳಲಾಯಿತು. 9 ವರ್ಷದ ಅವಧಿಯಲ್ಲಿ 12 ಕೋಟಿ ಶೌಚಾಲಯ ನಿರ್ಮಿಸಲಾಗಿದೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ 86 ಕೋಟಿ ಜನರಿಗೆ ಆಹಾರ ಭದ್ರತೆ ಒದಗಿಸಲಾಗಿದೆ. ಜನರಿಕ್ ಔಷಧಿ ಕೇಂದ್ರಗಳ ಮೂಲಕ ಕಡಿಮೆ ದರದಲ್ಲಿ ಔಷಧಿ ವಿತರಿಸಲಾಗುತ್ತಿದೆ. ಜಲಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೂ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲಾಗಿದೆ. ಒಂದು ದೇಶ, ಒಂದು ಪಡಿತರ ಯೋಜನೆಯಡಿ ದೇಶದ ಯಾವುದೇ ಮೂಲೆಯಲ್ಲಿರುವ ನ್ಯಾಯ ಬೆಲೆ ಅಂಗಡಿ ಮೂಲಕ ಅಕ್ಕಿ ಖರೀದಿಸುವ ಅವಕಾಶ ನೀಡಲಾಗಿದೆ ಎಂದರು.

ಮಾಜಿ ಶಾಸಕ ಎಸ್.ಬಾಲರಾಜು ಮಾತನಾಡಿ, ಚುನಾವಣಾ ಪೂರ್ವ ಕಾಂಗ್ರೆಸ್ ವತಿಯಿಂದ ಮನೆ ಮನೆಗೆ ಗ್ಯಾರಂಟಿ ಕಾರ್ಡ್ ವಿತರಿಸಿದ್ದು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಜೂ.1ರಿಂದಲೇ ಎಲ್ಲಾ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸುವುದಾಗಿ ವಾಗ್ದಾನ ಮಾಡಿದರು. ಆದರೆ ಅದರಂತೆ ನಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾರಾಯಣಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಜಿಲ್ಲಾ ಬಿಜೆಪಿ ವಕ್ತಾರ ಶಿವಕುಮಾರ್, ಕೂಡ್ಲೂರು ಹನುಮಂತಶೆಟ್ಟಿ ಹಾಜರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜೂ.12– ಚೆಸ್ಕಾಂ ವತಿಯಿಂದ ಗುಂಡ್ಲುಪೇಟೆ ಮತ್ತು ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ ಒಂದನೇ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಜೂ.13 ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಗುಂಡ್ಲುಪೇಟೆ, ಬರಗಿ, ಕೋಡಿಹಳ್ಳಿ, ಬೇರಂಬಾಡಿ, ನೇನೆಕಟ್ಟೆ, ವೀರನಪುರ, ಬೆಳವಾಡಿ, ಬಾಚಳ್ಳಿ, ಬೊಮ್ಮಲಾಪುರ, ದಾರಿಬೇಗೂರು, ಕೊಡಸೋಗೆ, ಹೆಗ್ಗವಾಡಿ ಮತ್ತು ಹಂಗಳ, ಶಿವಪುರ, ಕಲ್ಲಿಗೌಡನಹಳ್ಳಿ ಎನ್‌ಜೆವೈ, ಎಲಚೆಟ್ಟಿ ಗೋಪಾಲ್‌ಪುರ ಎನ್‌ಜೆವೈ, ದೇವರಹಳ್ಳಿ, ಹೊನ್ನೇಗೌಡನಹಳ್ಳಿ, ಮಲ್ಲಯ್ಯನಪುರ ಹಾಗೂ ಹೊಂಗಹಳ್ಳಿ ಐಪಿ, ಮುಂಟಿಪುರ ಐಪಿ, ಹೆಚ್.ಎಸ್.ಹುಂಡಿ ಎನ್‌ಜೆವೈ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಜನಸಂಪರ್ಕ ಸಭೆ

ಚಾಮರಾಜನಗರ, ಜೂ.12– ವಿದ್ಯುತ್ ಸಂಬಂಧಿ ಕುಂದು ಕೊರತೆಗಳ ಆಲಿಕೆಗಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಚಾಮರಾಜನಗರ ಮತ್ತು ಕೊಡಗು ಅಧೀಕ್ಷಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಜೂ.13ರಂದು ಬೆಳಗ್ಗೆ 11 ರಿಂದ 12 ಗಂಟೆವರೆಗೆ ಚಾಮರಾಜನಗರ ಉಪ ವಿಭಾಗ ಕಚೇರಿಯಲ್ಲಿ ಹಾಗೂ ಮಧ್ಯಾಹ್ನ 1 ರಿಂದ 2 ಗಂಟೆವರೆಗೆ ತಾಲೂಕಿನ ಹರದನಹಳ್ಳಿ ಉಪವಿಭಾಗ ಕಚೇರಿಯಲ್ಲಿ ಜನಸಂಪರ್ಕ ಸಭೆ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಸಭೆಗೆ ಹಾಜರಾಗಿ ವಿದ್ಯುತ್ ಸಂಬಂಧಿತ ಕುಂದು ಕೊರತೆಗಳಿದ್ದಲ್ಲಿ ತಿಳಿಸಿ ಪರಿಹರಿಸಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

ಇಂದು ಕಾಂಗ್ರೆಸ್‌ನಿಂದ ಕೃತಜ್ಞತಾ ಸಮಾರಂಭ



ಚಾಮರಾಜನಗರ, ಜೂ.12– ಚಾಮರಾಜನಗರ ಜಿಲ್ಲಾ ಮತ್ತು ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಅಭೂತಪೂರ್ವ ಗೆಲುವು ತಂದುಕೊಟ್ಟ ಮತದಾರರಿಗೆ ಜೂ.13ರಂದು ನಗರದ ಅರಿಶಿನ ಮಾರುಕಟ್ಟೆಯ ಎಪಿಎಂಸಿ ಆವರಣದಲ್ಲಿ ಕೃತಜ್ಞತಾ ಸಮಾರಂಭ ಆಯೋಜಿಸಲಾಗಿದೆ ಎಂದು ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮ ಬೆಳಗ್ಗೆ 10.30ಕ್ಕೆ ಆರಂಭವಾಗಲಿದ್ದು, ಜಿಲ್ಲೆಯ ಎಲ್ಲಾ ಶಾಸಕರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ.

ಜಿಲ್ಲೆಯ ಎಲ್ಲಾ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದ ಅವರು, ಕಾರ್ಯಕ್ರಮದಲ್ಲಿ ಸುಮಾರು 8 ರಿಂದ 10ಸಾವಿರ ಮಂದಿ ಜನ ಸೇರಿದ ನಿರೀಕ್ಷೆ ಇದೆ ಎಂದರು.

ಶಾಸಕ ಸಿ.ಪುಟ್ಟರಂಗಶೆಟ್ಟರ ಗೆಲುವು ಪ್ರಜಾಪ್ರಭುತ್ವದ ಮೌಲ್ಯವನ್ನು ಹೆಚ್ಚಿಸಿದೆ. ಹಣ ಬಲಕ್ಕಿಂತ ಜನಬಲವೇ ಶ್ರೇಷ್ಠ ಎಂಬುದನ್ನು ಸಾಬೀತು ಮಾಡಿದೆ. ಇದರಿಂದ ಕ್ಷೇತ್ರದ ಪ್ರಜ್ಞಾವಂತ ಮತದಾರರ ಮೌಲ್ಯ ಹೆಚ್ಚಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯ ರಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾ ಎಸ್‌ಸಿ ವಿಭಾಗದ ಅಧ್ಯಕ್ಷ ಸೋಮೇಶ್ವರ್, ಯುವ ಮುಖಂಡ ಮಲ್ಲಿಕಾರ್ಜುನಸ್ವಾಮಿ ಹಾಜರಿದ್ದರು.

ಒಂದನೇ ಪುಟದಿಂದ

ಜಿಪಂ ಸಿಇಓ ಹೊಣೆ

ಯಾವುದೇ ಭಾಗದಿಂದ ಸಮಸ್ಯೆ ಇದೆ ಎಂದು ನನ್ನ ಕಿವಿಗೆ ಬಿದ್ದರೆ, ನಿಮ್ಮನ್ನು ಹೊಣೆ ಮಾಡಿ ಕ್ರಮ ಕೈಗೊಳ್ಳ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಮಸ್ಯೆ ಎದುರಾದ ಕೂಡಲೇ 24 ಗಂಟೆಯೊಳಗೆ ನೀರು ಸರಬರಾಜಿಗೆ ಕ್ರಮಕೈಗೊಳ್ಳಿ. ಸಿಇಓಗಳು ಪ್ರತಿ ತಾಲೂಕಿಗೆ ಭೇಟಿ ಕೊಟ್ಟು, ಪಿಡಿಓಗಳ ಕಾರ್ಯ ನಿರ್ವಹಣೆ ಬಗ್ಗೆ ನಿಗಾ ವಹಿಸಿ. ಜೊತೆಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ, ನೀರಿನ ಪೈಪ್ ಲೈನ್ ಅಳವಡಿಸುವುದರ ಗುಣಮಟ್ಟ ಪರಿಶೀಲಿಸಿ. ಕಳೆದ ಕೆಲವು ದಿನಗಳಲ್ಲಿ ಮಳೆಯ ಕೊರತೆಯಿಂದಾಗಿ ಕೆಲವೆಡೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಇದಕ್ಕೆ ಮುಂಗಾರು ಪೂರ್ವ ಮಳೆ ಕೊರತೆಯೇ ಕಾರಣ.

ಹವಾಮಾನ ಇಲಾಖೆಯ ಪ್ರಕಾರ ರಾಜ್ಯದಲ್ಲಿ ಮುಂಗಾರು ಜೂ.10ರಂದು ಪ್ರಾರಂಭವಾಗಿದೆ. ಆದರೆ, ಇಲ್ಲಿಯವರೆಗೂ ನಮಗೆ ಶೇ.67 ರಷ್ಟು ಕೊರತೆ ಕಂಡು ಬಂದಿದೆ. ಮುಂದೆ ಸಮಸ್ಯೆ ಬಗೆಹರಿಯಲಿದೆ ಎಂಬ ವಿಶ್ವಾಸವಿದೆ. ಯಾವುದಕ್ಕೂ ನೀವು ಜಾಗೃತರಾಗಿ ಕೆಲಸ ಮಾಡಿ. ಕೊಪ್ಪಳ ಜಿಲ್ಲೆಯಲ್ಲಿ ಕಲುಷಿತ ನೀರಿಗೆ ಸಂಬಂಧಿ ಸಿದಂತೆ ಉನ್ನತ ಮಟ್ಟದ ತನಿಖೆಗೆ ಆದೇಶ ಮಾಡಿದ್ದೇನೆ ಎಂದರು. ಜಲಜೀವನ್ ಮಿಷನ್ ಯೋಜನೆ ಯಡಿ ಸುಸ್ಥಿರ ನೀರಿನ ಮೂಲ ಇರುವ ಯೋಜನೆಗಳನ್ನು ಗುರುತಿಸಿ ಅವುಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಅವರು ಇದೇ ಸಂದರ್ಭದಲ್ಲಿ ಸೂಚಿಸಿದರು. ಈ ಯೋಜನೆಯ ಕಾಮಗಾರಿ ಹಾಗೂ ರಾಜ್ಯದಲ್ಲಿ ಅಳವಡಿಸಿರುವ ಆರ್‌ಓ ಪ್ಲಾಂಟ್‌ಗಳ ಕುರಿತು ಮೂರನೇ ವ್ಯಕ್ತಿಯಿಂದ ಆಡಿಟ್ ಮಾಡಿಸಲು ಸಂಬಂಧಪಟ್ಟ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಆದೇಶ ಮಾಡಿದರು.

ಟೋಲ್ ದರ ಶೇ.22ರಷ್ಟು ಹೆಚ್ಚಳ!

ಮಾಡಲಾಗಿದೆ. ಈ ಮೂಲಕ 115 ರೂ. ಹೆಚ್ಚಳ ಮಾಡಿದಂತೆ ಆಗಿದೆ. ಭಾರೀ ವಾಹನಗಳ ಏಕಮುಖ ಸಂಚಾರಕ್ಕೆ 720 ರೂಪಾಯಿಯಿಂದ 885 ರೂಗೆ ಹೆಚ್ಚಳ ಮಾಡಲಾಗಿದ್ದು ಈಗ 165 ರೂ. ಹೆಚ್ಚಳ ಮಾಡಿದಂತೆ ಆಗಿದೆ. 7 ಅಥವಾ ಅದಕ್ಕಿಂತ ಹೆಚ್ಚಿನ ಆಕ್ಸೆಲ್ ವಾಹನಗಳ ಏಕಮುಖ ಸಂಚಾರ ದರವು 880 ರೂಪಾಯಿಯಿಂದ 1,080 ರೂಪಾಯಿಗೆ ಏರಿಕೆ ಮಾಡಲಾಗಿದೆ. ಅಂದರೆ ಏಕಮುಖ ಸಂಚಾರಕ್ಕೆ 200 ರೂಪಾಯಿ ಹೆಚ್ಚಳ ಮಾಡಿದಂತೆ ಆಗಿದೆ. ಅದೇ ದ್ವಿಮುಖ ಸಂಚಾರಕ್ಕೆ ದುಪ್ಪಟ್ಟು ಆಗಲಿದೆ.

ಇಂದಿರಾ ಕ್ಯಾಂಟೀನ್ ಪುನಾರಂಭ

ಶೇ.50ರಷ್ಟು, ಉಳಿದದ್ದು, ಬಿಬಿಎಂಪಿ ಭರಿಸಬೇಕು. ಉಳಿದೆಡೆ ಸರ್ಕಾರ ಶೇ.70ರಷ್ಟು, ಉಳಿದ ವೆಚ್ಚವನ್ನು ಆಯಾ ಸ್ಥಳೀಯ ಸಂಸ್ಥೆಗಳೇ ಭರಿಸಬೇಕಾಗುತ್ತದೆ ಎಂದರು. ಹೊಸದಾಗಿ ಟೆಂಡರ್ ಪ್ರಕ್ರಿಯೆಯನ್ನು ವಿಕೇಂದ್ರೀಕರಣಗೊಳಿಸಿ 8 ವಲಯಗಳಲ್ಲಿ ಟೆಂಡರ್ ಕರೆಯಲು ಸೂಚಿಸಲಾಯಿತು. ಈ ಸಂದರ್ಭದಲ್ಲಿ ಪಾರದರ್ಶಕತೆ ಕಾಯ್ದು ಕೊಳ್ಳಬೇಕು. ಸ್ವಚ್ಛತೆ, ಗುಣಮಟ್ಟ ಹಾಗೂ ಪ್ರಮಾಣದಲ್ಲಿ ಯಾವುದೇ ರಾಜೀ ಮಾಡಿಕೊಳ್ಳಬಾರದು. ಉತ್ತರ ಕರ್ನಾಟಕದಲ್ಲಿ ಸ್ಥಳೀಯ ಆಹಾರ ಒದಗಿಸಬೇಕು. ಸಚಿವರು, ಶಾಸಕರನ್ನು ಉಪಾಹಾರ ಸ್ವೀಕರಿಸಲು ಆಹ್ವಾನಿಸಿ. ಗುಣಮಟ್ಟ ಕಾಪಾಡಲು ಅನುಕೂಲ. ಕಾಲೇಜು, ಆಸ್ಪತ್ರೆ, ಬಸ್ ನಿಲ್ದಾಣ, ತಾಲೂಕು ಕಚೇರಿಗಳಂತಹ ಜನ ಸೇರುವ ಸ್ಥಳಗಳಲ್ಲಿ ಹೊಸ ಇಂದಿರಾ ಕ್ಯಾಂಟೀನ್ ಸ್ಥಾಪಿಸುವ ಕುರಿತು ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ

ಉನ್ನತ ಮೂಲಗಳ ಪ್ರಕಾರ, ಇಂಧನ ಇಲಾಖೆಯಲ್ಲಿ ಸೋರಿಕೆ ತಡೆಗಟ್ಟುವುದು ಸೇರಿದಂತೆ ಆಡಳಿತ ದಲ್ಲಿನ ಲೋಪ–ದೋಷಗಳನ್ನು ಸರಿಪಡಿಸಿ ಕೊಳ್ಳುವುದು ಸೇರಿದಂತೆ ವಿವಿಧ ಬಾಬ್ತು ಗಳ ಮೂಲಕ ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸುವುದು ಅವರ ಗುರಿ. ಹಿಂದಿನ ಸರ್ಕಾರ ವೆಚ್ಚ ಮಾಡದೆ ಉಳಿಸಿರುವ ಹಣದ ಜೊತೆಗೆ ಅಬಕಾರಿ, ನೋಂದಣಿ ಮತ್ತು ಮುದ್ರಾಂಕದ ಬಾಬ್ತಿನಲ್ಲಿ ಹೆಚ್ಚುವರಿ ಹಣ ಹೊಂದಿಸುವ ಯೋಚನೆ ಇದೆ. ಈ ಮಧ್ಯೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟರಿಗೆ ಮೀಸಲಾದ ಹಣದಲ್ಲಿ ಒಂದು ಪಾಲನ್ನು ಪಡೆದು ಅದೇ ಸಮುದಾಯಕ್ಕೆ ಭಾಗ್ಯಗಳನ್ನು ಒದಗಿಸಲು ಬಳಕೆ ಮಾಡುವ ಉದ್ದೇಶ ಹೊಂದಿದ್ದಾರೆ. ಇದೇ ರೀತಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಕಳೆದ ಬಜೆಟ್‌ನಲ್ಲಿ ನಿಗದಿ ಮಾಡಲಾಗಿರುವ ಹಣದ ಪೈಕಿ ಒಂದಷ್ಟು ಪ್ರಮಾಣದಲ್ಲಿ ಕಡಿತ ಮಾಡುವುದು ಮತ್ತು ಈಗಾಗಲೇ ಘೋಷಣೆಯಾಗಿರುವ ಐದು ಭಾಗ್ಯಗಳಿಗೆ ಉಂಟಾಗುವ ಹಣದ ಕೊರತೆಯನ್ನು ನೀಗಿಸುವುದು ಅವರ ಸಧ್ಯದ ಲೆಕ್ಕಾಚಾರವಾಗಿದೆ ಎಂದು ಮೂಲಗಳು ತಿಳಿಸಿವೆ.

ಜನಸ್ನೇಹಿ ಆಡಳಿತ ನೀಡಲು ಸಹಕರಿಸಿ

ವಾರ್ನಿಂಗ್ ನೀಡಿದರು. ಸಚಿವರ ಈ ಖಡಕ್ ಮಾತಿನಿಂದ ತಬ್ಬಿಬ್ಬಾದ ಕುಮುದ ಅವರು ಮರು ಮಾತನಾಡದೆ, ಮೌನವಹಿಸಿದರು. ಮೈಸೂರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಕುರಿತಂತೆ ಮಾಹಿತಿ ಕೇಳಿದಾಗ ಸಮರ್ಪಕ ಉತ್ತರ ನೀಡದ ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯುಟಿವ್ ಇಂಜಿನಿಯರ್ ಪುಟ್ಟರಾಜು ಅವರು, ನ್ಯಾಷನಲ್ ಹೈವೆ ನನ್ನ ವ್ಯಾಪ್ತಿಗೆ ಬರಲ್ಲ ಎಂದು ಸಮಜಾಯಿಷಿ ನೀಡಿದರು.

ಇದರಿಂದ ಕೋಪೋದ್ರಿಕ್ತರಾದ ಡಾ.ಮಹದೇವಪ್ಪ, "ಅಲ್ರೀ ನೀವು ಇಂಜಿನಿಯರ್ ಅಲ್ವಾ, ಟೆಕ್ನಿಕಲ್ ವಿಚಾರ ನಿಮಗೆ ಗೊತ್ತಿಲ್ವಾ ಎಂದು ಪ್ರಶ್ನೆ ಮೇಲೆ ಪ್ರಶ್ನೆ ಮಾಡಿದರು. ತಡವರಿಸಿದ ಪುಟ್ಟರಾಜು ಅವಸ್ಥೆ ನೋಡಿದ ಡಾ.ಮಹದೇವಪ್ಪ ಮುಂದಿನ ಪ್ರಶ್ನೆ ಕೇಳದೆ ಕೂರಲು ಹೇಳಿದರು. ಜನರಿಗೆ ಕೊಟ್ಟ ಭರವಸೆ ಈಡೇರಿಸಬೇಕು. ಜನ ಸ್ನೇಹಿ ಆಡಳಿತ ನೀಡಬೇಕು. ಸರ್ಕಾರದ ಮಾರ್ಗಸೂಚಿಯಂತೆ ಕೆಲಸ ಮಾಡಿ. ಡೇ ಅಂಡ್ ನೈಟ್ ಕೆಲಸ ಮಾಡಬೇಕು ಎಂದು ಡಾ.ಮಹದೇವಪ್ಪ ಅಧಿಕಾರಿಗಳಿಗೆ ತಾಕೀತು ಮಾಡಿದರು. ಸರ್ಕಾರದ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕು. ಮೂರು ತಿಂಗಳಲ್ಲಿ ನಿಮ್ಮ ಕಾರ್ಯವೈಖರಿಯಲ್ಲಿ ಬದಲಾವಣೆ ಗೋಚರಿಸಬೇಕು. ಮೈಸೂರು ಇಡೀ ವಿಶ್ವದಲ್ಲೇ ಪ್ರಖ್ಯಾತಿ ಪಡೆದಿದೆ. ಇದಕ್ಕೆ ಯಾವುದೇ ಕಾರಣಕ್ಕೂ ಕುಂದುಂಟಾಗಬಾರದು. ಪರಿಣಾಮಕಾರಿ ಆಡಳಿತ ನೀಡಿ. ಸಮಯಕ್ಕೆ ಸರಿಯಾಗಿ ಆಫೀಸಿಗೆ ಹೋಗಿ. ಯಾವುದೇ ರೀತಿಯಲ್ಲೂ ಜನರಿಗೆ ತೊಂದರೆ ಆಗಬಾರದು ಎಂದು ಡಾ.ಮಹದೇವಪ್ಪ ತಾಕೀತು ಮಾಡಿದರು. ಜುಲೈ ಮೊದಲ ವಾರದಲ್ಲಿ ಮೈಸೂರು ಜಿಲ್ಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹತ್ತು ಕೆ.ಜಿ. ಅಕ್ಕಿ ನೀಡುವ ಅನ್ನಭಾಗ್ಯ ಯೋಜನೆಗೆ ಚಾಲನೆ ನೀಡಲಿದ್ದಾರೆ. ಇದಕ್ಕೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಿ. ಯಾವುದೇ ಲೋಪ ಆಗಬಾರದು ಎಂದು ಡಾ.ಮಹದೇವಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಧಿಕಾರಿಗಳು ಮಾತ್ರವಲ್ಲದೆ ಡಿಸಿ ಮತ್ತು ಎಸ್ಪಿ ಕೂಡ ತಾಲೂಕು ಹಾಗೂ ಹೋಬಳಿಗಳಿಗೆ ಹೋಗಿ ಜನರ ಸಮಸ್ಯೆ ಆಲಿಸಬೇಕು. ನೆಪಕ್ಕೆ ಮಾತ್ರ ಕೆಲಸ ಮಾಡಬೇಡಿ ಎಂದು ವಾರ್ನಿಂಗ್ ಕೊಟ್ಟ ಡಾ.ಮಹದೇವಪ್ಪ, ಜನರು ಸರ್ಕಾರಿ ಕಚೇರಿಗಳಿಗೆ ಅಲೆಯುವಂತೆ ಆಗಬಾರದು. ಪಂಚಾಯಿತಿ ಅಧಿಕಾರಿಗಳು ಆಯಾ ಕೇಂದ್ರದಲ್ಲಿ ಇರಬೇಕು. ಅವರು ಕೇಂದ್ರದಲ್ಲಿ ಇಲ್ಲದಿದ್ದರೆ ಅವರೇಕೇ ಬೇಕು. ಕೇವಲ ತಂತ್ರಾಂಶ ಬಳಸಬಹುದಲ್ಲವೇ ಎಂದು ಕುಟುಕಿದರು.

ಮೊದಲು ಜಿಲ್ಲಾಮಟ್ಟದ ಅಧಿಕಾರಿಗಳಲ್ಲಿ ಬದಲಾವಣೆ ಆಗಬೇಕು. ಆಗ ಕೆಳಗಿನ ಅಧಿಕಾರಿಗಳ ಕಾರ್ಯ ವೈಖರಿಯಲ್ಲಿ ಬದಲಾವಣೆ ಆಗಲಿದೆ ಎಂದು ಡಾ.ಮಹದೇವಪ್ಪ ಸಲಹೆ ನೀಡಿದರು. ನಾವು ನಿತ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲ್ಲ. ಆದರೆ ನೀವು ತಪ್ಪು ಎಸಗಿ ನಾವು ಮಧ್ಯ ಪ್ರವೇಶ ಮಾಡುವ ಪರಿಸ್ಥಿತಿ ತಂದುಕೊಳ್ಳಬೇಡಿ ಎಂದು ಸಚಿವರು ಎಚ್ಚರಿಕೆ ನೀಡಿದರು.

ಪಾಸ್‌ಗೆ 'ಗೇಟ್ ಪಾಸ್'

ಪ್ರಜೆಗೂ ಧಾರ್ಮಿಕ ಸ್ವಾತಂತ್ರ್ಯವಿದೆ. ಹೀಗಾಗಿ ಭಕ್ತರಿಗೆ ಯಾವುದೇ ಅಡಚಣೆ ಉಂಟಾಗದಂತೆ ಕೆಲಸ ನಿರ್ವಹಿಸಿ ಎಂದು ತಾಕೀತು ಮಾಡಿದರು. ಚಾಮುಂಡಿಬೆಟ್ಟದ ಪಾದದಲ್ಲಿ ವಾಹನಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಿ. ಪ್ರತಿಯೊಬ್ಬರಿಗೂ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲೆ ಉಚಿತ ಪ್ರಯಾಣದ ಸೌಕರ್ಯ ಕಲ್ಪಿಸಿ. ಚಾಮುಂಡಿಬೆಟ್ಟ ಪ್ಲಾಸ್ಟಿಕ್ ಮುಕ್ತವಾಗಿರಬೇಕು. ಯಾವುದೇ ರೀತಿಯ ಪ್ಲಾಸ್ಟಿಕ್ ಕೊಂಡೊಯ್ಯಲು ಅವಕಾಶ ಮಾಡಿಕೊಡಬೇಡಿ. ಜೊತೆಗೆ ಭಕ್ತರು ಪ್ರಸಾದ ವಿತರಣೆ ಮಾಡಲು ಪ್ರತ್ಯೇಕ ವ್ಯವಸ್ಥೆ ಮಾಡಿ, ಶುಚಿತ್ವ ಕಾಪಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೂಡ ಸೂಚನೆ ನೀಡಿದರು. ಸಭೆಯ ನಂತರ ಮಾತನಾಡಿದ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಪ್ರದಾನ ಅರ್ಚಕ ಡಾ. ಶಶಿಶೇಖರ್ ದೀಕ್ಷಿತ್, ಈ ಬಾರಿ ಪಾಸ್ ವ್ಯವಸ್ಥೆ ಮಾಡದಿರುವುದು ಒಳ್ಳೆಯ ತೀರ್ಮಾನ. ಇದರಿಂದ ಗೊಂದಲ ತಪ್ಪುತ್ತದೆ ಎಂದು ಅಭಿಪ್ರಾಯಪಟ್ಟರು.

ಆದರೆ ಆಷಾಢ ಶುಕ್ರವಾರದಂದು ಜನ ಸಾಮಾನ್ಯರಿಗೆ ಒಂದು ಲೈನ್ ಹಾಗೂ ವಿಐಪಿಗಳಿಗೆ ಒಂದು ಲೈನ್ ಮಾಡಿದರೆ ಗೊಂದಲ ಇರುವುದಿಲ್ಲ ಎಂದು ಹೇಳಿದರು.

ಜೂನ್ 23, ಮೊದಲ ಆಷಾಢ ಶುಕ್ರವಾರದ ಪೂಜೆ ಆರಂಭವಾಗಲಿದೆ. ಹಾಗೆಯೇ ಜುಲೈ 14ಕ್ಕೆ ಚಾಮುಂಡೇಶ್ವರಿ ದೇವಿಯ ವರ್ಧಂತಿ ಅದ್ದೂರಿಯಾಗಿ ನಡೆಯಲಿದೆ ಎಂದು ಡಾ.ಶಶಿಶೇಖರ್ ದೀಕ್ಷಿತ್ ತಿಳಿಸಿದರು.

ಟೀಕಿಸಿದವರಿಗೆ ಡಾ.ಮಹದೇವಪ್ಪ ತಿರುಗೇಟು

ತುಂಬಾ ಅನುಕೂಲ ಅಗುತ್ತದೆ. ಉದಾಹರಣೆಗೆ ಗ್ರೂಪ್ ಡಿ ನೌಕರರೊಬ್ಬರಿಗೆ ಸಾವಿರ ರೂಪಾಯಿ ವೆಚ್ಚ ಆಗುತ್ತಿತ್ತು. ಆ ಹಣ ಉಳಿತಾಯ ಆಗಿದೆ ಎಂದು ಆ ಮಹಿಳಾ ಪ್ರಯಾಣಿಕರು ಸಂತೋಷದಿಂದ ತಿಳಿಸಿದ್ದಾರೆ ಎಂದರು. ಮಹಿಳೆಯರ ಸಬಲೀಕರಣಕ್ಕೆ ಕಾಂಗ್ರೆಸ್ ಪಕ್ಷ ಗೃಹಶಕ್ತಿ ಯೋಜನೆಯ ಮೂಲಕ ಹೊಸ ಹೆಜ್ಜೆ ಇಟ್ಟಿದೆ ಈ ಮೂಲಕ ದೇಶದಲ್ಲಿ ಸಂಚಲನ ರೂಪಿಸಿದೆ. ಈ ಯೋಜನೆಗಳನ್ನು ಓಟ್‌ಗಾಗಿ ರಾಜಕೀಯ ದೃಷ್ಟಿ ಇಟ್ಟುಕೊಂಡು ರೂಪಿಸಿಲ್ಲ. ಮಹಿಳಾ ಸಬಲೀಕರಣಕ್ಕೆ ಮಾಡಲೇಬೇಕಾದ ಯೋಜನೆ ಇದಾಗಿತ್ತು ಎಂದು ಡಾ.ಮಹದೇವಪ್ಪ ಸ್ಪಷ್ಟಪಡಿಸಿದರು. ಹಳ್ಳಿ ಜನರು ಪ್ರವಾಸ ಮಾಡಲು ಆಗುತ್ತಿರಲಿಲ್ಲ. ಈಗ ಇದರಿಂದ ಮಹಿಳೆಯರಿಗೆ ಮುಕ್ತ ಅವಕಾಶ ಸಿಗಲಿದೆ. ಪ್ರವಾಸ ಭತ್ಯೆ ಭಾರ ಉಳಿದಿದೆ. ಮಹಿಳೆಯರ ಸಬಲೀಕರಣ ಮಾಡುತ್ತೇವೆ ಎಂದರೆ ವ್ಯಂಗ್ಯ ಮಾಡಿ ಮಾತನಾಡುತ್ತಾರೆ. ಮಹಿಳೆಯರಿಗೆ ಸಮಾನತೆ ಕೊಡಬೇಕು ಎಂದಾಗ ಅಂದು ವಿರೋಧ ಮಾಡಿದ ಮನುವಾದಿಗಳು ಈಗ ವಿರೋಧ ಮಾಡುತ್ತಿದ್ದಾರೆ ಎಂದು ಡಾ.ಮಹದೇವಪ್ಪ ಕಿಡಿಕಾರಿದರು. ಇದೇ ವೇಳೆ ಮಾತನಾಡಿದ ಸಚಿವರು, ಮೈಸೂರು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಅಭಾವ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯಾಗಿಸಲು ಸಹಕರಿಸಿ

● ಬಾಲಕಾರ್ಮಿಕ ವಿರೋಧಿ ದಿನಾಚರಣೆಯಲ್ಲಿ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಜಿ.ಎಸ್.ಸಂಗ್ರೇಶಿ ಸಲಹೆ ● ಬಾಲಕಾರ್ಮಿಕ ಪದ್ಧತಿ ಅಪರಾಧ; ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಪ್ರತಿಯೊಬ್ಬರ ಜವಾಬ್ದಾರಿ



ಮೈಸೂರು, ಜೂ.12(ಎಂಟಿವೈ)– ಶಾಲೆಯಲ್ಲಿ ಕಲಿತು ವಿದ್ಯಾವಂತರಾಗಬೇಕಾದ ಮಕ್ಕಳನ್ನು ಕೆಲಸಕ್ಕೆ ಸೇರಿಸಿ, ಅವರ ಭವಿಷ್ಯ ಹಾಳು ಮಾಡುತ್ತಿರುವ ಪೋಷಕರಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಜಿ.ಎಸ್ ಸಂಗ್ರೇಶಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕಾರ್ಮಿಕ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣ ತೊಡೆದು ಹಾಕಬೇಕೆಂಬ ಉದ್ದೇಶದಿಂದ ಕಳೆದ 21 ವರ್ಷದಿಂದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನ ಆಚರಿಸಲಾಗುತ್ತಿದೆ. 14 ವರ್ಷದೊಳಗಿನ ಮಕ್ಕಳನ್ನು ಮನೆ ಕೆಲಸ, ಕೃಷಿ, ಹೋಟೆಲ್, ಕಾರ್ಖಾನೆಗಳಂತಹ ಅಪಾಯಕಾರಿ ಕೆಲಸಗಳಿಗೆ ಬಳಸಿಕೊಳ್ಳುವುದು ಸಂವಿಧಾನ ವಿರೋಧಿ. ಆದ್ದರಿಂದ ಅಂತಹ ಮಕ್ಕಳನ್ನು ಗುರುತಿಸಿ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು ಎಂಬ ಉದ್ದೇಶದಿಂದ 1983ರಲ್ಲಿ ಕಾಯಿದೆ ರೂಪಿಸಲಾಗಿದೆ. ಈ ಕುರಿತು ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಬಾಲಕಾರ್ಮಿಕ ಪದ್ಧತಿ ವಿರುದ್ಧ ಸಂಘಟಿತ ಹೋರಾಟ ಮಾಡಬೇಕು. ಇಲ್ಲದಿದ್ದರೆ ಮಕ್ಕಳು ಶೋಷಣೆಗೆ ಬಲಿಯಾಗುತ್ತಾರೆ. ಪ್ರತಿ ವರ್ಷವೂ ಬಾಲಕಾರ್ಮಿಕ ವಿರೋಧಿ ದಿನ ಆಚರಿಸುತ್ತೇವೆ. ಆದರೆ, ಎಷ್ಟು ಮಕ್ಕಳನ್ನು ಪಾರು ಮಾಡಿದ್ದೇವೆ ಎನ್ನುವುದು ಮುಖ್ಯ. ಕೋವಿಡ್ ಎಲ್ಲಾ ಕ್ಷೇತ್ರಗಳನ್ನು ಅಲುಗಾಡಿಸಿತು. ಈ ಸಮಯದಲ್ಲಿ ಎಷ್ಟೋ ಮಕ್ಕಳು ಅನಾಥರಾದರು. ಕೆಲವೆಡೆ ಇನ್ನೂ ಬಾಲಕಾರ್ಮಿಕ ಪದ್ಧತಿ ಜೀವಂತವಾಗಿದೆ. ಇದರ ನಿರ್ಮೂಲನೆಗೆ ಎಲ್ಲರ ಸಹಕಾರ ಅಗತ್ಯ. ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಗಬೇಕು. ಈ ನಿಟ್ಟಿನಲ್ಲಿ ಸಮಾಜ ಎಚ್ಚೆತ್ತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿ, ಒಂದು ಕಾಲದಲ್ಲಿ ಬಡತನ, ಹಸಿವಿನಿಂದಾಗಿ ಸಮಾಜದಲ್ಲಿ ಬಾಲಕಾರ್ಮಿಕ ಆಚರಣೆ ಚಾಲ್ತಿಯಲ್ಲಿತ್ತು. ಇಂದು ಮಕ್ಕಳಿಗೆ ಶಿಕ್ಷಣವನ್ನು ಸರ್ಕಾರ ಉಚಿತವಾಗಿ ನೀಡುತ್ತಿದೆ. ಆದ್ದರಿಂದ ಪೋಷಕರು ಸಂಪಾದನೆಗಾಗಿ ಮಕ್ಕಳನ್ನು ಕೆಲಸಕ್ಕೆ ಕಳುಹಿಸಬಾರದು. ಪೋಷಕರ ಬೇಜವಾಬ್ದಾರಿಯಿಂದಲೇ ಬಾಲಕಾರ್ಮಿಕ ಪದ್ಧತಿ ಹೆಚ್ಚುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಜಿಲ್ಲಾಧಿಕಾರಿ ಕಚೇರಿ ಬಳಿ ಇರುವ ಓವೆಲ್ ಮೈದಾನದಿಂದ ಕಲಾಮಂದಿರದವರೆಗೆ ವಿವಿಧ ಶಾಲೆಗಳ ನೂರಾರು ಮಕ್ಕಳಿಂದ ಜಾಗೃತಿ ಜಾಥಾ ನಡೆಯಿತು. ಬಾಲಕಾರ್ಮಿಕ ಪದ್ಧತಿ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಫಲಕ ಪ್ರದರ್ಶಿಸಿ ಮಕ್ಕಳು ಗಮನ ಸೆಳೆದರು.

ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್ ಬಿ.ಜಿ, ಜಿಪಂ ಸಿಇಓ ಡಾ.ಕೆ.ಎಂ.ಗಾಯತ್ರಿ, ಸಿಸಿಬಿ ಎಸಿಪಿ ಸಂದೇಶ್ ಕುಮಾರ್, ಸಹಾಯಕ ಕಾರ್ಮಿಕ ಆಯುಕ್ತೆ ನಾಜೀಯಾ ಸುಲ್ತಾನ್, ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ಮಹಿಳಾ ಒಕ್ಕೂಟದ ಹೇಮಲತಾ, ಆರ್‌ಎಲ್‌ಹೆಚ್‌ಪಿ ಸರಸ್ವತಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

> ಹೋಟೆಲ್ ಉದ್ಯಮ ಹಾಗೂ ರಸ್ತೆ ಬದಿಯಲ್ಲಿ ಇಂದಿಗೂ ಬಾಲ ಕಾರ್ಮಿಕರು ಕೆಲಸ ಮಾಡುವ ದೂರು ಕೇಳಿ ಬರುತ್ತಿವೆ. ಚಿಕ್ಕ ವಯಸ್ಸಿನ ಮಕ್ಕಳಲ್ಲಿ ಹಾರ್ಮೋನ್ ಬದಲಾವಣೆ ಆಗುತ್ತಿರುತ್ತದೆ. ಈ ಸಮಯದಲ್ಲಿ ಅವರ ಮನಸ್ಸು ಬೇರೆ ಕಡೆ ತುಡಿಯುತ್ತದೆ. ಆದ್ದರಿಂದ ಸೂಕ್ತ ಕಾಲದಲ್ಲಿ ಅವರಿಗೆ ಶಿಕ್ಷಣ ನೀಡುವ ಅವಶ್ಯಕತೆ ಇದೆ. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಪೋಷಕರು ಸಹಕರಿಸಬೇಕು. ಅಪಾಯಕಾರಿ ಕೆಲಸಗಳನ್ನು ಮಾಡಿಸುವುದು ಅಪರಾಧ. ಬಾಲ ಕಾರ್ಮಿಕ ಪದ್ಧತಿ ಎಂಬ ಸಾಮಾಜಿಕ ಪಿಡುಗನ್ನು ತಡೆಗಟ್ಟಬೇಕು. ದೇಶ ಸುಭದ್ರವಾಗಬೇಕಾದರೆ ಮಕ್ಕಳ ಕನಸನ್ನು ಸಾಕಾರಗೊಳಿಸುವಂತಹ ವಾತಾವರಣ ಇರಬೇಕು. ಮಕ್ಕಳಲ್ಲಿ ಸುರಕ್ಷತೆ ಭಾವನೆ ಮೂಡಿಸಬೇಕು. ಆರ್ಥಿಕವಾಗಿ ಸಬಲರಾಗಿರುವವರು ಬಡ ಮಕ್ಕಳ, ಬಾಲಕಾರ್ಮಿಕ ಪದ್ಧತಿಗೆ ದೂಡಲ್ಪಟ್ಟ ಮಕ್ಕಳ ಶಿಕ್ಷಣಕ್ಕೆ ನೆರವಾಗಬೇಕು. ಮೈಸೂರನ್ನು ಬಾಲಕಾರ್ಮಿಕ ಮುಕ್ತ ಮಾಡಲು ಎಲ್ಲರ ಸಹಕಾರ ಅಗತ್ಯ
>
> – ಡಾ. ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಆರ್‌ಟಿಐ ವೇದಿಕೆಯ ಮೈಸೂರು ಜಿಲ್ಲಾ ಘಟಕ ಉದ್ಘಾಟನೆ



ಮೈಸೂರು,ಜೂ.12(ಪಿಎಂ)– ಮಾಹಿತಿ ಹಕ್ಕು ಕಾರ್ಯಕರ್ತರ (ಆರ್‌ಟಿಐ) ವೇದಿಕೆಯ ಮೈಸೂರು ಜಿಲ್ಲಾ ಘಟಕ ಅಸ್ತಿತ್ವಕ್ಕೆ ಬಂದಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಘಟಕಕ್ಕೆ ಚಾಲನೆ ನೀಡಲಾಯಿತು.

ಇತ್ತೀಚೆಗೆ ಕನಕಪುರದಲ್ಲಿ ಹತ್ಯೆಯಾದ ಆರ್‌ಟಿಐ ಕಾರ್ಯಕರ್ತ ಮೂರ್ತಿ ಅವರ ತಾಯಿ ಶಾಂತಮ್ಮ ಮೈಸೂರು ಜಿಲ್ಲಾ ಘಟಕದ ಉದ್ಘಾಟನೆ ನೆರವೇರಿಸಿದರು. ಇದೇ ವೇಳೆ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ಹನುಮಂತರಾಯಪ್ಪ, ಇದೀಗ ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವೇದಿಕೆಯ ಘಟಕಗಳು ಇದ್ದು, ಭ್ರಷ್ಟಾಚಾರದ ವಿರುದ್ಧ ನಮ್ಮ ಕಾರ್ಯಕರ್ತರು ಸಮರ್ಥವಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದರು.

ಮೈಸೂರು ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ವ್ಯಾಪಕವಾಗುತ್ತಿರುವ ಬಗ್ಗೆ ನಮ್ಮ ವೇದಿಕೆಗೆ ದೂರುಗಳು ಬಂದಿವೆ. ಇಂತಹ ವ್ಯವಸ್ಥೆ ನಿಯಂತ್ರಿಸುವ ಮೂಲಕ ಸಾರ್ವಜನಿಕರಿಗೆ ಸವಲತ್ತು ಕಲ್ಪಿಸಿಕೊಡಿಸುವ ನಿಟ್ಟಿನಲ್ಲಿ ವೇದಿಕೆಯ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ವೇದಿಕೆ ರಾಜ್ಯ ಸಮಿತಿ ಸದಸ್ಯ ಕೆ.ಹೆಚ್. ವೆಂಕಟೇಶ್ ಮಾತನಾಡಿ, ರಾಜ್ಯವೂ ಸೇರಿದಂತೆ ಇಡೀ ದೇಶದಲ್ಲಿ ಇಂದು ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಆರ್‌ಟಿಐ ಕಾಯ್ದೆ ಮೂಲಕ ಮಾಹಿತಿ ಹೊರತೆಗೆದು ಭ್ರಷ್ಟಾಚಾರ ನಿಯಂತ್ರಿಸಲು ಸಾಧ್ಯವಿದೆ. ಹೀಗಾಗಿ ಈ ಕಾಯ್ದೆ ಸದ್ಬಳಕೆ ಆಗಬೇಕಿದೆ. ವೇದಿಕೆಯು ಭ್ರಷ್ಟಾಚಾರ ನಿಯಂತ್ರಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಉದ್ದೇಶ ಹೊಂದಿದೆ ಎಂದರು.

ಮೈಸೂರು ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಣೆ ಮಾಡಲಾಯಿತು. ಮೈಸೂರು ಜಿಲ್ಲಾ ಘಟಕದ ಹಂಗಾಮಿ ಅಧ್ಯಕ್ಷರಾಗಿ ಎನ್.ಹೇಮಂತ್, ಉಪಾಧ್ಯಕ್ಷರಾಗಿ ಮೊಹಮ್ಮದ್ ಸಫೀರ್, ಪ್ರಧಾನ ಕಾರ್ಯದರ್ಶಿಯಾಗಿ ದೀಪು, ಖಜಾಂಚಿಯಾಗಿ ಎಸ್.ವಾಣಿ, ಸಂಘಟನಾ ಕಾರ್ಯದರ್ಶಿಯಾಗಿ ಪಿ.ಎಸ್. ಯೋಗೇಶ್, ಸದಸ್ಯರಾಗಿ ವಿ.ನಿರಂಜನ ರಾಜು, ಕೆ.ಕಾರ್ತಿಕ್ ಸಾಗರ್, ಪಿ.ಪುನೀತ್ ಕುಮಾರ್, ಮೊಹಮ್ಮದ್ ರಫೀಕ್ ನೇಮಕಾತಿ ಪತ್ರಗಳನ್ನು ಸ್ವೀಕರಿಸಿದರು.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.12– 2023–24ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ (5 ರಿಂದ 10ನೇ ತರಗತಿ) ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಪಡೆಯಲು ಇಲಾಖಾ ವೆಬ್‌ಸೈಟ್ sw.kar.nic.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪಡುವಾರಹಳ್ಳಿಯಲ್ಲಿನ ಡಾ. ಬಾಬು ಜಗಜೀವನರಾಂ ಭವನ ಕಟ್ಟಡದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಅಥವಾ ದೂ.ಸಂ. 0821–2520910 ಅನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬರುವ ಶುಕ್ರವಾರ ಅಂಬರೀಶ್ ಪುತ್ರ ಅಭಿಷೇಕ್ ಬೀಗರ ಔತಣ

ಆಹಾ... ಬಾಯಲ್ಲಿ ನೀರೂರಿಸುತ್ತಿದೆ ಬಾಡೂಟದ ಮೆನು

ಮಂಡ್ಯ, ಜೂ.12– ರೆಬೆಲ್ ಸ್ಟಾರ್ ಅಂಬರೀಶ್ ಅವರ ಪುತ್ರ ಅಭಿಷೇಕ್ ಅಂಬರೀಶ್ ಹಾಗೂ ಅವಿವಾ ಬಿದ್ದಪ್ಪ ಮದುವೆ ಇತ್ತೀಚೆಗಷ್ಟೆ ಅದ್ದೂರಿಯಾಗಿ ಬೆಂಗಳೂರಿನಲ್ಲಿ ನೆರವೇರಿತು. ಈಗ ಬೀಗರ ಔತಣ ಕೂಟವನ್ನು ಮಂಡ್ಯದಲ್ಲೇ ನಡೆಸಲು ಸಂಸದೆ ಸುಮಲತಾ ನಿರ್ಧರಿಸಿದ್ದಾರೆ.



ಜೂನ್ 16ರಂದು ಮಂಡ್ಯದಲ್ಲಿ ನಡೆಯಲಿರುವ ಬೀಗರೂಟಕ್ಕೆ ಭರ್ಜರಿ ತಯಾರಿ ಆರಂಭವಾಗಿದೆ. ವಿಧಾನಸಭಾ ಚುನಾವಣೆ ವೇಳೆ ಪ್ರಧಾನಿ ನರೇಂದ್ರ ಮೋದಿಯವರ ಕಾರ್ಯಕ್ರಮ ನಡೆದಿದ್ದ ಮದ್ದೂರಿನ ಗೆಜ್ಜಲಗೆರೆಯ ವಿಶಾಲವಾದ ಮೈದಾನದಲ್ಲಿ ಬೀಗರ ಔತಣಕ್ಕೆ ಸಿದ್ಧತೆ ಆರಂಭವಾಗಿವೆ. ಸುಮಾರು 15 ಎಕರೆ ಪ್ರದೇಶದಲ್ಲಿ ಜರ್ಮನ್ ಟೆಂಟ್‌ಗಳನ್ನು ಹಾಕಲಾಗುತ್ತಿದ್ದು, ಎಲ್ಲರೂ ನೆರಳಿನಲ್ಲಿ ಕುಳಿತು ನೆಮ್ಮದಿಯಿಂದ ಊಟ ಸೇವಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಸುಮಾರು ಐವತ್ತು ಸಾವಿರ ಜನರಿಗೆ ಭೋಜನದ ವ್ಯವಸ್ಥೆ ಮಾಡಲಾಗುತ್ತಿದ್ದು, ವಿಐಪಿ ಹಾಗೂ ಸಾಮಾನ್ಯರಿಗೆ ಪ್ರತ್ಯೇಕ ಎರಡು ಕೌಂಟರ್‌ಗಳನ್ನು ಮಾಡಲಾಗುತ್ತಿದೆ.

ಹೀಗಿದೆ ಮೆನು...

7 ಟನ್ ಮಟನ್, 7 ಟನ್ ಚಿಕನ್ ಬಳಸಿ ಬೀಗರೂಟ ತಯಾರು ಮಾಡಲಾಗುತ್ತಿದೆ. ರಾಗಿ ಮುದ್ದೆ, ಬೋಟಿ ಗೊಜ್ಜು, ಮೊಟ್ಟೆ, ಮಟನ್, 2 ತರ ಚಿಕನ್, ಗೀ ರೈಸ್, ಅನ್ನ, ತಿಳಿ ಸಾಂಬಾರ್, ಮಜ್ಜಿಗೆ, ಬಾಳೆಹಣ್ಣು, ಬೀಡಾ ನಂದಿನಿ ಐಸ್ ಕ್ರೀಂ.

ಅಭಿಷೇಕ್ ಅಂಬರೀಶ್ ಹಾಗೂ ಅವಿವಾ ಬಿದಪ್ಪ ಅವರ ವಿವಾಹ ಜೂನ್ 5ರಂದು ಅದ್ದೂರಿಯಾಗಿ ನೆರವೇರಿತ್ತು. ಮರುದಿನವೇ ಅರಮನೆ ಮೈದಾನದಲ್ಲಿ ಅದ್ದೂರಿ ಆರತಕ್ಷತೆ ಕಾರ್ಯಕ್ರಮವೂ ನಡೆಯಿತು. ತೆಲುಗು, ತಮಿಳು, ಬಾಲಿವುಡ್‌ನ ಹಲವು ತಾರೆಯರು ಅಭಿಷೇಕ್–ಅವಿವಾ ಆರತಕ್ಷತೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಸರ್ಕಾರದ ಗ್ಯಾರಂಟಿ ಯೋಜನೆ ಬಗ್ಗೆ ಎಂಜಿಪಿಯಲ್ಲಿ ಬಿಸಿಬಿಸಿ ಚರ್ಚೆ

ಆರ್ಥಿಕವಾಗಿ ಸಬಲರಾಗಿರುವವರು ಸ್ವಯಂ ಪ್ರೇರಿತರಾಗಿ ಗ್ಯಾರಂಟಿ ತ್ಯಜಿಸಬೇಕು

ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಚಿಂತಾಮಣಿ ಸಲಹೆ



ಮೈಸೂರು, ಜೂ.12(ಎಸ್‌ಪಿಎನ್)– ರಾಜ್ಯ ಸರ್ಕಾರ ಮಹಿಳೆಯರಿಗಾಗಿ ಜಾರಿಗೊಳಿಸುತ್ತಿರುವ ಗ್ಯಾರಂಟಿ ಯೋಜನೆಗಳ ಬಗ್ಗೆ ಆರ್ಥಿಕ ವಲಯದಲ್ಲಿ ತೀವ್ರ ಚರ್ಚೆಯಾಗುತ್ತಿದ್ದು, ಈ ಆರ್ಥಿಕ ನೆರವು 'ಫ್ರೀ ಬಿ' ವ್ಯಾಪ್ತಿಯಲ್ಲಿ ಕೆಲವರು ಚರ್ಚಿಸುತ್ತಿದ್ದಾರೆ. ಇನ್ನು ಕೆಲವರು ಇದು 'ಹೊಸ ಆರ್ಥಿಕ ಸಬಲೀಕರಣ' ವ್ಯಾಪ್ತಿಯಲ್ಲಿ ವ್ಯಾಖ್ಯಾನ ನೀಡುತ್ತಿದ್ದಾರೆ ಎಂದು ಜೆಎಸ್‌ಎಸ್ ಪದವಿ ಕಾಲೇಜಿನ ಅರ್ಥಶಾಸ್ತ್ರದ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಚಿಂತಾಮಣಿ ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿ ಮೈಸೂರು ಗ್ರಾಹಕರ ಪರಿಷತ್ ಕಚೇರಿಯಲ್ಲಿ ಆಯೋಜಿಸಿದ್ದ ಮಾಸಿಕ ಸಾಮಾನ್ಯ ಸಭೆಯಲ್ಲಿ ಆಯೋಜಿಸಿದ್ದ ರಾಜ್ಯ ಸರ್ಕಾರ ಜಾರಿಗೊಳಿಸುತ್ತಿರುವ ಗ್ಯಾರಂಟಿ ಯೋಜನೆಗಳ ಕುರಿತು ವಿಶೇಷ ಉಪನ್ಯಾಸದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

1972ರಲ್ಲಿ ಅಂದಿನ ಸರ್ಕಾರ ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದವರಿಗೆ ಬೇರೆ ಬೇರೆ ರೀತಿಯಲ್ಲಿ ಸವಲತ್ತುಗಳನ್ನು ಜಾರಿಗೊಳಿಸಿತ್ತು. ಉದಾಹರಣೆಗೆ 'ಉಳುವವನೇ ಭೂಮಿ ಒಡೆಯ', ಶೋಷಿತರಿಗೆ ವಿಶೇಷ ಆರ್ಥಿಕ ಸವಲತ್ತು, ವಿದ್ಯಾಭ್ಯಾಸದಿಂದ ದೂರ ಉಳಿದ ವರ್ಗಕ್ಕೆ ಉಚಿತ ವಸತಿ ನಿಲಯ ಸವಲತ್ತು ಕಲ್ಪಿಸಿ, ಶಿಕ್ಷಣ ನೀಡಿದಂತೆ. ಈಗ ಉಳ್ಳವರು 'ಫ್ರೀ ಬಿ' ವ್ಯಾಪ್ತಿಯಲ್ಲಿ ಗ್ಯಾರಂಟಿ ಯೋಜನೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಇನ್ನೂ ಕೆಲವರು ಬಡವರು, ಮಧ್ಯಮ ವರ್ಗಕ್ಕೆ ನೀಡುತ್ತಿರುವ 'ಹೊಸ ಆರ್ಥಿಕ ನೀತಿ' ಎಂದೇ ಚರ್ಚೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಈಗಲೂ ಅದೇ ರೀತಿ ಐದು ಗ್ಯಾರಂಟಿಗಳ ಜಾರಿಯಾಗುತ್ತಿರುವ ಸಂದರ್ಭದಲ್ಲಿ ಒಂದು ವರ್ಗ ವಿರೋಧಿಸುತ್ತಿದೆ. ಇನ್ನೊಂದು ವರ್ಗ ಸ್ವಾಗತಿಸುತ್ತಿದೆ. ಏಕೆಂದರೆ, ಆರ್ಥಿಕ ಮತ್ತು ಸಾಮಾಜಿಕ ಅಸಮತೋಲನ ಆದಾಗ ಮಾತ್ರ ಈ ರೀತಿ ಚರ್ಚೆಗಳು ಆರಂಭಗೊಳ್ಳುತ್ತದೆ. ಇದರಿಂದ ಕೆಲವರಿಗೆ ಆರ್ಥಿಕ ಹೊಡೆತ ಬೀಳುತ್ತದೆ. ಆದರೂ ಕೆಲವು ದಿನಗಳವರೆಗೆ ಇದನ್ನು ತಡೆದುಕೊಳ್ಳುವುದು ವ್ಯವಸ್ಥೆಯಲ್ಲಿ ಅನಿವಾರ್ಯ ಎಂದು ಅಭಿಪ್ರಾಯಪಟ್ಟರು.

ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬರಲು ಚುನಾವಣಾ ಸಂದರ್ಭದಲ್ಲಿ ದೊಡ್ಡ ಮೊತ್ತದ ಬೊಕ್ಕಸಕ್ಕೆ ಹೊರೆಯಾಗುವ ಯೋಜನೆಗಳನ್ನು ಪ್ರಕಟಿಸಿ, ಈಗ ಅಧಿಕಾರಕ್ಕೆ ಬಂದಿದ್ದಾರೆ. ಯೋಜನೆಗಳು ಜಾರಿಗೊಂಡಿದ್ದರೂ ಬಹುವರ್ಗಕ್ಕೆ ಉಪಯೋಗವಾಗುತ್ತಿದೆ. ಇದನ್ನು ಆರ್ಥಿಕವಾಗಿ ಅನುಕೂಲವಾಗಿರುವವರು ಯೋಜನೆಗಳಿಂದ ಸ್ವಯಂಪ್ರೇರಿತವಾಗಿ ಹೊರಬರಬೇಕು ಎಂದು ಸಲಹೆ ನೀಡಿದರು.

ಸೋಂಬೇರಿ ವರ್ಗ ಸೃಷ್ಟಿ ಆರೋಪ: ಅಭಿವೃದ್ಧಿಗೆ ಹಿನ್ನಡೆಯಾಗುವ ಇಂತಹ ಜನಪ್ರಿಯ ಕಾರ್ಯಕ್ರಮ ತಡೆಗಟ್ಟಲು ಸಾಧ್ಯವಿಲ್ಲ. ದುಡಿಯುವ ವರ್ಗಕ್ಕೆ 'ಫ್ರೀ ಬಿ' ಜಾರಿ ಮಾಡಿ ಸೋಂಬೇರಿ ವರ್ಗ ಸೃಷ್ಟಿಸುತ್ತಿವೆ ಎಂಬ ಗದ್ದಲ ಕೆಲವರು ಆರಂಭಿಸುತ್ತಿದ್ದಾರೆ. ಆದರೆ, ನನ್ನ ದೃಷ್ಟಿಯಲ್ಲಿ ವ್ಯಕ್ತಿಯ ಮೇಲೆ ಯೋಜನೆಗಳ ಉಪಯೋಗ ಅವಲಂಬಿತವಾಗುತ್ತವೆ ಎಂದು ಸಭೆಯಲ್ಲಿದ್ದ ಸದಸ್ಯರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ತಡೆಯಲು ಸಾಧ್ಯವೇ?: ಇಂತಹ ತಾತ್ಕಾಲಿಕ ಜನಪ್ರಿಯ ಕಾರ್ಯಕ್ರಮಗಳನ್ನು ಮತದಾರರಿಗೆ ಘೋಷಣೆ ಮಾಡುವುದರಿಂದ ಪರೋಕ್ಷವಾಗಿ ತೆರಿಗೆದಾರರ ಮೇಲೆ ಹೆಚ್ಚಿನ ಹೊರೆಯಾಗುತ್ತಿದ್ದು, ಇದನ್ನು ತಡೆಗಟ್ಟುವ ಬಗೆ ಹೇಗೆ? ಎಂದು ವಾದ ಮಂಡಿಸಿದರೆ, ಇನ್ನೂ ಕೆಲವು ಇದನ್ನು ಫ್ರೀ ಬಿ ವ್ಯಾಪ್ತಿಯಲ್ಲಿ ಚರ್ಚಿಸುವುದಕ್ಕಿಂತ, ಹೊಸ ಆರ್ಥಿಕ ಸಬಲೀಕರಣದಡಿ ಚರ್ಚಿಸಿದರೆ ಚೆಂದ ಎಂದು ಸಭೆಯಲ್ಲಿ ಕೆಲವರು ಅಭಿಪ್ರಾಯಪಟ್ಟರು.

ಶಕ್ತಿ ಯೋಜನೆಗೆ ಮಹಿಳಾ ಸದಸ್ಯರೇ ವಿರೋಧ: ಸಭೆಯಲ್ಲಿದ್ದ ಕೆಲ ಮಹಿಳಾ ಸದಸ್ಯರು, ಎಲ್ಲರಿಗೂ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಡುವುದರಿಂದ ಕೆಎಸ್‌ಆರ್‌ಟಿಸಿ ನಿಗಮ ಆರ್ಥಿಕ ಪರಿಸ್ಥಿತಿ ಬಗ್ಗೆ ಒಬ್ಬರೂ ಚರ್ಚಿಸುತ್ತಿಲ್ಲ. ಇಂದು ಉಚಿತ ಅಂತ ಹೇಳಿ ಮತ್ತೊಂದು ದುಪ್ಪಟ್ಟು ತೆರಿಗೆ ಹಾಕುತ್ತಾರೆ. ಶಕ್ತಿ ಯೋಜನೆ ಅನುಷ್ಠಾನಕ್ಕೆ ಕೆಲ ಮಹಿಳೆಯರು ಸಾಧಕ–ಬಾಧಕ ಚರ್ಚಿಸಿ, ವಿರೋಧಿಸುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಒಂದೇ ರೀತಿ ವ್ಯಾಖ್ಯಾನ ಬೇಡ: ಐದು ಗ್ಯಾರಂಟಿಗಳ ಯೋಜನೆಗಳ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಹಿರಿಯರು, ವಿಧವೆಯರು, ಅಂಗವಿಕಲರು, ತರಬೇತಿ ಪಡೆಯುವ ಯುವಕರಿಗೆ ಭತ್ಯೆ, ವಿದ್ಯಾರ್ಥಿಗಳಿಗೆ ಶಿಷ್ಯವೇತನ ಸೇರಿದಂತೆ ಇತರೆ ಸಾಮಾಜಿಕ ಪಿಂಚಣಿ, ಸಬ್ಸಿಡಿಗಳ ಬಗ್ಗೆ ಒಂದೇ ರೀತಿ ವ್ಯಾಖ್ಯಾನ ಬೇಡ ಎಂದು ಕೆಲ ನಿವೃತ್ತ ಪ್ರಾಧ್ಯಾಪಕರು ವಿರೋಧ ವ್ಯಕ್ತಪಡಿಸಿದರು.

ಈ ವೇಳೆ ಮೈಸೂರು ಗ್ರಾಹಕ ಪರಿಷತ್ ಅಧ್ಯಕ್ಷ ಶ್ರೀಶೈಲ ರಾಮಣ್ಣವರ್, ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಡಾ.ಶೇಖರ್ ಎಸ್.ಅಯ್ಯರ್, ಶೋಭಾ ಸದಾಶಿವನ್, ಉಷಾ ಮನೋಹರ್ ಲಾಲ್, ನಿವೃತ್ತ ವಿಜ್ಞಾನಿ ಜಗನ್ನಾಥ್, ವಿ.ಎಸ್. ಸೇತುರಾಂ, ಬಿ.ಜೆ.ಜ್ವಾಲ ಸುರೇಶ್, ಎಸ್.ವಿ.ಶಂಕರ್, ಕಲ್ಪನ ವಿಶ್ವನಾಥನ್, ಗೀತಾ ವೇಲುಮಣಿ, ಡಿ.ವಿ.ದಯಾನಂದ ಸಾಗರ್, ಎಲ್.ಎನ್.ಯಾದವ್, ವಿ.ಪ್ರಭ, ಗುರುಪ್ರಸಾದ್, ಸಚಿತ, ಲಲಿತಾ ರಾಮಣ್ಣ, ಮನೋಹರ್, ಯು.ಎಸ್.ಸದಾಶಿವ, ನಿವೃತ್ತ ಪ್ರಾಧ್ಯಾಪಕ ಎನ್.ಎಸ್. ರಂಗರಾಜು ಸೇರಿದಂತೆ ಇತರರಿದ್ದರು.

ಸಭೆಯಲ್ಲಿ ವಿವಿಧ ಕ್ಷೇತ್ರದ ತಜ್ಞರಿಂದ ವ್ಯಕ್ತವಾದ ಸಲಹೆಗಳು

- ಗ್ಯಾರಂಟಿಗಳ ಯೋಜನೆಗಳ ಬಗ್ಗೆ ತಜ್ಞರ ಅಭಿಪ್ರಾಯ ಕ್ರೋಡೀಕರಿಸಿ, ಸರ್ಕಾರಕ್ಕೆ ಪತ್ರ ಬರೆಯಬೇಕು
- ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಇತರೆ ತೆರಿಗೆಗಳ ವ್ಯತ್ಯಾಸ ಮತ್ತು ಆಯವ್ಯಯಗಳ ಬಗ್ಗೆ ಗಮನಹರಿಸಬೇಕು.
- ಯೋಜನೆಗಳ ಅನುಷ್ಠಾನದಿಂದ ಪ್ರಜಾಪ್ರಭುತ್ವದ ವ್ಯವಸ್ಥೆ ಮೇಲಾಗುವ ಪರಿಣಾಮಗಳ ಬಗ್ಗೆ ಚರ್ಚಿಸಬೇಕು
- ಜಾಗತಿಕ ಮಟ್ಟದಲ್ಲಿ ಪ್ರಸ್ತುತ ಚರ್ಚೆಯಾಗುತ್ತಿರುವ ಆರ್ಥಿಕ ಸುಧಾರಣೆ ಬಗ್ಗೆ ಸ್ಥಳೀಯವಾಗಿಯು ಚರ್ಚೆಯಾಗುವಂತೆ ನೋಡಿಕೊಳ್ಳಬೇಕು.
- ಉಚಿತ ಯೋಜನೆಗಳನ್ನು ಜಾರಿಗೊಳಿಸುವುದರಿಂದ ಇತರೆ ಖಾಸಗಿ ಕ್ಷೇತ್ರದ ಮೇಲಾಗುವ ಪರಿಣಾಮವನ್ನು ಶಾಲಾ–ಕಾಲೇಜು ಮಟ್ಟದಲ್ಲಿ ತಜ್ಞರ ತಂಡದ ಮೂಲಕ ಜಾಗೃತಿ ಮೂಡಿಸಬೇಕು.

> ಗ್ಯಾರಂಟಿಗಳ ಯೋಜನೆಗಳ ಬಗ್ಗೆ ಪ್ರಸ್ತುತ ನಕಾರಾತ್ಮಕವಾಗಿ ಮಾತನಾಡುವುದು ಬೇಡ. ಬದಲಾಗಿ, ದುಡಿಯುವ ವರ್ಗಕ್ಕೆ ಇಂತಹ ಕಾರ್ಯಕ್ರಮಗಳು ಅನಿವಾರ್ಯ. ಕೇಂದ್ರ ಸರ್ಕಾರ ಗ್ಯಾಸ್ ಸಿಲಿಂಡರ್‌ಗಳಿಗೆ ನೀಡುತ್ತಿದ್ದ ಸಬ್ಸಿಡಿ ಸ್ಥಗಿತಗೊಳಿಸಿ, ಉಜ್ವಲ ಯೋಜನೆಯಡಿ ಉಚಿತವಾಗಿ ಗ್ಯಾಸ್ ವಿತರಣೆ ಮಾಡಿ, ಕೆಲ ದಿನಗಳು ಮುಂದುವರೆಸಿತು. ಈಗ ಸಂಪೂರ್ಣ ಯೋಜನೆಯನ್ನೇ ಸ್ಥಗಿತಗೊಳಿಸಿದೆ. ಕೇಂದ್ರ ಸರ್ಕಾರದ ಈ ನಿರ್ಧಾರದಿಂದ ಬಡವರು, ರೈತಾಪಿ ಕುಟುಂಬ ಹಾಗೂ ಇತರೆ ವರ್ಗ ದುಪ್ಪಟ್ಟು ಹಣ ನೀಡಿ ಗ್ಯಾಸ್ ಖರೀದಿ ಮಾಡುತ್ತಿದ್ದಾರೆ. ಇದರಿಂದ ಸೌದೆ ಒಲೆ ನೆಚ್ಚಿಗೊಂಡಿದ್ದ ಅನೇಕ ಗೃಹಿಣಿಯರಿಗೆ ತೊಂದರೆಯಾಗಿದೆ. ಇದರ ಬಗ್ಗೆಯೂ 'ಫ್ರೀ ಬಿ' ಪರ ಇರುವವರು ಮಾತನಾಡಬೇಕು.
>
> – ಪ್ರೊ.ರಂಗರಾಜು, ನಿವೃತ್ತ ಪ್ರಾಧ್ಯಾಪಕ

ಮೈಸೂರು ಮಿತ್ರ

ಕಾಂಗ್ರೆಸ್‌ನಿಂದ ಸಂವಿಧಾನಬದ್ಧ ಆಡಳಿತ

ಸನ್ಮಾನ ಸ್ವೀಕರಿಸಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ



ತಿ.ನರಸೀಪುರ, ಜೂ.12– ರಾಜ್ಯದಲ್ಲಿ ಬಡವರು, ಮಧ್ಯಮ ವರ್ಗದ ಜನರು ಹಾಗೂ ರೈತರ ಪರವಾದ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಪ್ರಜಾಪ್ರಭುತ್ವವನ್ನು ಬಲಪಡಿಸಲು ಹಾಗೂ ಸಂವಿಧಾನದ ಆಶಯಗಳಿಗೆ ತಕ್ಕಂತಹ ಆಡಳಿತವನ್ನು ಕಾಂಗ್ರೆಸ್ ನೀಡಲಿದೆ ಎಂದು ನೂತನ ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಭರವಸೆ ನೀಡಿದರು.

ಪಟ್ಟಣದಲ್ಲಿಂದು ನಡೆದ ಸರಳ ಸಮಾರಂಭದಲ್ಲಿ ಅಹಿಂದ ಮುಖಂಡ ಹಾಗೂ ನಗರಪಾಲಿಕೆಯ ಮಾಜಿ ಸದಸ್ಯ ಬಿ.ಎಂ. ನಟರಾಜು ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತವನ್ನು ನೀಡುವ ಮೂಲಕ ಜನರು ರಾಜ್ಯದಲ್ಲಿ ಬಿಜೆಪಿಯ ದುರಾಡಳಿತವನ್ನು ಕೊನೆಗಾಣಿಸಿದ್ದಾರೆ. ಜನಪರವಾದ ಸರ್ಕಾರ ಅಧಿಕಾರಕ್ಕೆ ತರಲೇಬೇಕು ಎಂದು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಕೈಗೆ ಅಧಿಕಾರವನ್ನು ನೀಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ನಗರಪಾಲಿಕೆ ಮಾಜಿ ಸದಸ್ಯ ಬಿ.ಎಂ. ನಟರಾಜು ಮಾತನಾಡಿ, ಮುಂಬರುವ ಜಿಪಂ ಮತ್ತು ತಾಪಂ ಹಾಗೂ ಲೋಕಸಭೆ ಚುನಾವಣೆಗೆ ಕಾರ್ಯಕರ್ತರು ಈಗಿನಿಂದಲೇ ಸಜ್ಜಾಗಬೇಕು ಎಂದು ಸಲಹೆ ನೀಡಿದರು.

ಚುನಾವಣೆಯ ಪೂರ್ವದ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದ 5 ಭರವಸೆಗಳನ್ನು ಮುಖ್ಯಮಂತ್ರಿ ಆಗುತ್ತಿದ್ದಂತೆ ಸಿದ್ದರಾಮಯ್ಯ ಅವರು ಈಡೇರಿಸುವ ಮೂಲಕ ನಮ್ಮದು ನುಡಿದಂತೆ ನಡೆಯುವ ಸರ್ಕಾರ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ.

ಮಹಿಳೆಯರಿಗೆ ಉಚಿತ ಸಾರಿಗೆ ಬಸ್ ಪ್ರಯಾಣ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯೋಜನೆ ಜಾರಿಗೆ ತಂದು ಚಾಲನೆ ನೀಡಿದ್ದಾರೆ. ಮಹಿಳೆಯರು ಪ್ರವಾಸಿ ತಾಣಗಳಿಗೆ ಭೇಟಿ ನೀಡಬಹುದು ಎಂದರು. ರಾಜ್ಯದ ಹಣಕಾಸಿನ ಸತ್ಯಾಸತ್ಯತೆಯನ್ನು ಜನರ ಮುಂದೆ ಇಟ್ಟಿದ್ದಾರೆ. ಮುಂದಿನ ಐದು ವರ್ಷಗಳ ಕಾಲ ರಾಜ್ಯದ ಜನರು ಪಾರದರ್ಶಕತೆಯ ಭ್ರಷ್ಟಾಚಾರ ಮುಕ್ತ ಸರ್ಕಾರದ ಆಡಳಿತವನ್ನು ನೋಡುವುದರಲ್ಲಿ ಯಾವುದೇ ಅನುಮಾನವಿಲ್ಲ. ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಮತ್ತು ಆಡಳಿತದಲ್ಲಿ ದಕ್ಷತೆಯನ್ನ ಕಾಯ್ದುಕೊಳ್ಳುವುದು ಖಚಿತ ಎಂದು ತಿಳಿಸಿದರು.

ಪುರಸಭೆಯ ಮಾಜಿ ಅಧ್ಯಕ್ಷ ಎನ್.ಎಸ್. ಬಸವರಾಜು, ಬಸವಣ್ಣ, ಎನ್. ಮಹಾದೇವ ಸ್ವಾಮಿ, ಶಿಂಸಾ ದಿನೇಶ್, ದದ್ದೂರಿ ಶೇಖರ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ.1.10ಕ್ಕೆ, ಜೆರ್ಸಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.
ಸ್ಕ್ರೀನ್ 3	ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ)**: ಸಂ.4.50ಕ್ಕೆ, **ಚೌಕಾಬಾರ (ಕ)**: ರಾ.7.50ಕ್ಕೆ, **ಕ್ರಿಡ್ 3 (ಇಂ)**: ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ)**: ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ)**: ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ)**: ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ)**: ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ)**: ಮ.2.45ಕ್ಕೆ, ರಾ.7.45ಕ್ಕೆ, **65 (ಇಂ)**: ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿದ್ಯಾರ್ಥಿನಿ ಆತ್ಮಹತ್ಯೆ

ಮಲ್ಲುಂಡಿ, ಜೂ.12– ಹೊಟ್ಟೆ ನೋವು ತಾಳಲಾರದೆ ವಿದ್ಯಾರ್ಥಿನಿಯೊಬ್ಬರು ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಹುರ ಗ್ರಾಮದಲ್ಲಿ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ಹೊಣಕನಪುರ ಗ್ರಾಮದ ವೆಂಕಟರಾಮ ನಾಯಕ ಎಂಬುವರ ಪುತ್ರಿ ಗೀತಾ(12) ಭಾನುವಾರ ಶಾಲೆಗೆ ಹೋಗುವುದಾಗಿ ಹೇಳಿ ಹುರ ಗ್ರಾಮದ ಕೆರೆಗೆ ಬಂದು ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈಕೆಯು ಮೊರಾರ್ಜಿ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಆಗಾಗ ಹೊಟ್ಟೆ ನೋವು ಕಾಣಿಸಿಕೊಳ್ಳುತ್ತಿತ್ತು. ಆದ್ದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಂತರ ವಾರಸುದಾರರಿಗೆ ನೀಡಲಾಯಿತು.

ಬಸ್ ಸೌಲಭ್ಯಕ್ಕೆ ಆಗ್ರಹಿಸಿ ರಸ್ತೆ ತಡೆದ ವಿದ್ಯಾರ್ಥಿಗಳು

ಗಂಟೆಗೂ ಹೆಚ್ಚು ಕಾಲ ಪ್ರಯಾಣ ಸ್ಥಗಿತ, ಪರದಾಟ

ಹೆಚ್.ಡಿ.ಕೋಟೆ, ಜೂ.12– ಸಮರ್ಪಕ ಬಸ್ ಸೌಲಭ್ಯಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳು, ಸೋಮವಾರ ಮೈಸೂರು– ಮಾನಂದವಾಡಿ ಮುಖ್ಯರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ತಾಲೂಕಿನ ಕೋಳಗಲ ಗ್ರಾಮದ ಬಳಿ, ವಿದ್ಯಾರ್ಥಿಗಳಿಗೆ ಮೈಸೂರು ಕಡೆಗೆ ತೆರಳುವ ಬಸ್ಸುಗಳು ನಿಲುಗಡೆ ಕೊಡುತ್ತಿಲ್ಲ ಎಂದು ವಿದ್ಯಾರ್ಥಿಗಳು, ಗ್ರಾಮಸ್ಥರು ಬಸ್ಸುಗಳನ್ನು ತಡೆದು ರಸ್ತೆಯಲ್ಲಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಹೆಚ್.ಡಿ.ಕೋಟೆಯಿಂದ ಮೈಸೂರಿಗೆ ತೆರಳುವ ಸಾರಿಗೆ ಸಂಸ್ಥೆ ಬಸ್‌ಗಳು ಕೋಳಗಾಲ ಗೇಟ್ ಬಳಿ ನಿಲುಗಡೆ ಕೊಡದೇ ಇರುವ ಕಾರಣ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಕೆಲಸಕ್ಕೆ ತೆರಳುವ ಸಾರ್ವ



ಜನಿಕರಿಗೆ ತೊಂದರೆಯಾಗಿದೆ. ಸೂಕ್ತ ಬಸ್ ಸೌಲಭ್ಯ ಕಲ್ಪಿಸುವಂತೆ ಸಾರಿಗೆ ಸಂಸ್ಥೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

ವಿದ್ಯಾರ್ಥಿಗಳು ಮಾತನಾಡಿ ಕೋಳಗಾಲ, ಮಾದಾಪುರ, ಕೆಬೆಲ್ಲೂರು, ಅಡಹಳ್ಳಿ, ಚಿಕ್ಕೂರು, ಹುನಗಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳು ನಿತ್ಯ ಮೈಸೂರಿಗೆ ವಿದ್ಯಾಭ್ಯಾಸಕ್ಕೆ ತೆರಳಲಿದ್ದು, ಹೆಚ್.ಡಿ.ಕೋಟೆ ಹಾಗೂ ಸರಗೂರಿನಿಂದ ಬರುವ ಬಸ್‌ಗಳು ಕೋಳಗಾಲದ ಗೇಟ್ ಬಳಿ ನಿಲ್ಲಿಸುವುದಿಲ್ಲ. ಇದರಿಂದ ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಶಾಲಾ–ಕಾಲೇಜಿಗೆ ತೆರಳಲು ಸಾಧ್ಯವಾಗುತ್ತಿಲ್ಲ ಎಂದರು.

ಡಿಪೋ ಮ್ಯಾನೇಜರ್ ತ್ಯಾಗರಾಜ್ ಸ್ಥಳಕ್ಕೆ ಆಗಮಿಸಿದ ಸಂದರ್ಭದಲ್ಲಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಬೇಕು. ಎಂದು ಪಟ್ಟು ಹಿಡಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಡಿಪೋ ಮ್ಯಾನೇಜರ್ ತ್ಯಾಗರಾಜ್, ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದ ರೀತಿ ಬಸ್ ವ್ಯವಸ್ಥೆ ಮಾಡಿಕೊಡುವುದಾಗಿ ನೀಡಿದ ಭರವಸೆ ಮೇರೆಗೆ ಪ್ರತಿಭಟನೆ ಕೈಬಿಟ್ಟರು.

ಗಂಟೆಗೂ ಹೆಚ್ಚು ಕಾಲ ರಸ್ತೆ ಬಂದು ಮಾಡಿದ್ದರಿಂದ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಇದರಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡು ಪ್ರಯಾಣಿಕರು ಪರದಾಡು ವಂತಾಯಿತು.

ಕೆ.ಆರ್.ನಗರದಲ್ಲೂ ಮಹಿಳೆಯರ ಶಕ್ತಿ ಯೋಜನೆಗೆ ಚಾಲನೆ



ಕೆ.ಆರ್.ನಗರ, ಜೂ.12– ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಜನರಿಗೆ ಉಪಯುಕ್ತವಾದ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು, ಈ ಬಾರಿ ಶಕ್ತಿ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಜಾರಿ ಮಾಡಿದೆ. ಇದನ್ನು ಮಹಿಳೆಯರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಡಿ.ರವಿಶಂಕರ್ ಮನವಿ ಮಾಡಿದರು.

ಪಟ್ಟಣದ ಬಸ್ ನಿಲ್ದಾಣದಲ್ಲಿ ನಡೆದ ಮಹಿಳೆಯರ ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ನಮ್ಮ ಸರ್ಕಾರ ಮಹಿಳಾ ಸಬಲೀಕರಣದತ್ತ ಮೊದಲ ಹೆಜ್ಜೆಯಾಗಿ ಈ ಯೋಜನೆಯನ್ನು ಜಾರಿಗೆ ತಂದಿದೆ. ಮಹಿಳೆಯರು ಅದರಲ್ಲೂ ಗ್ರಾಮೀಣ ಭಾಗದ ಮಹಿಳೆಯರು ಹೆಚ್ಚಾಗಿ ಯೋಜನೆಯ ಲಾಭ ಪಡೆಯಬೇಕು ಎಂದರು.

ಐದು ಗ್ಯಾರಂಟಿಗಳ ಪೈಕಿ ಮೊದಲನೆ ಗ್ಯಾರಂಟಿಯನ್ನು ಜಾರಿ ಮಾಡಲಾಗಿದ್ದು ಜುಲೈ 1 ರಿಂದ ತಲಾ ಹತ್ತು ಕೆ.ಜಿ. ಅಕ್ಕಿ ವಿತರಿಸುವ ಮೂಲಕ 2ನೇ ಗ್ಯಾರಂಟಿಯನ್ನು ಅನುಷ್ಠಾನ ಮಾಡುವುದರ ಜತೆಗೆ ಚುನಾವಣಾ ಪೂರ್ವದಲ್ಲಿ ನೀಡಲಾದ 5 ಗ್ಯಾರಂಟಿಗಳನ್ನು ಈಡೇರಿಸಲು ಸರ್ಕಾರ ಬದ್ಧವಾಗಿದೆ ಎಂದು ಶಾಸಕರು ತಿಳಿಸಿದರು.

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಬಸ್‌ಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಘಟಕ ವ್ಯವಸ್ಥಾಪಕರಿಗೆ ಸೂಚಿಸಿದ ಶಾಸಕರು ಎಲ್ಲಾ ಬಸ್ ನಿಲ್ದಾಣಗಳಲೂ ಶೌಚಾಲಯ ಮತ್ತು ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ತಾಕೀತು ಮಾಡಿದಲ್ಲದೆ ಸಂಸ್ಥೆಯ ನೌಕರರಿಗೆ ಸರ್ಕಾರದಿಂದ ಬರುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಸಕಾಲದಲ್ಲಿ ತಲುಪಿಸಬೇಕು ಎಂದು ತಿಳಿಸಿದರು.

ತಹಸೀಲ್ದಾರ್‌ಗಳಾದ ಸಂತೋಷ್‌ಕುಮಾರ್, ತಿಮ್ಮಪ್ಪ, ಘಟಕ ವ್ಯವಸ್ಥಾಪಕ ಮಹೇಶ್, ಪುರಸಭೆ ಸದಸ್ಯರಾದ ಕೋಳಿಪ್ರಕಾಶ್, ವಸಂತಮ್ಮ ಕೃಷ್ಣೇಗೌಡ, ನಟರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ವಕ್ತಾರ ಸೈಯದ್ ಜಾಬೀರ್, ಮಹಿಳಾ ಘಟಕದ ಅಧ್ಯಕ್ಷರಾದ ಲತಾರವಿ, ರಾಣಿ, ಮುಖಂಡರಾದ ಶಾಂತಿರಾಜ್, ಸವಿತಾಜವರಪ್ಪ, ಜಿ.ಎಸ್.ವೆಂಕಟೇಶ್, ಹೆಚ್.ಟಿ.ಮಂಜುನಾಥ್, ಜಯಣ್ಣ, ಧನಂಜಯ, ಯಶ್ವಂತ್, ಜಿ.ಎಂ. ಹೇಮಂತ್, ಜಿ.ಎಸ್.ಮಂಜುನಾಥ್, ಗಾರೆರವಿ ಹಾಜರಿದ್ದರು.

ಭೇರ್ಯದಲ್ಲಿ ಅವಧಿ ಮುಗಿದರೂ ಖಾಲಿ ಮಾಡದ ವಾಣಿಜ್ಯ ಮಳಿಗೆಗಳಿಗೆ ಬೀಗ



ಭೇರ್ಯ, ಜೂ.12– ಅವಧಿ ಮುಗಿದರೂ ಖಾಲಿ ಮಾಡದ ಭೇರ್ಯ ಗ್ರಾಮ ಪಂಚಾಯಿತಿಗೆ ಸೇರಿದ ವಾಣಿಜ್ಯ ಮಳಿಗೆಗಳಿಗೆ ಪಿಡಿಓ ಮತ್ತು ಗ್ರಾಪಂ ಅಧ್ಯಕ್ಷರ ಸಮ್ಮುಖದಲ್ಲಿ ಬೀಗ ಹಾಕಲಾಯಿತು.

ಈ ಹಿಂದೆ ಗ್ರಾಮ ಪಂಚಾಯಿತಿ ಸಭೆಯಲ್ಲಿ ನಡೆದ ಸದಸ್ಯರ ತೀರ್ಮಾನದಂತೆ ಅವಧಿ ಮುಗಿದರೂ ಖಾಲಿ ಮಾಡದ ಕಾರಣ ವಾಣಿಜ್ಯ ಮಳಿಗೆಗಳಿಗೆ ಬೀಗ ಹಾಕಿದ್ದು, ಮುಂದಿನ ವಿಶೇಷ ಸಭೆಯಲ್ಲಿ ಚರ್ಚಿಸಿ ಕ್ರಮ ವಹಿಸಲಾಗುವುದು ಎಂದು ಪಿಡಿಓ ಕೆ.ಎ.ಮಂಜುನಾಥ್ ತಿಳಿಸಿದರು.

ಮೇ 24 ರಂದು ವಾಣಿಜ್ಯ ಮಳಿಗೆಗಳ ಬಾಡಿಗೆದಾರರಿಗೆ ಮಳಿಗೆ ಖಾಲಿ ಮಾಡುವ ಸಂಬಂಧ ನೋಟಿಸ್ ನೀಡಲಾಗಿತ್ತು ಆದರೆ ಬಾಡಿಗೆದಾರರು ಮತ್ತು ಸದಸ್ಯರಾದ ಶಿವಕುಮಾರ್, ಕುಮಾರ್ ಖಾಲಿ ಮಾಡಲು ಕಾಲಾವಕಾಶ ಕೋರಿದ್ದರು. ಅವರ ಮನವಿಯನ್ನು ಪಿಡಿಓ ಹಾಗೂ ಅಧ್ಯಕ್ಷರು, ಕೆಲ ಸದಸ್ಯರು ತಿರಸ್ಕರಿಸಿ ಬೀಗ ಹಾಕಲು ಮುಂದಾಗ ಬಾಡಿಗೆದಾರರು ಮತ್ತು ಅಧ್ಯಕ್ಷೆ ಜಯಲಕ್ಷ್ಮಿ ಅವರ ಪತಿ ಶಿಕ್ಷಕ ಕೃಷ್ಣೇಗೌಡ ನಡುವೆ ಮಾತಿನ ಚಕಮಕಿ ನಡೆಯಿತು. ಪಿಡಿಓ ತಮ್ಮ ಸಿಬ್ಬಂದಿಗಳೊಂದಿಗೆ ತಾವೇ ತಂದಿದ್ದ ಬೀಗವನ್ನು ವಾಣಿಜ್ಯ ಸಂಕೀರ್ಣ ಎಲ್ಲಾ ಮಳಿಗೆಗಳಿಗೆ ಬೀಗ ಹಾಕಿಸಿದರು.

ಪದ್ಮ ಚಿತ್ರಮಂದಿರ	(ದೂ: 2521923)
ಟಕ್ಕರ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಟಕ್ಕರ್ (ತೆ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಾಡ್‌ಫಾದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ದರ್ಬಾರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೇರ್ ಡೆವಿಲ್ ಮುಸ್ತಾಫಾ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪೋರ್ ತೋಳಿಲ್ (ತ)	4 ಪ್ರದರ್ಶನಗಳು
ಸಂಗಂ	
ಗದಾಯುದ್ಧ (ಕ)	4 ಪ್ರದರ್ಶನಗಳು
ಲಿಡೋ	
ಪಿಎಸ್–2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಪಿಚೈಕ್ಕಾರನ್–2 (ತ)	4 ಪ್ರದರ್ಶನಗಳು
ಪ್ರಭಾ	
ವೀರಂ (ಕ)	4 ಪ್ರದರ್ಶನಗಳು

ಜೂ.17, ಚಿಕ್ಕಹಳ್ಳಿಯಲ್ಲಿ ಉದ್ಯೋಗ ಮೇಳ



ನಂಜನಗೂಡು, ಜೂ.12– ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಹಂಬಲದೊಂದಿಗೆ ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್ಮೆಂಟ್ ಸಂಸ್ಥೆಯ ವತಿಯಿಂದ ಜೂನ್ 17ರ ಶನಿವಾರದಂದು ಮೈಸೂರು ಟಿ.ನರಸೀಪುರ ಮುಖ್ಯ ರಸ್ತೆಯ ಚಿಕ್ಕಹಳ್ಳಿ ಗ್ರಾಮದ ಬಳಿ ಇರುವ ಕಾಲೇಜಿನ ಆವರಣದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದ್ದು ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಕಾಲೇಜಿನ ಪ್ರಾಚಾರ್ಯರಾದ ಪ್ರಭುಸ್ವಾಮಿ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯೋಗ ಮೇಳವು ಬೆಳಿಗ್ಗೆ 9.30 ರಿಂದ 5.30ರ ವರೆಗೆ ನಡೆಯಲಿದ್ದು ಸುಮಾರು 35 ರಿಂದ 50 ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗಿಯಾಗಲಿವೆ. ಸುಮಾರು 600 ಜನರಿಗೆ ಉದ್ಯೋಗವಕಾಶ ಕಲ್ಪಿಸುವ ಅಭಿಲಾಷೆಯನ್ನು ಹೊಂದಲಾಗಿದೆ ಎಂದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಇಂಜಿನಿಯರಿಂಗ್, ಯಾವುದೇ ಪದವಿ ಪೂರೈಸಿದ ಎಲ್ಲರಿಗೂ ತಮ್ಮ ವಿದ್ಯಾಭ್ಯಾಸಕ್ಕೆ ತಕ್ಕಂತೆ ಉದ್ಯೋಗ ಅವಕಾಶ ದೊರಕಲಿದೆ 18 ವರ್ಷ ಮೇಲ್ಪಟ್ಟ ಎಲ್ಲರೂ ಸಹ ಈ ಉದ್ಯೋಗ ಮೇಳದಲ್ಲಿ ಭಾಗಿಯಾಗ ಬಹುದು.

ಸಾರ್ವಜನಿಕರು ಈ ಸದಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಕಾಲೇಜಿನ ಪ್ಲೇಸ್ಮೆಂಟ್ ಅಧಿಕಾರಿ ಪ್ರಭು ಹಾಗೂ ಇನ್ನಿತರರು ಹಾಜರಿದ್ದರು.

ಪಶುಗಳಿಗೆ ಗುಣಮಟ್ಟದ ಆಹಾರ ನೀಡುವಂತೆ ಮನವಿ

ಹನಗೋಡು, ಜೂ.12 – ಪಶುಗಳಿಗೆ ಗುಣಮಟ್ಟ ಆಹಾರ ನೀಡುವುದರಿಂದ ಹೆಚ್ಚಿನ ಹಾಲು ಉತ್ಪಾದನೆ ಮಾಡಬಹುದು ಎಂದು ತೋಟಗಾರಿಕೆ ಇಲಾಖೆ ಹಿರಿಯ ನಿರ್ದೇಶಕಿ ನೇತ್ರಾವತಿ ಅಭಿಪ್ರಾಯಪಟ್ಟರು.

ಬಿಳಿಕೆರೆ ಹೋಬಳಿ ಹುಸೇನಪುರ ರೈತ ಉತ್ಪಾದಕ ಕಂಪನಿ ವತಿಯಿಂದ ನೂತನವಾಗಿ ಕ್ಷೀರಕ್ರಾಂತಿ ಎಂಬ ಪಶು ಆಹಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರ ಬೆನ್ನೆಲುಬಾಗಿರುವ ಪಶುಗಳು ಆರೋಗ್ಯವಾಗಿದ್ದರೆ ರೈತರಿಗೆ ಉಳಿಮೆ ಮಾಡಲು ಮತ್ತು ಹಾಲು ಕರೆಯಲು ಅನುಕೂಲವಾಗಲಿದ್ದು ಪಶುಗಳಿಗೆ ಆಹಾರ ನೀಡುವಾಗ ರೈತರು ಎಚ್ಚರಿಕೆಯಿಂದ ಗುಣಮಟ್ಟದ ಆಹಾರಗಳನ್ನು ನೀಡಿ ನೆಚ್ಚಿನ ಹಾಲನ್ನು ಕರೆದು ಸದೃಢರಾಗಬೇಕು ಎಂದರು.

ಸಮಾರಂಭದಲ್ಲಿ ಅಧ್ಯಕ್ಷ ಪುಟ್ಟರಾಜೇಗೌಡ, ಕಾರ್ಯನಿರ್ವಾಹಣಾಧಿಕಾರಿ ತನುಜ್ ಗೌಡ, ಲೆಕ್ಕ ಸಹಾಯಕ ಶೈನಿ ಹಾಗೂ ನಿರ್ದೇಶಕರು, ಗ್ರಾಮಸ್ಥರು ಹಾಜರಿದ್ದರು.

ಹೈರಿಗೆ ಗ್ರಾಪಂ ಆವರಣದಲ್ಲಿ ಸಭಾಂಗಣ ಉದ್ಘಾಟನೆ

ಹೆಚ್.ಡಿ.ಕೋಟೆ, ಜೂ.12– ತಾಲೂಕಿನ ಹೈರಿಗೆ ಗ್ರಾಮದ ಗ್ರಾಮ ಪಂಚಾಯತಿಯ



ಆವರಣದಲ್ಲಿ ಸುಮಾರು 13 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಸಭಾಂಗಣ ಕಟ್ಟಡವನ್ನು ಗ್ರಾಮ ಪಂಚಾಯತಿ ಅಧ್ಯಕ್ಷ ಎಚ್.ಕೆ. ದಿನೇಶ್ ಉದ್ಘಾಟಿಸಿದರು.

ಉದ್ಘಾಟನೆ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷೆ ಪುಷ್ಪ, ಸದಸ್ಯರುಗಳಾದ ವಿ.ರಾಜೇಶ್ ,ಶಿವಣ್ಣ, ಶ್ರೀಧರ್, ವೆಂಕಟೇಶ್, ಅನಿಲ್ ಕುಮಾರ್, ಶಿವಮಲ್ಲಯ್ಯ, ಶೋಭ, ಗಾಯತ್ರಿ, ಜಯ, ನಿರ್ಮಲ, ಮಂಜುಳ, ವಸಂತ, ತಾಜಾಮಣಿ, ಚನ್ನಮಾದನಾಯಕ, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಗಾಯತ್ರಿ, ಉಪಾಧ್ಯಕ್ಷೆ ಕೆಂಪಮ್ಮ, ಡಿ.ನಾಗರಾಜು ಮುಖಂಡರುಗಳಾದ ಮಲ್ಲೇಶ್, ಶೋಭಾ ನಿರ್ಮಲ, ನಾಗರಾಜು, ಡಿ.ನಾಗರಾಜ, ಕಮಲ, ಸುಕನ್ಯಾ, ಲಕ್ಷ್ಮಿ, ಗ್ರಾಮದ ಮುಖಂಡರು, ಊರಿನ ಯಜಮಾನರು, ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶಿವಕುಮಾರ್, ಕಾರ್ಯದರ್ಶಿ ಸುಂದರಮೂರ್ತಿ, ಸೋಮಶೇಖರ್, ಗ್ರಾಮ ಪಂಚಾಯತಿ ಎಲ್ಲ ಸಿಬ್ಬಂದಿವರ್ಗ ಹಾಜರಿದ್ದರು.

ಅಂಬಲಾರೆಯಲ್ಲಿ ದೊಡ್ಡಮ್ಮ ತಾಯಿ ಜಾತ್ರೆ



ಬೆಟ್ಟದಪುರ, ಜೂ.12– ಬೆಟ್ಟದಪುರ ಸಮೀಪದ ಅಂಬಲಾರ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಶ್ರೀ ದೊಡ್ಡಮ್ಮ ತಾಯಿಯ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಸುಮಾರು ಮೂವತ್ತು ವರ್ಷಗಳ ಬಳಿಕ ಗ್ರಾಮದ ಎಲ್ಲಾ ಜನಾಂಗದವರು ಒಟ್ಟಾಗಿ ಸೇರಿ ತಾಯಿಯ ರಥವನ್ನು ಎಳೆಯುವ ಮೂಲಕ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಶ್ರೀ ದೊಡ್ಡಮ್ಮ ತಾಯಿ ಹಬ್ಬದ ಹಿನ್ನೆಲೆಯಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹಾಗೂ ರಸ್ತೆಗಳಲ್ಲಿ ವಿದ್ಯುತ್ ದೀಪಾಲಂಕಾರಗಳು ಮತ್ತು ಹಸಿರು ತೋರಣಗಳು ಕಂಗೊಳಿಸುತ್ತಿದ್ದವು.

ಹಲವಾರು ವರ್ಷಗಳ ಬಳಿಕ ಗ್ರಾಮದಲ್ಲಿ ದೊಡ್ಡಮ್ಮ ತಾಯಿ ಹಬ್ಬ ಆಯೋಜನೆ ಮಾಡಿದ ಹಿನ್ನೆಲೆ ದೂರದ ಊರುಗಳಿಂದ ಸಂಬಂಧಿಕರು ಆಗಮಿಸಿ ಪೂಜೆ ಸಲ್ಲಿಸುವ ಮೂಲಕ ಭಕ್ತಿ ಸಮರ್ಪಣೆ ಮಾಡಿದರು.

ಮೈಸೂರು–ತಿ.ನರಸೀಪುರ ರಸ್ತೆ 8 ಪಥದ ರಸ್ತೆಯನ್ನಾಗಿ ಮಾಡಿ

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಸ್ವಾಮಿನಾಥ್‌ಗೌಡ ಸಚಿವ ಮಹದೇವಪ್ಪರಿಗೆ ಮನವಿ

ತಿ.ನರಸೀಪುರ, ಜೂ.12– ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರೂ ಆಗಿರುವ ಡಾ.ಹೆಚ್.ಸಿ.ಮಹದೇವಪ್ಪರವರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಕ್ಷೇತ್ರವನ್ನು ಪ್ರವಾಸಿ ತಾಣವಾಗಿ ಮಾಡಬೇಕೆಂದು ತಾಲೂಕು ಮನವಿ ಮಾಡಿರುವ ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಸ್ವಾಮಿನಾಥ್ ಗೌಡ ಮೈಸೂರು–ತಿ.ನರಸೀಪುರ ರಸ್ತೆಯನ್ನು 8 ಪಥದ ರಸ್ತೆಯನ್ನಾಗಿ ಮಾಡುವಂತೆ ಕೋರಿದ್ದಾರೆ.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹದೇವಪ್ಪರವರು 35 ವರ್ಷಗಳ ರಾಜಕೀಯ ಅನುಭವ ಹೊಂದಿದ್ದು, ಹಾಗಾಗಿ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಕೆಲವೊಂದು ಅಭಿವೃದ್ಧಿ ಕಾರ್ಯಗಳ ಅವಶ್ಯಕತೆ ಇದೆ. ನರಸೀಪುರ ಪಟ್ಟಣದಿಂದ ಮೈಸೂ



ರಿಗೆ ತೆರಳುವ ರಸ್ತೆ ಪ್ರಸ್ತುತ ನಾಲ್ಕು ಪಥದ ರಸ್ತೆಯಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ 8 ಪಥದ ರಸ್ತೆಯಾಗಿ ಮಾಡಬೇಕಿದೆ. ಪಟ್ಟಣದ ಪುರಸಭೆ ವ್ಯಾಪ್ತಿಯ ಕಾವೇರಿ–ಕಪಿಲಾ ಜೋಡಿ ರಸ್ತೆ ಲಿಂಕ್ ರಸ್ತೆ ಹಾಗೂ ನಂಜನಗೂಡು ರಸ್ತೆಗಳನ್ನು ಅಗಲೀಕರಣ ಮಾಡಬೇಕೆಂದು ಮನವಿ ಮಾಡಿದರು.

ಸುರಕ್ಷಿತ ಕ್ಷೇತ್ರವೆಂದು ಘೋಷಿಸಲಿ: ತಿರುಮಕೂಡಲು ಕುಂಭಮೇಳ ನಡೆಯುವ ಪವಿತ್ರ ಕ್ಷೇತ್ರವಾಗಿದ್ದು,ಇಲ್ಲಿ ವ್ಯಾಪಕವಾಗಿ ಮರಳು ದಂಧೆ ನಡೆಯುತ್ತಿದೆ.ನೂತನ ಸಚಿವರು ಮರಳು ತುಂಬುವ ಪ್ರಕ್ರಿಯೆಗೆ ತಡೆ ನೀಡಿ ಕ್ಷೇತ್ರವನ್ನು ಸುರಕ್ಷಿತ ಕ್ಷೇತ್ರವೆಂದು ಘೋಷಣೆ ಮಾಡುವುದರ ಜೊತೆಗೆ ಪ್ರವಾಸಿ ತಾಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸ್ವಾಮಿನಾಥ್ ಮನವಿ ಮಾಡಿದರು.

ಕಾಮಗಾರಿ ಪೂರ್ಣಗೊಳಿಸಿ: ಪುರಾಣ ಪ್ರಸಿದ್ಧ ಅಗಸ್ತ್ಯೇಶ್ವರ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ 3 ಕೋಟಿ ರೂ.ಗಳ ಅನುದಾನ ನೀಡಿದ್ದರಾದರೂ, ಬಿಜೆಪಿ 5 ವರ್ಷ ಪೂರೈಸಿದರೂ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಈಗ ಸಿದ್ದರಾಮಯ್ಯನವರೇ ಮತ್ತೆ ಮುಖ್ಯಮಂತ್ರಿಯಾಗಿದ್ದಾರೆ. ಕಾಮಗಾರಿಗೆ ಹಿಡಿದಿರುವ ಗ್ರಹಣಕ್ಕೆ ಮುಕ್ತಿ ಹಾಡಿ ಕಾಮಗಾರಿ ಪೂರ್ಣಗೊಳಿಸಿ ಭಕ್ತಾದಿಗಳಿಗೆ ಅನುಕೂಲ ಕಲ್ಪಿಸಿ ಕೊಡುವಂತೆ ಒತ್ತಾಯಿಸಿದರು.

ಬೈರಾಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಾಗರಾಜು(ಚೀಕಾ), ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಗುತ್ತಿಗೆದಾರ ಬಿಲಿಗೆರೆ ಹುಂಡಿ ಬಸವರಾಜು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಯತೀಂದ್ರ, ಬೋಸ್‌ರಿಗೆ ಸ್ಥಾನಮಾನ ನೀಡಿ!

ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಹಾಗೂ ತಿ.ನರಸೀಪುರ ಕ್ಷೇತ್ರದಲ್ಲಿ ಮಹದೇವಪ್ಪ ಗೆಲುವಿನಲ್ಲಿ ಅವರ ಪುತ್ರರಾದ ಯತೀಂದ್ರ ಹಾಗೂ ಸುನೀಲ್ ಬೋಸ್ ಅವರ ಶ್ರಮ ಹೆಚ್ಚಿದೆ. ಇಬ್ಬರೂ ಕಾರ್ಯಕರ್ತರನ್ನು ಒಗ್ಗೂಡಿಸಿ ಸಂಘಟನೆ ಮಾಡಿ ಐತಿಹಾಸಿಕ ಜಯ ತಂದು ಕೊಟ್ಟಿದ್ದಾರೆ. ಹಾಗಾಗಿ ಯತೀಂದ್ರ ಸಿದ್ದರಾಮಯ್ಯ ಅವರನ್ನು ಎಂಎಲ್‌ಸಿ ಮಾಡಿ ಸಚಿವ ಸ್ಥಾನ ನೀಡಬೇಕು ಹಾಗೂ ಸುನೀಲ್ ಬೋಸ್‌ರಿಗೆ ಚಾಮರಾಜನಗರ ಕ್ಷೇತ್ರದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಡಬೇಕು.

–ಎ.ಜೆ.ವೆಂಕಟೇಶ್, ಬೈರಾಪುರ ಗ್ರಾ.ಪಂ ಮಾಜಿ ಅಧ್ಯಕ್ಷ.

ಹುಣಸೂರು ಬಳಿ ಚಿರತೆ ಪ್ರತ್ಯಕ್ಷ

ಎರಡು ಮೇಕೆಗಳು ಬಲಿ, ಗ್ರಾಮಸ್ಥರಲ್ಲಿ ಆತಂಕ

ಹುಣಸೂರು, ಜೂ.12– ಭಾನುವಾರ ರಾತ್ರಿ ಹುಣಸೂರು ತಾಲೂಕಿನ ಶ್ರವಣನಹಳ್ಳಿ ಗ್ರಾಮದಲ್ಲಿ ಚಿರತೆ ಪ್ರತ್ಯಕ್ಷವಾಗಿದೆ. ಗ್ರಾಮದ ವಾಸಿ ಮಹದೇವಮ್ಮ ಅವರ ಮನೆಯ ಗುಡಿಸಿಲಿನಲ್ಲಿ ಕಟ್ಟಿಹಾಕಿದ್ದ ಎರಡು ಮೇಕೆಗಳನ್ನು ತಿಂದು ಪರಾರಿಯಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.



ಗ್ರಾಮಕ್ಕೆ ನುಗ್ಗಿರುವ ಕೂಡಲೇ ಹಿಡಿಯಬೇಕು. ಅದರ ಸೆರೆಗಾಗಿ ಬೋನ್ ಇರಿಸಿ ಎಂದು ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ರವಿಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಎಂಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ, ಮರದೂರು ಗ್ರಾಪಂ ಸದಸ್ಯ ಕುಮಾರ್, ಮಹದೇವಮ್ಮ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಚಿರತೆ ದಾಳಿಗೆ ಬಲಿಯಾಗಿರುವ ಮಹದೇವಮ್ಮನವರಿಗೆ ಸೇರಿದ 40,000 ಬೆಲೆ ಬಾಳುವ ಮೇಕೆಗಳಿಗೆ ತಕ್ಷಣ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಶಿವಾರ್ಚಕ ಚಂದ್ರಪ್ಪ ನಿಧನ



ಸರಗೂರು, ಜೂ.12– ತಾಲೂಕಿನ ಕುಂದೂರು ಗ್ರಾಮದ ಶಿವಾರ್ಚಕ ಚಂದ್ರಪ್ಪ (48) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಕುಂದೂರು ಗ್ರಾಮದ ಮೃತರ ಜಮೀನಿನಲ್ಲಿ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಡುವಾರಹಳ್ಳಿಯಲ್ಲಿ ಶಾಸಕ ಹರೀಶ್‌ಗೌಡರಿಗೆ ಅದ್ದೂರಿ ಸನ್ಮಾನ

ಮೈಸೂರು, ಜೂ.12(ಸಿಎನ್)– ಚಾಮರಾಜ ವಿಧಾನಸಭಾ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡರನ್ನು ಪಡುವಾರ ಹಳ್ಳಿಯಲ್ಲಿ ಗ್ರಾಮದ ಜನತೆ ಅದ್ದೂರಿಯಾಗಿ ಸನ್ಮಾನಿಸಿದರು.

ಸೋಮವಾರ ಗ್ರಾಮದಲ್ಲಿ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ವೇಳೆ ಶಾಸಕರ ಅಭಿಮಾನಿ ಬಳಗದವರು ಕ್ರೇನ್ ಮೂಲಕ ಬೃಹತ್ ಪೈನಾಪಲ್ ಹಾರ ಹಾಕಿ, ಪಟಾಕಿ ಸಿಡಿಸುವ ಮೂಲಕ ತಮ್ಮ ನೆಚ್ಚಿನ ನಾಯಕನನ್ನು ಆತ್ಮೀಯವಾಗಿ ಬರಮಾಡಿಕೊಂಡರು.

ಪಡುವಾರಹಳ್ಳಿ ಗ್ರಾಮದ ಮಲೆ ಮಹದೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಶಾಸಕರು, ನಂತರ ಗ್ರಾಮ ದೇವತೆ ಜೋಡಿ ಮಾರಮ್ಮ ದೇಗುಲಕ್ಕೂ ಭೇಟಿ ನೀಡಿ ದೇವಿ ದರ್ಶನ ಪಡೆದ ಬಳಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಡುವಾರಹಳ್ಳಿ ಗ್ರಾಮದಲ್ಲಿ ಅಧಿಕ ಮತಗಳನ್ನು ನೀಡಿ ನನ್ನ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದೀರಿ. ಹಾಗಾಗಿ ನಿಮ್ಮ ಋಣ ನನ್ನ ಮೇಲಿದೆ. ಗ್ರಾಮದ ಸರ್ವೋತೋಮುಖ ಅಭಿವೃದ್ಧಿಗೆ ಸರ್ಕಾರದಿಂದ ಅಧಿಕ ಅನುದಾನ ತರುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ನಂತರ ತೆರೆದ ವಾಹನದಲ್ಲಿ ಗ್ರಾಮದ ರಸ್ತೆಗಳಲ್ಲಿ ಮೆರವಣಿಗೆ ಸಾಗಿದ ಶಾಸಕರು, ಚುನಾವಣೆಯಲ್ಲಿ ತಾವು ಗೆಲುವು ಸಾಧಿಸಲು ಸಹಕರಿಸಿದ ಪಡುವಾರಹಳ್ಳಿ ಸಮಸ್ತ ಗ್ರಾಮಸ್ಥರಿಗೆ ಕೃತಜ್ಞತೆ ಸಲ್ಲಿಸಿದರು.

ಈ ವೇಳೆ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಯೋಗೇಶ್, ವಾರ್ಡ್ ಅಧ್ಯಕ್ಷ ಕುಮಾರ್, ಶ್ರೀನಿವಾಸ್, ಮಂಜು, ಶ್ರೀಧರ್, ಪಡುವಾರಹಳ್ಳಿ ಗ್ರಾಮಾಭಿವೃದ್ಧಿ ಸಂಘ ಪದಾಧಿಕಾರಿಗಳು, ಕಾಂಗ್ರೆಸ್ ಸೇವಾದಳದ ಅಧ್ಯಕ್ಷ ಎಂಕೆ.ಭೀಮ, ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ನಿರ್ದೇಶಕ ಗುರುರಾಜ್, ಕೆ.ಜಿ.ಕೊಪ್ಪಲಿನ ಕೆ. ಗಿರೀಶ್‌ಗೌಡ, ಒಂಟಿಕೊಪ್ಪಲು ಜಗ್ಗ, ಸ್ಥಳೀಯರು ಭಾಗಿಯಾಗಿದ್ದರು.



"ಬಿಜೆಪಿಯವರಿಗೆ ಸುಳ್ಳು ಹೇಳೋದು ಬಿಟ್ಟರೆ ಬೇರೆ ಏನು ಕೆಲಸವಿಲ್ಲ, ಅವರ ಅಧಿಕಾರಾವಧಿಯಲ್ಲೇ ವಿದ್ಯುತ್ ದರ ಏರಿಕೆಯಾಗಿದೆ. ಯೂನಿಟ್‌ಗೆ 70 ಪೈಸೆ ಹೆಚ್ಚಳ ಮಾಡಿದ್ದು ಸಹ ಬಿಜೆಪಿಯವರೇ. ಅದನ್ನು ನಮ್ಮ ಫ್ರೀ ವಿದ್ಯುತ್ ಯೋಜನೆಗೆ ತುಲನೆ ಮಾಡಿ ಮಾತನಾಡುತ್ತಿದ್ದಾರೆ. ಇದು ತಪ್ಪು. ನಮ್ಮದು ಬಡವರ ಪರ ಸರ್ಕಾರ, ಬೆಲೆ ಏರಿಕೆ ಸರ್ಕಾರವಲ್ಲ. ಮುಂದಿನ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಜೊತೆಗೆ ರಾಜ್ಯದ ಜನ ಇರಲಿದ್ದಾರೆ. ಈ ಮೂಲಕ ಬಿಜೆಪಿಗೆ ಹಿನ್ನಡೆಯಾಗಲಿದೆ.

–ಕೆ.ಹರೀಶ್ ಗೌಡ, ಶಾಸಕ, ಚಾಮರಾಜ ವಿಧಾನಸಭಾ ಕ್ಷೇತ್ರ

"ಈ ಸಂದರ್ಭ 'ಪೇ ಅಂಡ್ ಪಾರ್ಕ್' ಬಗ್ಗೆ ಪ್ರತಿಕ್ರಿಯಿಸಿದ ಶಾಸಕರು, ನಾನು 'ಪೇ ಅಂಡ್ ಪಾರ್ಕಿಂಗ್' ವ್ಯವಸ್ಥೆಗೆ ವಿರುದ್ಧವಾಗಿದ್ದೇನೆ. ರಸ್ತೆಗಳಲ್ಲಿ ವಾಹನ ನಿಲ್ಲಿಸುವವರು ಸ್ಥಳೀಯ ನಿವಾಸಿಗರು. ನಾನಾ ಪದಾರ್ಥ ಖರೀದಿ ಮಾಡುವ ಉದ್ದೇಶದಿಂದ ಬರುತ್ತಾರೆ. ಕಾಲಹರಣ ಮಾಡಲು ಬರಲ್ಲ. ಅವರಿಗೆ ಪಾರ್ಕಿಂಗ್ ಶುಲ್ಕ ಪಾವತಿ ಮಾಡಿ ಎನ್ನುವುದು ತಪ್ಪಾಗುತ್ತದೆ. ಅಂದು ನಡೆದ ಕೌನ್ಸಿಲ್ ಸಭೆಗೆ ನಾನು ಗೈರಾಗಿದ್ದೆ, ನನ್ನ ಗಮನಕ್ಕೆ ಬಂದಿರಲಿಲ್ಲ. ಪಾಲಿಕೆ ಅವೈಜ್ಞಾನಿಕವಾಗಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೊಳಿಸಲು ಮುಂದಾಗುತ್ತಿದೆ. ಈ ಹಿನ್ನೆಲೆಯಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಮರು ಪರಿಶೀಲನೆ ಮಾಡಬೇಕು ಎಂದು ಆಯುಕ್ತರಿಗೆ ಮನವಿ ಸಲ್ಲಿಸುತ್ತೇನೆ ಎಂದರು. ಬಳಿಕ 'ಶಕ್ತಿ' ಯೋಜನೆ ಬಗ್ಗೆ ಮಾತನಾಡಿ, ನಮ್ಮ ನಾಯಕರು ಚುನಾವಣೆ ಪೂರ್ವದಲ್ಲಿ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ. ಹಂತ ಹಂತವಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಿದ್ದೇವೆ. ಈ ಪೈಕಿ 'ಶಕ್ತಿ' ಯೋಜನೆ ಸಂಪೂರ್ಣ ಯಶಸ್ವಿಯಾಗಿದ್ದು, ಮುಂದಿನ ತಿಂಗಳು 15ರ ಒಳಗೆ ಅನ್ನಭಾಗ್ಯ ಯೋಜನೆ ಜಾರಿಗೆ ಬರಲಿದೆ. ಇತರ ಯೋಜನೆಗಳು ಸಹ ಶೀಘ್ರದಲ್ಲೇ ಜಾರಿಗೆ ಬರಲಿವೆ ಎಂದರು.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಒಳ್ಳೆಯದು; ಪ್ರವಾಸಿ ಸ್ಥಳಗಳಿಗೆ ಹೋಗಿಬನ್ನಿ

● ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಲಹೆ ● ಇದೇ ವೇಳೆ ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆಯೂ ಯೋಚಿಸಿ

ಮೈಸೂರು, ಜೂ.12(ಯಾದವ್)– ಮಹಿಳೆಯರಿಗೆ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಕಲ್ಪಿಸಿರುವುದು ಖುಷಿಯ ವಿಚಾರ. ಆದರೆ ರಾಜ್ಯದ ಹಣಕಾಸು ಪರಿಸ್ಥಿತಿಯನ್ನೂ ಮುಖ್ಯಮಂತ್ರಿಗಳು ಜನರಿಗೆ ತಿಳಿಸಬೇಕು ಎಂದು ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಎಲ್ಲಾ ಮಹಿಳೆಯರಿಗೂ ಉಚಿತ ಬಸ್ ಪ್ರಯಾಣ ಕಲ್ಪಿಸಿರುವುದು ಖುಷಿಯ ವಿಚಾರ. ನಾನೂ ಮಹಿಳೆಯರಲ್ಲಿ ವಿನಂತಿ ಮಾಡುತ್ತೇನೆ. ಮೊದಲ ಬಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸುವ ಅವಕಾಶ ಸಿಕ್ಕಿದೆ, ಎಲ್ಲಾ ದೇವಸ್ಥಾನಗಳು, ಪ್ರವಾಸಿ ಸ್ಥಳಗಳಿಗೆ ಖಂಡಿತ ಹೋಗಿ ಬನ್ನಿ. ಹಾಗೆಯೇ ರಾಜ್ಯದ ಹಣಕಾಸು ಸ್ಥಿತಿಯನ್ನೂ ಜನರಿಗೆ ತಿಳಿಸುವಂತೆ ಆಗ್ರಹಿಸುತ್ತೇನೆ ಎಂದರು.

ಐದು ಗ್ಯಾರಂಟಿ ಯೋಜನೆಗಳಿಗೂ ಹಣಕಾಸಿನ ಹೊಂದಾಣಿಕೆ ಮಾಡಿಕೊಳ್ಳಬೇಕಿದೆ. ಕರ್ನಾಟಕ ರಾಜ್ಯದ ಬಜೆಟ್ ಎಷ್ಟು, ಈ ಉಚಿತ ಯೋಜನೆಗಳಿಗೆ ಎಷ್ಟು ಹಣ ಬೇಕಾಗುತ್ತದೆ, ನಮ್ಮ ರಾಜ್ಯದ ಒಟ್ಟು ಸಾಲ ಎಷ್ಟು, ಬಡ್ಡಿಯ ಮೊತ್ತವೆಷ್ಟು, ಇನ್ನೆಷ್ಟು ಸಾಲ ತರಬೇಕಾಗುತ್ತದೆ. ಹೀಗೆ ಹಣಕಾಸಿನ ಎಲ್ಲಾ ಸ್ಥಿತಿಗತಿಯನ್ನು ರಾಜ್ಯದ ಜನತೆಗೆ ತಿಳಿಸುವ ದೊಡ್ಡ ಜವಾಬ್ದಾರಿ ಹಣಕಾಸು ಸಚಿವರು ಆದ ಮುಖ್ಯಮಂತ್ರಿಗಳ ಮೇಲಿದೆ ಎಂದು ಹೇಳಿದರು. ಇದೆಲ್ಲವನ್ನೂ ಸರಿದೂಗಿಸಿಕೊಂಡು ಅವರು ಈ ಯೋಜನೆಗಳನ್ನು ಜಾರಿ ಮಾಡದಿದ್ದರೆ ಈ ರಾಜ್ಯ ಬಹಳ ತೊಂದರೆಗೆ ಒಳಗಾಗುತ್ತದೆ. ನೆರೆಹೊರೆಯ ರಾಜ್ಯಗಳ ಪರಿಸ್ಥಿತಿ ನೋಡಿದ್ದೇವೆ. ಈ ರೀತಿ ಉಚಿತ ಕಾರ್ಯಕ್ರಮಗಳನ್ನು ನೀಡಿದ ರಾಜ್ಯಗಳು ಸಂಕಷ್ಟದಲ್ಲಿವೆ. ಆಂಧ್ರ ಪ್ರದೇಶದಲ್ಲಿ ಸರ್ಕಾರಿ ನೌಕರರಿಗೆ ಸಂಬಳ ನೀಡುವುದಕ್ಕೂ ಕಷ್ಟವಾಗಿರುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಎಚ್ಚರಿಕೆ ನೀಡಿದರು.

ನನಗೆ ಯಾವ ಸ್ಥಾನವೂ ಬೇಡ

ಬಿಜೆಪಿ ಕರ್ನಾಟಕ ರಾಜ್ಯಾಧ್ಯಕ್ಷ ಸ್ಥಾನಕ್ಕೆ ತಮ್ಮ ಹೆಸರು ಕೇಳಿಬರುತ್ತಿದೆ ಎಂದಾಕ್ಷಣ ನನಗೆ ಯಾವ ಸ್ಥಾನವೂ ಬೇಡ, ನಾನು ಮಂತ್ರಿಯಾಗಿದ್ದೇನೆ, ಆರಾಮಾಗಿದ್ದೇನೆ ಎಂದು ಅಲ್ಲಿಂದ ಹೊರಟರು. ವಿರೋಧ ಪಕ್ಷದ ನಾಯಕರ ಆಯ್ಕೆ ಬಗ್ಗೆಯೂ ಅವರು ಪ್ರತಿಕ್ರಿಯಿಸಲಿಲ್ಲ.

ಎಸ್‌ಬಿಐ, ಕೆನರಾ, ರೈಲ್ವೆ ಮತ್ತು ಪೋಸ್ಟಲ್ ಇಲಾಖೆ ಸಹಯೋಗದಲ್ಲಿ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಆವರಣದಲ್ಲಿ ಮಂಗಳವಾರ ರೋಜ್‌ಗಾರ್ ಮೇಳ ಹಮ್ಮಿಕೊಂಡಿದ್ದು, ಈ ಭಾಗದ 252 ವಿದ್ಯಾವಂತ ಯುವಕ–ಯುವತಿಯರಿಗೆ ಉದ್ಯೋಗಾವಕಾಶ ಲಭಿಸಲಿದೆ. ಈ ಕಾರ್ಯಕ್ರಮ ದೇಶಾದ್ಯಂತ ನಡೆಯುತ್ತಿದ್ದು, ನಾನು ಮೈಸೂರಿನಲ್ಲಿ ಭಾಗಿಯಾಗಲು ಬಂದಿದ್ದೇನೆ ಎಂದು ತಿಳಿಸಿದರು.



ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೋಮವಾರ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿಯ ದರ್ಶನ ಪಡೆದರು.

ಜಿಲ್ಲಾ ಪತ್ರಕರ್ತರ ಸಂಘದ ದತ್ತಿ ಪ್ರಶಸ್ತಿಗೆ ಆಯ್ಕೆ

ಮೈಸೂರು,ಜೂ.12–ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ದಲ್ಲಿ ಹಿರಿಯ ಪತ್ರಕರ್ತ ಕೆ.ವಿ.ಶ್ರೀನಿವಾಸನ್ (ಬ್ರದರ್) ಅವರು ಸ್ಥಾಪಿಸಿರುವ ನಾಲ್ಕು ದತ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮುದ್ರಣ ಮಾಧ್ಯಮ ವಿಭಾಗದಿಂದ ಮಹಾತ್ಮ ಗಾಂಧಿ ಪ್ರಶಸ್ತಿಗೆ ಆರ್.ಸುವರ್ಣ (ನಗರ ಬೆಳಕು), ಛಾಯಾಗ್ರಾಹಕ ವಿಭಾಗದಿಂದ ಜಾನಕಮ್ಮ ವೆಂಕಟಪ್ಪಗೌಡ ಪ್ರಶಸ್ತಿಗೆ ಎಂ.ಎ.ಶ್ರೀರಾಮ್ (ದಿ ಹಿಂದೂ), ಗ್ರಾಮಾಂತರ ವಿಭಾಗದಿಂದ ಕೆ.ವಿ.ಶ್ರೀನಿವಾಸನ್ ಪ್ರಶಸ್ತಿಗೆ ಎಸ್. ಮಂಜುನಾಥ್ (ಬೀಚನಹಳ್ಳಿ ಮಂಜು), ವಿದ್ಯುನ್ಮಾನ ವಿಭಾಗದಿಂದ ಜೆ.ಪಿ.ಸ್ಮಾರಕ ಮಾಧ್ಯಮ ಪ್ರಶಸ್ತಿಗೆ ಬಾಪು ಲಿಂಗರಾಜ್ ಅರಸ್ (ಕಸ್ತೂರಿ ಟಿವಿ) ಆಯ್ಕೆಯಾಗಿದ್ದಾರೆ.

ಟ್ರಿಣ್ ಟ್ರಿಣ್ ಸೇವೆಗೆ ಹೊಸ ಸ್ವರೂಪ; ಶೀಘ್ರ ಪುನಾರಂಭ

48 ಹೆಚ್ಚುವರಿ ಸೈಕಲ್ ನಿಲುಗಡೆ ಕೇಂದ್ರ ಸ್ಥಾಪನೆಗೆ ಸ್ಥಳ ಗುರುತಿಸುವ ಪ್ರಕ್ರಿಯೆ



ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ ಪಕ್ಕದಲ್ಲಿರುವ ಟ್ರಿಣ್ ಟ್ರಿಣ್ ಸೈಕಲ್ ಡಾಕಿಂಗ್ ಸ್ಟೇಷನ್‌ನಲ್ಲಿ ಹೊಸ ಕಂಪನಿಯ ಸೈಕಲ್‌ಗಳು ಸಜ್ಜುಗೊಂಡಿರುವುದು.

ಮೈಸೂರು,ಜೂ.12(ಪಿಎಂ)– ಮೈಸೂರಿನ ಟ್ರಿಣ್ ಟ್ರಿಣ್ ಸೈಕಲ್ ಸವಾರಿಯ ಸೇವೆ ಹೊಸ ಸ್ವರೂಪದೊಂದಿಗೆ ಶೀಘ್ರ ಪುನಾರಂಭಗೊಳ್ಳಲಿದೆ. ಸೈಕಲ್ ಸೇವೆ ಒದಗಿಸಲು ಹೊಸದಾಗಿ ಟೆಂಡರ್ ಪಡೆದಿರುವ ಗುಜರಾತ್ ಮೂಲದ ಕಂಪನಿ ಈಗಿರುವ 52 ಡಾಕಿಂಗ್ ಸ್ಟೇಷನ್‌ನಲ್ಲಿ ಸೈಕಲ್‌ಗಳನ್ನು ಸಜ್ಜುಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ.

6 ವರ್ಷ ಪೂರೈಸಿರುವ ಟ್ರಿಣ್ ಟ್ರಿಣ್ ಸೈಕಲ್ ಸೇವೆಯು, ಹೊಸ ವ್ಯವಸ್ಥೆಯ ಸಿದ್ಧತೆಗಾಗಿ ತಾತ್ಕಾಲಿಕವಾಗಿ ಸ್ಥಗಿತವಾಗಿದೆ. ಅತ್ಯಾಧುನಿಕ ಪೆಡಲ್ ಅಸಿಸ್ಟ್ ಸೌಲಭ್ಯ ಹೊಂದಿರುವ ಸಾವಿರ ಬೈಸಿಕಲ್‌ಗಳೊಂದಿಗೆ ಸೇವೆ ಶೀಘ್ರ ಲಭ್ಯವಾಗಲಿದೆ. ಟ್ರಿಣ್ ಟ್ರಿಣ್ ಸೇವೆಗೆಂದು ಮೈಸೂರು ನಗರದಲ್ಲಿ 52 ವಿನಿಯೋಗ ಸೇವಾ ಕೇಂದ್ರಗಳಿವೆ (ಡಾಕಿಂಗ್ ಸ್ಟೇಷನ್/ ಸೈಕಲ್ ನಿಲ್ದಾಣಗಳು). ಇವುಗಳ ಜೊತೆಗೆ ಇನ್ನು 48 ಡಾಕಿಂಗ್ ಸ್ಟೇಷನ್ ಸಜ್ಜುಗೊಳಿಸಲು ನಗರದಲ್ಲಿ ಸ್ಥಳ ಗುರುತಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

2017ರ ಜೂ.4ರಂದು ಮೈಸೂರಿನಲ್ಲಿ ಸಾರ್ವಜನಿಕ ಸೈಕಲ್ ವಿನಿಯೋಗ (ಪಿಬಿಎಸ್) ವ್ಯವಸ್ಥೆ ಚಾಲನೆಗೆ ಬಂದಿತು. ಇದೇ ಜೂ.4ಕ್ಕೆ 6 ವರ್ಷಗಳನ್ನು ಈ ವ್ಯವಸ್ಥೆ ಪೂರ್ಣಗೊಳಿಸಿದೆ. ನಗರ ಭೂ ಸಾರಿಗೆ ನಿರ್ದೇಶನಾಲಯದ ಸಹಯೋಗದೊಂದಿಗೆ ಈ ವ್ಯವಸ್ಥೆ ಅನುಷ್ಠಾನಗೊಳಿಸಿದ ಮೈಸೂರು ಮಹಾನಗರ ಪಾಲಿಕೆ, ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ಮೈಸೂರು ಮೂಲ ಗ್ರೀನ್ ವ್ಹೀಲ್ ರೈಡ್ ಕಂಪನಿಗೆ ಟೆಂಡರ್ ಮೂಲಕ ನೀಡಿತ್ತು. ಈ ಕಂಪನಿಯು 30 ಗೇರ್ ಸೈಕಲ್‌ಗಳು ಸೇರಿದಂತೆ ಒಟ್ಟು 450 ಸೈಕಲ್‌ಗಳೊಂದಿಗೆ ಸೇವೆ ನೀಡಿತ್ತು. ಇದೀಗ ಇದರ ಸೇವಾವಧಿ ಪೂರ್ಣಗೊಂಡಿದೆ.

ಈ ಹಿನ್ನೆಲೆಯಲ್ಲಿ ಗುಜರಾತ್ ಮೂಲದ ಗ್ರೀನ್ ಪೀಡಿಯಾ ಬೈಕ್ ಶೇರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹೊಸದಾಗಿ ಟೆಂಟರ್ ಆಗಿದೆ. ಐದು ವರ್ಷಗಳ ಅವಧಿಗೆ ಸೈಕಲ್‌ಗಳ ನಿರ್ವಹಣೆ ಹಾಗೂ ಕಾರ್ಯಾಚರಣೆ ಸೇರಿದಂತೆ 4 ಕೋಟಿ ರೂ. ವೆಚ್ಚದಲ್ಲಿ ಗ್ರೀನ್ ಪೀಡಿಯಾ ಬೈಕ್ ಶೇರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಟೆಂಡರ್ ಆಗಿದೆ.

2023ರ ಮಾ.31ರಿಂದ ಟ್ರಿಣ್ ಟ್ರಿಣ್ ಸೇವೆ ತಾತ್ಕಾಲಿಕವಾಗಿ ಸ್ಥಗಿತವಾಗಿತ್ತು. ಹೊಸ ವ್ಯವಸ್ಥೆ ಆರಂಭಕ್ಕೆ ಸೈಕಲ್ ಪ್ರಿಯರು ಕಾತರದಿಂದ ಕಾದಿದ್ದಾರೆ. ಗ್ರೀನ್ ಪೀಡಿಯಾ ಬೈಕ್ ಶೇರ್ ಕಂಪನಿ ಈಗಾಗಲೇ ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿ ತನ್ನ ಕಚೇರಿ ಹಾಗೂ ಸೈಕಲ್ ವರ್ಕ್‌ಶಾಪ್ ಆರಂಭಿಸಿ, ಸೈಕಲ್ ಸೇವೆ ಒದಗಿಸುವ ನಿಟ್ಟಿನಲ್ಲಿ ಸಜ್ಜುಗೊಂಡಿದೆ.

"ಟ್ರಿಣ್ ಟ್ರಿಣ್ ಹೊಸ ವ್ಯವಸ್ಥೆ ಉದ್ಘಾಟನೆಗೆ ಎಲ್ಲವೂ ಸಿದ್ಧವಾಗಿದೆ. ಮುಂದಿನ ವಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ಉದ್ಘಾಟನೆಗೆ ದಿನಾಂಕ ನಿಗದಿಪಡಿಸಲಾಗುವುದು. ಪ್ರತ್ಯೇಕ ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣಕ್ಕೆ ವಿಧಾನಸಭಾ ಚುನಾವಣಾ ಪೂರ್ವದಲ್ಲೇ ಕಾರ್ಯಾದೇಶ ಆಗಿದ್ದು, ಇದಕ್ಕೂ ಅತಿ ಶೀಘ್ರದಲ್ಲಿ ಚಾಲನೆ ದೊರೆಯಲಿದೆ.

–ಜಿ.ಲಕ್ಷ್ಮೀಕಾಂತ್‌ರೆಡ್ಡಿ, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ.

ಸೈಕಲ್ ಪಥ ನಿರ್ಮಾಣಕ್ಕೂ ಶೀಘ್ರ ಚಾಲನೆ: ಟ್ರಿಣ್ ಟ್ರಿಣ್ ಜೊತೆಗೆ ಎಲ್ಲಾ ಸೈಕಲ್ ಸವಾರರಿಗೆ ಮೈಸೂರು ನಗರದಲ್ಲಿ ಪ್ರತ್ಯೇಕ ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣಕ್ಕೂ ಶೀಘ್ರ ಚಾಲನೆ ದೊರೆಯಲಿದೆ. ನಗರದ ಹಲವು ರಸ್ತೆಗಳಲ್ಲಿ ಪ್ರತ್ಯೇಕ ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣ ಯೋಜನೆ ಸಂಬಂಧ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಕಾರ್ಯಾದೇಶವೂ ಆಗಿದ್ದು, ಮೊದಲ ಹಂತದಲ್ಲಿ ವಿವಿಧ ರಸ್ತೆಗಳಲ್ಲಿ ಒಟ್ಟು 8.5 ಕಿ.ಮೀ. ಪಥ ನಿರ್ಮಾಣ ಕಾಮಗಾರಿ ಚಾಲನೆ ಪಡೆದುಕೊಳ್ಳಲಿದೆ.



ಮೈಸೂರಿನ ಚಾಮುಂಡೇಶ್ವರಿ ರೈಲ್ವೆ ನೌಕರರ ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣಗೊಂಡ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ ಜೂ.12 (ಸೋಮವಾರ) ರಂದು ಲೋಕಾರ್ಪಣೆಗೊಂಡಿತು. ಈ ವೇಳೆ ಚಾಮುಂಡೇಶ್ವರಿ ಭಕ್ತ ಮಂಡಳಿ ಟ್ರಸ್ಟ್ ಅಧ್ಯಕ್ಷ, ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

'ಕೇಬಲ್' ತುಂಡರಿಸದಂತೆ ಪಾಲಿಕೆಗೆ ಮನವಿ

ಮೈಸೂರು, ಜೂ. 12(ಸಿಎನ್)–ಮೈಸೂರು ಮಹಾನಗರ ಪಾಲಿಕೆಯ ವಿದ್ಯುತ್ ಕಂಬಗಳಿಂದ ಕೇಬಲ್ ತೆರವುಗೊಳಿಸುವ ಕಾರ್ಯಾಚರಣೆ ಸ್ಥಗಿತಗೊಳಿಸಬೇಕೆಂದು ಮೇಯರ್ ಶಿವಕುಮಾರ್ ಅವರಿಗೆ ಮೈಸೂರು ಕೇಬಲ್ ಟಿವಿ ಅಸೋಸಿಯೇಷನ್ ಸದಸ್ಯರು ಮನವಿ ಸಲ್ಲಿಸಿದ್ದಾರೆ.

ನಗರದ ಜೆಎಲ್‌ಬಿ ರಸ್ತೆಯ ಪಾಲಿಕೆ ಕಚೇರಿಗೆ ಭೇಟಿ ನೀಡಿದ ಅಸೋಸಿಯೇಷನ್ ಸದಸ್ಯರು, ಕೇಬಲ್ ಟಿವಿ ವೈರ್‌ಗಳನ್ನು ಕತ್ತರಿಸದಂತೆ ಮನವಿ ಮಾಡಿದರು.

ಈ ಬಗ್ಗೆ ಸ್ಪಷ್ಟನೆ ಕೊಟ್ಟ ಮೇಯರ್ ಶಿವಕುಮಾರ್, ತಪ್ಪು ಗ್ರಹಿಕೆಯಿಂದ ಕೇಬಲ್‌ಗಳನ್ನು ತುಂಡರಿಸಲಾಗುತ್ತಿದೆ. ತಕ್ಷಣವೇ ಇದನ್ನು ನಿಲ್ಲಿಸಲು ಆದೇಶಿಸಿದ್ದೇನೆ. ದೂರವಾಣಿ ಕೇಬಲ್‌ಗಳನ್ನು ನೆಲದಡಿಯಲ್ಲಿ ಅಳವಡಿಸಲು ಸೂಚಿಸಿದ್ದೆ, ಆದರೆ ಕೆಲವು ದೂರವಾಣಿ ಸಂಸ್ಥೆಗಳು ಅದನ್ನು ನಿರ್ಲಕ್ಷಿಸಿದ್ದವು. ಹಾಗಾಗಿ ದೂರವಾಣಿ ಕೇಬಲ್‌ಗಳನ್ನು ಕಟ್ ಮಾಡಲು ಮಾತ್ರವೇ ನಾವು ಹೇಳಿದ್ದೆವು. ಇದನ್ನು ನಮ್ಮ ಸಿಬ್ಬಂದಿ ತಪ್ಪಾಗಿ ಅರ್ಥೈಸಿಕೊಂಡು ಕೇಬಲ್ ವೈರ್ ಕಟ್ ಮಾಡಿದ್ದಾರೆ. ಇನ್ನು ಮುಂದೆ ಈ ತಪ್ಪು ಮರುಕಳಿಸುವುದಿಲ್ಲ ಎಂದು ಭರವಸೆ ನೀಡಿದರು. ಬಳಿಕ ಮಾಧ್ಯಮಗಳಿಗೆ ಅಸೋಸಿಯೇಷನ್ ಅಧ್ಯಕ್ಷ ಮೋಹನ್ ಕುಮಾರ್ ಗೌಡ ಪ್ರತಿಕ್ರಿಯಿಸಿ, ಪಾಲಿಕೆಯ ಕಾರ್ಯಾಚರಣೆ ಕೇಬಲ್ ಟಿವಿ ಆಪರೇಟರ್‌ಗಳಲ್ಲಿ ಹತಾಶೆಯನ್ನು ಉಂಟುಮಾಡಿತ್ತು. ಪಾಲಿಕೆ ಹಾಗೂ ಕೆಇಬಿ ಜಗಳದಿಂದ ಕೇಬಲ್ ಆಪರೇಟರ್‌ಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು ಎಂಬಾಂತಾಗಿದೆ. ನಾವು ಮನವಿ ಕೊಟ್ಟ ನಂತರ ಮೇಯರ್ ಅವರು ಸ್ಪಂದಿಸಿದ್ದಾರೆ ಎಂದರು.



ಪಾಲಿಕೆಯಿಂದ ಇದೇ ರೀತಿ ಸಮಸ್ಯೆ ಉಂಟಾದರೆ ನಾವು ಸಹ ನಮ್ಮ ದಾರಿ ನೋಡಿಕೊಳ್ಳಬೇಕಾಗುತ್ತದೆ. ಇನ್ನೂ ಕೆಲವೇ ತಿಂಗಳುಗಳಲ್ಲಿ ಪಾಲಿಕೆ ಚುನಾವಣೆ ಬರಲಿದೆ. ಆಗ ನಮ್ಮ ಶಕ್ತಿ ಪ್ರದರ್ಶನ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಈ ವೇಳೆ ಹೆಬ್ಬಾಳು ಮಂಜು ಸೇರಿದಂತೆ ಇತರೆ ಕೇಬಲ್ ಅಪರೇಟರ್‌ಗಳು ಇದ್ದರು.

IN THE COURT OF THE HON'BLE III Addl SENIOR CIVIL JUDGE AND CJM AT MYSURU

O.S. No.208 OF 2020

BETWEEN:
The South Indian Bank Ltd., Mysore Main Branch Represented by Chief Manager **Sri Kurian Alex, aged 39 years S/o Alex Kurian,** ....**PLAINTIFF**

And

1). **Deepa George, aged 41 years, W/o. Saji PV,** Residing at No. 110, JSS Doctors Quarters, Hosamata Road, Mysore - 570004.
2). **Mr Saji P V aged 44 years, S/o. Varghese,** Residing at No. 110, JSS Doctors Quarters, Hosamata Road, Mysore - 570004.
3). **Mr George C (died) S/o. Cherian** ....**DEFENDANTS**

SUMMONS FOR SERVICE TO THE DEFENDANTS BY PAPER PUBLICATION UNDER ORDER V RULE 20 OF THE CODE OF CIVIL PROCEDURE, 1908

Whereas, the Plaintiff has instituted the above Suit against the Defendant for a recovery of the sum of **Rs. 8,43,457/- (Rupees Eight lakhs Forty three Thousand Four Hundred Fifty seven only)** with further interest @ 13.20% p.a compounded monthly from 04.12.2019 till the date of realization and for other consequential reliefs before the Learned Hon'ble III Addl Senior Civil Judge and CJM at Mysore. You are hereby summoned to appear in this Court in person before the Hon'ble III Addl Senior Civil Judge and CJM at Mysore. on **06.07.2023 at 11.00 A.M.,** to answer the same, failing which the suit will be disposed of Ex-parte.
Giving under my hand and seal of this Court, on **01.06.2023.**

By Order of the Court
Sd/- Asst. Registrar I/c,
Principal Senior Civil Judge and CJM

Advocate for Plaintiff
Sri Narayana Shenoy, Indilegal, Advocates, B-010, Ground Floor, Mittal Tower, M.G. Road, Bangalore - 560001,Mob : 7090200100, Email : Indilegal@gmail.com

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಈ ಕೆಳಗೆ ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು–570026, ಬೋಗಾದಿ–ಗದ್ದಿಗೆ ರಸ್ತೆ, ಮಾದಗಳ್ಳಿ ಗ್ರಾಮ, ಸಮತವುಡ್ಸ್, ನಂ.57/2, ಮನೆ ನಂ.7 ರಲ್ಲಿ ವಾಸವಾಗಿರುವ ಶ್ರೀ ಪಿ.ಜೆ. ವಿಶ್ವನಾಥ ರಾವ್ ರವರ ಮಗ ಸುಮಾರು 53 ವರ್ಷ ವಯಸ್ಸುಳ್ಳ ಶ್ರೀ ಅಶ್ವಥ್. ವಿ.ಪತಂಗೆ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಹಕ್ಕಾಗಲಿ, ಹಿತಾಸಕ್ತಿಯಾಗಲಿ, ಉತ್ತರಾಧಿಕಾರದ ಹಕ್ಕಾಗಲಿ ಇದ್ದ ಪಕ್ಷದಲ್ಲಿ ಈ ಲಗಾಯ್ತು 3 ದಿನಗಳ ಒಳಗೆ ಈ ಕೆಳಗೆ ನಮೂದಿಸಿರುವ ವಕೀಲರ ಕಛೇರಿಗೆ ಭೇಟಿ ನೀಡಿ, ದಾಖಲೆಗಳನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾವುದೇ ತಂಟೆ ತಕರಾರು ಇಲ್ಲವೆಂದು ಭಾವಿಸಿ, ನಮ್ಮ ಕಕ್ಷಿದಾರರ ಹೆಸರಿಗೆ ನೋಂದಾಯಿತ ಕ್ರಯಪತ್ರವನ್ನು ನೋಂದಾಯಿಸಿಕೊಳ್ಳುವವರಿರುತ್ತಾರೆ.

ಷೆಡ್ಯೂಲ್: ಹೆಚ್.ಡಿ.ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಕಲಕೊಡು ಗ್ರಾಮದಲ್ಲಿರುವ ಸರ್ವೆ ನಂ. 63/2 ರ ವಿಸ್ತೀರ್ಣ 2 ಎಕರೆ 15 ಗುಂಟೆಗೆ ಜಮೀನಿನ ಪೂರ್ತಾ ಸ್ವತ್ತು ಮತ್ತು ಇದಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸರ್ವೆ ನಂ. 47 ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ.63/1 ರ ಜಮೀನು.

ಸಹಿ/– ಕೆ. ಟಿ. ಸುರೇಶ, ವಕೀಲರು, ಕೆಎಆರ್ 953/1993, ನಂ.1206/ಎ, ಸಿಹೆಚ್ 31/1ಎ, 2ನೇ ಮಹಡಿ, ನ್ಯೂ ಕಾಂತರಾಜ ಅರಸ್ ರಸ್ತೆ, ಬಲ್ಲಾಳ್ ಸರ್ಕಲ್ ಹತ್ತಿರ, ಶ್ರೀರಾಮಮಂದಿರ ಎದುರು, ಮೈಸೂರು–570005.
ಮೊ: 9448787351

ದಿನಾಂಕ: 12–06–2023

ಹೆಸರು ಬದಲಾವಣೆ

ಪುಷ್ಪ ಶೆಟ್ಟಿ, ನಂ. 3–9, ರಾಗಿಹಕ್ಲು ರಸ್ತೆ, ಬೈಂದೂರು, ಹೇರೂರು ಹೆಬ್ಬಾಗಿಲು ಮನೆ, ಹೇರೂರು, ರಾಗಿಹಕ್ಲು, ಉಡುಪಿ–576224 ರಲ್ಲಿ ವಾಸವಾಗಿದ್ದು, ನನ್ನ ಹೆಸರನ್ನು ಪುಷ್ಪ ಶೆಟ್ಟಿ ಯಿಂದ ಸಿಂಗಾರಿ ಶೆಟ್ಟಿ ಅಲಿಯಾಸ್ ಪುಷ್ಪ ಶೆಟ್ಟಿ ಎಂದು ನೋಟರಿ ಶ್ರೀಮತಿ ಮಣಿಮಾಲ ಎನ್.ಎಸ್. ರವರ ಎದುರು ದಿನಾಂಕ 12–6–2023 ರಂದು ಬದಲಾಯಿಸಿಕೊಂಡಿರುತ್ತೇನೆ.

ಸಹಿ/– ಸಿಂಗಾರಿ ಶೆಟ್ಟಿ ಅಲಿಯಾಸ್ ಪುಷ್ಪ ಶೆಟ್ಟಿ

JSS Academy of Higher Education & Research
(Deemed to be University)
Accredited "A+" Grade by NAAC

JSS ACADEMY OF HIGHER EDUCATION & RESEARCH (DEEMED TO BE UNIVERSITY) MYSURU

Date: 12.06.2023

EXPRESSION OF INTEREST FOR PROVIDING CANTEEN SERVICES

JSS Academy of Higher Education & Research seeks Expression of Interest from reputed canteen contractors / hoteliers / caterers who have registered with Food Safety and Standards Authority of India (FSSAI) and having minimum 5 years experience in this field, to run the canteen in PG Residential Hostel at JSS Hospital Campus, MG Road, Mysuru. The contractors must procure the kitchen equipments, utensils and furniture on their own.

Spot Inspection can be done on any working day between 11.00 AM to 5.00 PM before **26-06-2023.**

Last date for submission of proposal is 07-07-2023.

For spot inspection and other details please contact: 96866 77216

Sd/- REGISTRAR